ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ

ಬಿಡಿ ಪ್ರತಿ
ಂದು ರೂಪಾಯಿ

ವಾರ್ಷಿಕ ಚಂದಾ
ಹನ್ನೆರಡು ರೂಪಾಯಿ

ಈ ಸಂಚಿಕೆಯಲ್ಲಿ ಏನಿದೆ?

ಮುಖ ಪುಟ : ಕಲೆಯು ಕುಂಚದಲ್ಲಿ ಸೆರೆ ಸಿಕ್ಕ ಪರಿಸರ
ಕಲೆ: ಶಿವಲಿಂಗಪ್ಪ. ಅಖಿಲ ಭಾರತ ಕಲಾಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದ ಕೃತಿ

ಕಲ್ಯಾಣ ಕಿರಣ

ಬಸವ ಶಕೆ ೮೩೨

ಸಂಪುಟ : ೪ ಜೂನ್ ೧೯೭೮ ಸಂಚಿಕೆ : ೨

ದೇವಚರಣಕ್ಕೆ

ನುಡಿ-ನೈವೇದ್ಯ

ಯಾವುದಕೆ ನಾನಿನಗೆ ಋಣಿಯಾಗಿರಲಿ ದೇವಾ ?
ಯಾವ ಎಣಿಕೆಗು ಸಿಗದ ಅತುಳ ಸಂಪದವಿತ್ತಿರಲು !
ಜೀವಜಂತುಗಳು ಮೊಳೆದೋರಲಿಕ್ಕೆ
ಈ ಇಳೆಯ ನೀನಿತ್ತುದಕೆ, ನಾ ಋಣಿಯಾಗಿರಲೇ ? ಮೇಣ್
ಎನ್ನ ಜೀವವ ಈ ಇಳೆಗೆ ತಂದುದಕೊ ?
ಕಣ್ಗಳಿಗೆ ತಂಪೀವ ಮನಕ್ಕೆ ಮುದವನು ಕೊಡುವ
ಚೆಲುವಿನಾ ರಸ ಬುಗ್ಗೆ ಸೃಷ್ಟಿಯನು ಗೈದುದಕೊ ? ಮೇಣ್
ಈ ಚೆಲ್ವ ಸವಿಯಲಿಕೆ ಪರಮ ಸಾಧನವಾದ
ದೃಶ್ಯ ತರಂಗಗಳ ಸ್ವಾಗತಿಪ ಕಣ್ಗಳಿತ್ತುದಕೊ ?
ಅನಾದಿಗಾಯಕ ನೀನು ನಿನ್ನ ಪ್ರತಿನಿಧಿ ಪರಪುಟ್ಟವನು
ಇನಿಗಾನ ಉಲಿಯಲು ಮಾಮರದೊಳಿಟ್ಟುದಕೊ ? ಮೇಣ್
ಆ ಗಾನದಲೆಗಳ ಗ್ರಹಿಸುವ ಮಹಾದ್ವಾರ ಕಿವಿದ್ವಯವ ಇತ್ತುದಕೊ ?
ಸೊಂಪಿನಾ ಸಂಪಿಗೆಯ ಪೆಂಪಿನಾ ಕೇತಕಿಯ
ಉನ್ಮತ್ತತೆಯನೀವ ಮಲ್ಲಿಕಾ ಸಮುದಾಯದ
ಒಡಲ ಗರ್ಭದಿ ಒಲಿದು ಬೆರೆಸಿದ ಸೌರಭದ ಸೊಬಗಿಗೋ ? ಮೇಣ್
ಆ ಕಂಪ ಹೀರುವ ಗಂಧೇಂದ್ರಿಯವನಿತ್ತುದಕೊ ?
ಅರಿತಷ್ಟೂ ಆಳವಹ, ತಿಳಿದಷ್ಟೂ ಬಿತ್ತರವಿಹ-
ಸನಿಹವಿದ್ದೂ ತೋರದಿಹ ನಿನ್ನ ಬಲ್ಮೆಗೋ ? ಮೇಣ್
ನನ್ನೆದೆಯ ಮಂದಿರದಿ ಕಳ್ಳನೊಲು ಕುಳಿತಿಹ
ನಿನ್ನ ಅರಸಿ ಕಾಣ್ಬ ಜಾಣ್ಮೆಯನು ಕೊಟ್ಟುದಕೊ ?
ಜಗದೊಳಿಹ ಅಣುರೇಣು ತೃಣಗಳಲಿ
ಚಿನ್ಮಯದ ಚೆಲುವನ್ನು ಸೂರೆಮಾಡಿ
ಅಂದದ ನಂದನವ ಸೃಷ್ಟಿಸಿದ ನಿನ್ನ ರಸಿಕತೆಗೋ ? ಮೇಣ್
ಸಚ್ಚಿದಾನಂದಾ, ಈ ಸೊಗವ ಸವಿಯುವ
ಸಂವೇದನಾಶೀಲ ಮನ,
ಮಾನವ ಜೀವನವ ದಾನವಿತ್ತುದಕೋ ?

—ಜಗದ್ಗುರು ಮಾತಾಜಿ.

ನಿಮ್ಮ ಅನಿಸಿಕೆ

ಸಂಪಾದಕರ ಸಮಕ್ಷಮಕ್ಕೆ

ಪುಟಗಳ ತುಂಬ ಜಾಹಿರಾತು
ವಿಷಯ ಓದಲು ಜಾಗ ಇಲ್ಲವಾಯ್ತು
ಇದು ನಮ್ಮೆಲ್ಲ ಪತ್ರಿಕೆಗಳ ಹೂರಣ
ಇದಕೆ ನೀ ಹೊರತಾದೆ 'ಕಲ್ಯಾಣಕಿರಣ'

ಬಸವರಾಜ ಎಸ್. ಹೊಸಮನಿ, ಬಿ.ಎ. ಬೆಂಗಳೂರು

ಕಲ್ಯಾಣ ಕಿರಣ ಒಂದು ಅಧ್ಯಾತ್ಮ ರಸಕವಳವಾಗಿ ಬರುತ್ತದೆ. ಪತ್ರಿಕೆಯ ಒಡಲೊಳಗಿನ ಪ್ರೌಢ ಲೇಖನಗಳನ್ನೋದುತ್ತ ಹೃದಯ ಗರಿಬಿಚ್ಚಿ ಹಾರುತ್ತದೆ. ಓದುತ್ತಾ ಕುಳಿತಾಗ ಹಸಿವು-ನೀರಡಿಕೆ ಮರೆತು ಹೋಗುತ್ತವೆ. ನನ್ನ ದೃಷ್ಟಿಯಲ್ಲಿ ಕಲ್ಯಾಣ ಕಿರಣ ಜಗದ ಕಣ್ಣಾಗಿ, ಜ್ಞಾನದ ರಸಬಳ್ಳಿಯಾಗಿ ಇದೆ.

ಭಾಲ್ಕಿ;.585328

—ಶಿವರಾಜ ಪರಸಣ್ಣೆ.

ಅಕ್ಕಮಹಾದೇವಿಯ ರೇಖಾಚಿತ್ರ ಹೊತ್ತ ಉಗಾದಿ ಸಂಚಿಕೆ ಬೇವು-ಬೆಲ್ಲದಂತೆ ಸಮ್ಮಿಶ್ರಭಾವವನ್ನು ತಂದಿತು. 'ಮುದ್ದಾದ ಅಕ್ಕನ ಚಿತ್ರ, ಆಕೆ ಹಾರುವ ಗಿಳಿಯನ್ನು, ನಲಿಯುವ ನವಿಲನ್ನು, ಕರವೆತ್ತಿ 'ಎನ್ನೊಡೆಯ ಚನ್ನಮಲ್ಲಿಕಾರ್ಜುನ ಎಲ್ಲಿಹನೆಂಬುದ ನೀವು ಹೇಳಿರೆ ?' ಎಂದು ಕೇಳುವ ಭಂಗಿ ತುಂಬಾ ಮನಾಪಹಾರಿ. ಪ್ರಭುದೇವರ ಪರಿಚಯ ಸಂಕ್ಷಿಪ್ತವಾಗಿದ್ದರೂ ಸಂಪೂರ್ಣವಾಗಿತ್ತು. ಅನುಭಾವಿಗಳ ದೃಷ್ಟಿಯಲ್ಲಿ ಜ್ಯೋತಿಷ್ಯ ಶಾಸ್ತ್ರ ಸಹ ಉತ್ತಮವಾಗಿದೆ. ಆದರೆ....ಈ ತಿಂಗಳ ಮಂಗಳಮೂರ್ತಿಯ ದರ್ಶನವನ್ನು ಗೊ.ರು.ಚ.ರವರ ಲೇಖನಿ ಮಾಡಿಕೊಡದುದು ತುಂಬ ನಿರಾಶೆಯನ್ನುಂಟುಮಾಡಿದೆ. ಇನ್ನು ಮಾಡಲಾರಿರೆಂಬ ಭರವಸೆ ತಾಳುತ್ತೇವೆ.

—ಸುರೇಶ ಪಾಟೀಲ, ಹುಬ್ಬಳ್ಳಿ

ಬಹುರೂಪೀ ಬಸವಣ್ಣನ ಕಲ್ಪಿಸಿ,ಬಹುಮುಖ ವ್ಯಕ್ತಿತ್ವದ ಬಸವಣ್ಣನ ಪರಿಚಯ ಹೊತ್ತ ಕಲ್ಯಾಣಕಿರಣ ಮನಕ್ಕೆ ಮುದವನ್ನು, ಬುದ್ಧಿಗೆ ಅರಿವನ್ನು ಹೊತ್ತು ತಂದಿತು. ಬಸವ ಬಾಳಿನ ಮೂರು ಮಹಾಶಕ್ತಿಗಳು ಲೇಖಿನ ಹೃದಯದ ಆಳಕ್ಕಿಳಿದು ಮಥಿಸಿತು. ಎಲ್ಲರಂತಹ ಗೃಹಸ್ಥ, ಎಲ್ಲರಂತಹ ರಾಜಕಾರಣಿಯಲ್ಲ ಆ ಮಹಾನುಭಾವ ಎಂದರಿತು ವಿಲಕ್ಷಣ ಹೆಮ್ಮೆ ಎನ್ನಿಸಿತು. ಪ್ರಭುದೇವರ ಒಂದು ವಚನಕ್ಕೆ ಪೂಜ್ಯ ಸ್ವಾಮೀಜಿ ನೀಡಿದ ಅರ್ಥವಿವರಣೆ ನಮ್ಮನ್ನು ಸಂಭ್ರಾಂತರನ್ನಾಗಿ ಮಾಡಿದೆ. ಒಟ್ಟಾರೆ ಈ ಕಲ್ಯಾಣಕಿರಣ ಹುಚ್ಚು ಹಿಡಿಸುತ್ತಿದೆ ನಮಗೆಲ್ಲ.

—ಮನೋಹರಿ, ಮಂಡ್ಯ



ಬಸವಣ್ಣನವರ ಮೂರ್ತಿಪೂಜೆ

ಮೈ ಮಾತು ಮನಗಳು ತ್ರಿಕರಣಗಳೆನಿಸಿಕೊಳ್ಳುವವು. ಈ ಮೂರರಿಂದಲೂ ಆರಾಧನೆ ಮಾಡುವುದು ಅವಶ್ಯಕ ಎನ್ನುವುದು ಬಸವ ಧರ್ಮ ಸಿದ್ಧಾಂತ. ಉಪಾಸನೆಯೆಂಬ ವ್ಯಾಪಕ ಪೂಜಾವಿಧಾನದಲ್ಲಿ ಶರೀರದಿಂದ ಹಸ್ತಮುಖೇನ ಮಾಡುವುದು ಅರ್ಚನೆ, ಮಾತಿನ ಮುಖೇನ ಪ್ರಾರ್ಥಿಸುವುದು ಪ್ರಾರ್ಥನೆ, ಮನೋಮುಖದಲ್ಲಿ ಅನುಸಂಧಾನಿಸುವುದು ಧ್ಯಾನ. ಆದ್ದರಿಂದ ದೇವನನ್ನು ಧ್ಯಾನಿಸಿದರೆ ಸಾಲದು ಪ್ರಾರ್ಥಿಸಬೇಕು; ಪ್ರಾರ್ಥಿಸಿದರೂ ಸಾಲದು ಪೂಜಿಸಬೇಕು. ಆಗ ಪೂಜೆಯು ಸರ್ವಾಂಗ ಪರಿಪೂರ್ಣವಾಗುವುದು ಎಂಬುದು ಬಸವಧರ್ಮದ ನಂಬುಗೆ.

ಹಸಿದು ಬಂದ ಗಂಡಂಗೆ ಉಣಲಿಕ್ಕದೆ
ಬಡವಾದನೆಂದು ಮರುಗುವಾ ಸತಿಯ ಸ್ನೇಹದಂತೆ,
ಬಂದುದನರಿಯಳು, ಇದ್ದುದ ಸವೆಸಳು
ಕೂಡಲ ಸಂಗಮದೇವಾ, ನಿಜವಿಲ್ಲದವನ ಭಕ್ತಿ ಇಂತಯ್ಯ.

ಹೆಂಡತಿಗೆ ಮನದಲ್ಲಿ ಮರುಕವಿದೆ ಎಂದೇ ನಂಬೋಣ, ಅದನ್ನು ಆಗಾಗೆ ತುಟಿಗಳಲ್ಲಿಯೂ ವ್ಯಕ್ತಪಡಿಸುವಳು; "ಅಯ್ಯೋ ಪಾಪ, ಅವರು ಎಷ್ಟು ಬಡವಾಗ್ತಾಯಿದ್ದಾರೆ. ಛೆ, ಹೊತ್ತಿಗೊತ್ತಿಗೆ ಸರಿಯಾಗಿ ಊಟ ಸಹ ಮಾಡರು" ಎಂದು ಅನುತಾಪಪಡುವಳು. ಆದರೇನಾಯ್ತು ಹಸಿದು ಬಂದವರಿಗೆ ಉಣಲಿಕ್ಕಲಿಲ್ಲ, ಬಂದುದನ್ನರಿತು ಸೇವೆಗೈಯಲಿಲ್ಲ, ಬರೀ ಬಾಯಿಯ ಮರುಕದಲ್ಲಿಯೇ ಪೂರೈಸಿದಳು. ಹಾಗೆ ದೇವರಲ್ಲಿ ಅಖಂಡ ವಿಶ್ವಾಸವಿದ್ದರಷ್ಟೇ ಸಾಲದು, ಅದು ಪ್ರಾರ್ಥನೆ ಮತ್ತು ಪೂಜೆಗಳ ಮೂಲಕ ವ್ಯಕ್ತವಾಗಬೇಕು. ಜ್ಞಾನ-ಶ್ರದ್ಧೆಗಳು ವ್ಯಕ್ತವಾಗುವುದು ಬಹಿರಂಗದ ಕ್ರಿಯೆಗಳಲ್ಲಿ.

"ನಾನು ಬಹಳ ಓದಿದ್ದೇನೆ, ಅಧ್ಯಯನ ಮಾಡಿದ್ದೇನೆ, ಶಾಸ್ತ್ರಗಳ ಜ್ಞಾನವನ್ನು ಅರೆದು ಕುಡಿದಿದ್ದೇನೆ" ಎಂದು ಮಾತನಾಡಿದಾಗ ಅವನ ನಿಷ್ಠೆ ತಿಳಿಯದು, ಅದು ಉತ್ತರ ಪತ್ರಿಕೆಯಲ್ಲಿ ಬರವಣಿಗೆಗೆ ಇಳಿದಾಗ ಮಾತ್ರ ಗೊತ್ತಾಗುವುದು. ಪತ್ನಿಯು ತನ್ನ ಸಂಗಾತಿಯಾದ ಪತಿಯನ್ನು ಕೈಯಾರೆ ಉಪಚರಿಸುವುದರಲ್ಲಿ, ಅಡಿಗೆಮಾಡಿ ನೀಡುವುದರಲ್ಲಿ, ಒಳ್ಳೆಯ ಮಾತುಗಳನ್ನಾಡುತ್ತಾ ಸಂತೈಸುವುದರಲ್ಲಿ, ಅಂತರಂಗದಲ್ಲಿ ಹಿತವನ್ನು ಬಯಸುವುದರಲ್ಲಿ ನಿಜವಾದ ಪತಿಭಕ್ತಿ ತಿಳಿಯುತ್ತದೆ. ಅದೇ ರೀತಿ ಪರಮಾತ್ಮನನ್ನು ಅರ್ಚಿಸಿ, ಸ್ತುತಿಸಿ, ಧ್ಯಾನಿಸುವುದರಲ್ಲಿ ನಮ್ಮ ನಿಷ್ಠೆ ವ್ಯಕ್ತವಾಗುತ್ತದೆ.

ಇಂಥ ಉಪಾಸನೆಗೆ ಅರ್ಹವಾದವು ಎರಡು ತತ್ತ್ವಗಳು; ೧. ದೇವರು ಮತ್ತು ೨. ಧರ್ಮಗುರು. ಜಗತ್ತನ್ನು ಸೃಷ್ಟಿಸಿ ಪಾಲಿಸುತ್ತಿರುವ ಕರ್ತನೊಬ್ಬ, ಅಂತಹ ಕರ್ತನನ್ನು ಒಲಿಸಿಕೊಳ್ಳಲು ದಾರಿಯನ್ನು ನಿರ್ಮಾಣ ಮಾಡಿಕೊಟ್ಟಂತಹ ಧರ್ಮಗುರು ಇನ್ನೊಬ್ಬ. ಈ ಇಬ್ಬರು ಪೂಜಾರ್ಹರು. ದೇವರನ್ನು ಪೂಜಿಸುವುದು ಹೇಗೆ? ನಿರಾಕಾರ ನಿರ್ಗುಣನಾದ ಅವನನ್ನು ಆಕಾರಕ್ಕೆ ತರುವುದು ಸಾಧ್ಯವೆ? ಹಾಗೆ ತರುವಲ್ಲಿಯೇ ಪೌರಾಣಿಕ, ಕಾಲ್ಪನಿಕ ಆಕಾರವನ್ನು ನೀಡಿಯೋ ಅಥವಾ ಮಹಾತ್ಮರನ್ನು ದೇವರೆಂದು ತಪ್ಪುತಪ್ಪಾಗಿ ಕರೆದು ತಾತ್ತ್ವಿಕ ದೋಷಮಾಡುವಲ್ಲಿಯೋ ನಿರತರಾಗುತ್ತೇವೆ. ನಾವು ಕಲ್ಪಿಸಿಕೊಡಬಹುದಾದ ಆಕಾರ ನಮ್ಮ ಪಂಚೇಂದ್ರಿಯಗಳ ಅಳವಿನಲ್ಲಿ ಸಿಕ್ಕುವ ಪ್ರಾಣಿಗಳದೋ, ಮಹಾತ್ಮರದ್ದೋ, ಯಾವುದಾದರೂ ಊಹೆಗೆ ಒಳಪಟ್ಟುದೋ ಆಗಬಲ್ಲುದೇ ವಿನಾ, ದೇವರ ಆಕಾರವಾಗಲಿಕ್ಕೆ ಹೇಗೆ ಸಾಧ್ಯ? ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಡಬೇಕಾದರೆ ಮಗು ಬೇಕೇ ಬೇಕು. ಸುಮ್ಮಸುಮ್ಮನೆ ತೊಟ್ಟಿಲು ತೂಗಿ ಜೋಗುಳ ಹಾಡಿದರೆ ಹುಚ್ಚರು ಎನ್ನರೆ? ಹಾಗೆ ಎದುರಿಟ್ಟು ಪೂಜಿಸಬೇಕಾದರೆ ಆ ವಸ್ತುವಿಗೆ ಆಕಾರಬೇಕು.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗ್ರಹಿಸಿ, ಪರಿಹಾರಕ್ಕೆ ತುಂಬಾ ಯತ್ನಿಸಿದರು ಬಸವಣ್ಣನವರು. ಒಂದು ದಿನ ಅವರ ಅಂತರಂಗದಲ್ಲಿ ಬೆಳಕು ಥಟ್ಟನೆ ಮಿಂಚಿತು. "ದೇವರು ನಿರಾಕಾರ, ಅವನ ಸಾಕಾರವೇ ಈ ಬ್ರಹ್ಮಾಂಡ. ಅವನು ಕವಿ, ಈ ವಿಶ್ವ ಅವನು ರಚಿಸಿದ ಕಾವ್ಯ. ಅವನು ಕಲಾಕಾರ, ಅವನು ಚಿತ್ರಿಸಿದ ಚಿತ್ರವೇ ಸೃಷ್ಟಿ. ಕಾರ್ಯದ ಮೂಲಕ ಕರ್ತೃವಿನ ಅಭಿವ್ಯಕ್ತಿ. ಈ ವಿಶ್ವವು ಗೋಲಾಕಾರದಲ್ಲಿದೆ. ಆದ್ದರಿಂದ ವಿಶ್ವಾತ್ಮನನ್ನು ವಿಶ್ವದಾಕಾರದ ಗೋಲಾಕಾರದಲ್ಲಿ ಏಕೆ ಚಿತ್ರಿಸಬಾರದು?" ಹೀಗೆ ಬಸವಣ್ಣನವರ ಹೃದಯದಲ್ಲಿ ರೂಪುಗೊಂಡ ತತ್ತ್ವವು ಗೋಲಾಕಾರವಾದ ಇಷ್ಟಲಿಂಗವಾಗಿ ಮೈತಳೆಯಿತು. ಅದನ್ನು ಶ್ರೀ ಸಿದ್ಧರಾಮೇಶ್ವರರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ;

ನಿರಾಕಾರದ ಮೂರ್ತಿಯ ಆಕಾರಕ್ಕೆ ತಂದೆಯಲ್ಲಾ ಬಸವಾ
ಆಕಾರದ ಮೂರ್ತಿಯ ಹೃದಯ ಕಂಜದಲ್ಲಿ ವಾಸಗೊಂಡು
ತೋರಿದೆಯಲ್ಲಾ ಬಸವಾ.

ಅಕ್ಕ ನೀಲಾಂಬಿಕಾ ತಾಯಿ ಹೀಗೆ ಹೇಳುವಳು :

ಬಯಲನೊಂದು ರೂಪಮಾಡಿ ಬಣ್ಣಕ್ಕೆ ತಂದು
ಆ ಬಣ್ಣವ ನಿಜದಲ್ಲಿ ನಿಲ್ಲಿಸಿದಾತ ನಮ್ಮ ಬಸವಯ್ಯನು.

ಹೀಗೆ ೧) ಇಷ್ಟಾರ್ಥಸಿದ್ಧಿಗೆ ೨) ಭಕ್ತಿಯ ತೃಪ್ತಿಗೆ ೩) ಸ್ವರೂಪ ದರ್ಶನಕ್ಕೆ ಮತ್ತು ೪) ಯೋಗಾಭ್ಯಾಸಕ್ಕಾಗಿ ಬಸವಣ್ಣನವರು ಇಷ್ಟಲಿಂಗವನ್ನು ಮುಮುಕ್ಷುಗಳಿಗೆ ಪೂಜಾರ್ಹ ಸಾಧನವಾಗಿ ನೀಡಿದರು. ಅರ್ಚನೆಗೆ ಇಷ್ಟಲಿಂಗವನ್ನು, ಧ್ಯಾನಕ್ಕೆ ಷಡಕ್ಷರಿ ಮಂತ್ರವನ್ನು ನೀಡಿದರು. ಇದನ್ನು ಬಿಟ್ಟು ಇನ್ನೇನನ್ನೂ ಪೂಜಿಸ ತಕ್ಕುದಲ್ಲ ಎಂದು ಕಡ್ಡಾಯವಾದ ಏಕದೇವೋಪಾಸನೆಯನ್ನು ಬೋಧಿಸಿದರು. ಬಹುದೇವೋಪಾಸನೆಯು ಸಮಾಜದಲ್ಲಿ ಅನೈಕ್ಯತೆಗೆ ಮತ್ತು ಗುಂಪುಗುಳಿತನಕ್ಕೆ ಅವಕಾಶವನ್ನು ಕೊಡುವುದಲ್ಲದೆ ನಿಜವಾದ ದೈವೀಶ್ರದ್ಧೆಗಿಂತಲೂ ಮೂಢನಂಬಿಕೆಯನ್ನೇ ಪ್ರಚೋದಿಸುವದು ಎಂದರಿತು ಏಕದೇವನಿಷ್ಠೆಯನ್ನು (Strict Monotheism) ಬೆಳಕಿಗೆ ತಂದರು. ಬಸವ ತತ್ತ್ವದ ಪ್ರಕಾರ ಪೂಜ್ಯವಸ್ತುವು ಇಷ್ಟಲಿಂಗವೊಂದೇ ಆದರೂ, ಅದು ವೈಯಕ್ತಿಕ ಪೂಜೆಗೆ ಮಾತ್ರ ಸಹಕಾರಿಯಾಗುವುದರಿಂದ ಸಾಮೂಹಿಕ ಪೂಜೆ–ಸಮಾಜ ಸಂಘಟನೆಗಳಿಗಾಗಿ ಬಸವಣ್ಣನವರ ದಿವ್ಯಮೂರ್ತಿಯ ಉಪಾಸನೆ ಉಚಿತೆನಿಸುತ್ತದೆ. ಅಲ್ಲದೆ ಆಕಾರವಿಲ್ಲದ ನಿರಾಕಾರ ನಿರ್ಗುಣ ಚೈತನ್ಯದ ಮೇಲೆ ಮನಸ್ಸಿಟ್ಟು ಶರಣಾಗತಿಯಿಂದ ಆರಾಧಿಸುವದು ಜನಸಾಮಾನ್ಯರಿಗೆ ಕಷ್ಟ ಸಾಧ್ಯವಾದ ಕಾರಣ, ದಯೆ–ಮಮತೆಗಳ ಹೊನಲು ಹರಿಯುವ, ಪ್ರಶಾಂತ ನೇತ್ರಸಹಿತ ಗುರು ಮೂರ್ತಿಯ ಉಪಾಸನೆ ಮತ್ತು ಧ್ಯಾನ ಸುಲಭ ಸಾಧ್ಯ.

ಮೂರ್ತಿ ಪೂಜೆಯನ್ನು ವಿರೋಧಿಸುವ ಕೆಲವು ಬಸವಭಕ್ತರು ಉಂಟು. ಅವರು ಅನ್ನಬಹುದು : "ಬಸವಣ್ಣನ ತತ್ತ್ವದ ಪ್ರಕಾರ ಮೂರ್ತಿಪೂಜೆ ಸಲ್ಲದು, ಹೀಗಿದ್ದಾಗ ಬಸವಣ್ಣನನ್ನೇ ಮೂರ್ತೀಕರಿಸಿ ಪೂಜಿಸುವುದು ವಿರೋಧಾಭಾಸವಲ್ಲವೆ?" ಯಾರೋ ಇಂಥ ಕೆಲವರು, ಬುದ್ಧಿವಂತರು, ವಿಚಾರವಾದಿಗಳು, ಕಾಕುಪೋಕು ದೇವರುಗಳ, ತಮ್ಮ ವ್ಯಕ್ತಿಗತ ಗುರುಗಳ, ಹಲವಾರು ಪೌರಾಣಿಕ ಚಿತ್ರಗಳ ಪೂಜೆಯನ್ನು ತೊರೆದು ಜ್ಞಾನಯುಕ್ತ ಇಷ್ಟಲಿಂಗೋಪಾಸನೆ ಮಾಡುತ್ತಿದ್ದಿರಬಹುದು. ಆದರೆ ಬಹುಪಾಲು ಭಕ್ತಿಸಹಿತರು ಮೂರ್ತಿಗಳ ಉಪಾಸಕರು. ಅಂಥವರಿಗೆ ಬಸವಣ್ಣನವರ ಭಾವಚಿತ್ರಪೂಜೆ ಬೇಡವೆಂದರೆ, ಅದನ್ನಷ್ಟೇ ತೊರೆದು ಉಳಿದೆಲ್ಲ ಭಾವಚಿತ್ರ,

ವಿಗ್ರಹಗಳ ಪೂಜೆ ಮಾಡುವರು. ಅವರು ತಾತ್ತ್ವಿಕ ಚಿಂತನೆಮಾಡದೆ "ಬಸವಣ್ಣನವರು ಪೂಜಾರ್ಹರಲ್ಲ" ಎಂದು ತಿಳಿಯುವ ಅಪಾಯಕಾರಿ ಪ್ರವೃತ್ತಿಗೆ ಅವಕಾಶವಿದೆ. ಓರ್ವ ಶ್ರೀಮಂತರ ಮನೆಗೆ ಪೂಜೆಗೆ ಹೋಗುವ ಒಂದು ಅವಕಾಶ ಒದಗಿತ್ತು. ಅವರು ಒಳ್ಳೆ ಸಾಹಿತ್ಯಾಭ್ಯಾಸಿಗಳು, ಜ್ಞಾನಿಗಳು, ಸಜ್ಜನರು; ಮನೆಯನ್ನು ಪ್ರವೇಶಿಸುತ್ತಲೇ ಸ್ವಾತಂತ್ರ್ಯ ಹೋರಾಟಗಾರರಾದ ಸುಭಾಷ್, ನೆಹರೂ, ಬಾಪೂಜಿ ಇನ್ನೂ ಮುಂತಾದವರ ಫೋಟೋ. ತಲೆ ಬಾಗಿಲನ್ನು ಪ್ರವೇಶಿಸುತ್ತಲೇ ಇರಬೇಕಾದ ಬಸವಣ್ಣನವರ ಫೋಟೋ ಇರಲಿಲ್ಲ. ನನಗೆ ನಮ್ಮ ರಾಷ್ಟ್ರೀಯ ಮುಂದಾಳುಗಳ ಬಗ್ಗೆ ತುಂಬು ಗೌರವ. ಪ್ರತಿ ಮನೆಯಲ್ಲೂ ಆ ಮಹಾಪುರುಷರ ಚಿತ್ರಗಳು ಇರಲೇಬೇಕೆಂದು ದೃಢ ಅಭಿಪ್ರಾಯ ನನ್ನದು. ಆದರೆ ಧರ್ಮವನ್ನು, ಹುಟ್ಟನಿಂದ ಆರಂಭವಾಗಿ ಬಾಳಿನೊಡನೆ ಬೆಳೆದುಬಂದು ಸಾವಿನತನಕ ಇರುವ, ಆನಂತರವೂ ನಮ್ಮ ಜೀವನ ರೂಪಿಸುವ ಧರ್ಮವನ್ನು ಕೊಟ್ಟ ಗುರುವಿನ ಸ್ಮರಣೆಗೆ ಆದ್ಯತೆ ನೀಡಬೇಕು. ಮನೆಗೆ ಧರ್ಮಗುರುವಿನ ಭಾವಚಿತ್ರವೆಂದರೆ ಹಿಂದೂ ಸ್ತ್ರೀಗೆ ಮಂಗಳಸೂತ್ರವಿದ್ದಂತೆ. ಗೃಹಿಣಿಯು ನೂರೆಂಟು ಆಭರಣಗಳನ್ನು ಹಾಕಿಕೊಂಡರೂ ಮಂಗಲಸೂತ್ರವಿಲ್ಲದಿದ್ದರೆ ಅದೆಂತು ಅಮಂಗಳೆಯೆಂದು ಭಾವಿಸಲ್ಪಡುವಳೋ ಅಂತೆಯೇ ಭಾವಿಸಬೇಕಾಗುತ್ತದೆ, ಧರ್ಮಗುರುವನ್ನು ಮರೆತವರನ್ನು.

ಆನಂತರ ಪೂಜಾಕೋಣೆಯನ್ನು ಹೊಕ್ಕುದಾಯಿತು. ಅಲ್ಲಿ ಹಿಂದು ಒಬ್ಬನ ಮನೆಯಲ್ಲಿ ಸ್ವಾಭಾವಿಕವಾಗಿರುವಂತೆ ಒಂದು ವಸ್ತುಸಂಗ್ರಹಾಲಯ, ಅಂದರೆ ಯಾವಾವೋ ಎಲ್ಲಿಲ್ಲಿಯವೋ ಫೋಟೋಗಳು; ಈಗ ಜೀವಂತವಿರುವ ಕೆಲವು ಮಠಾಧಿಪತಿಗಳ ಫೋಟೋಗಳು ಪೌರಾಣಿಕ ದೇವತೆಗಳು, ಇತ್ಯಾದಿ. ಆದರೆ ಬಸವಣ್ಣನವರ ಭಾವಚಿತ್ರ ಪೂಜಾಗೃಹದಲ್ಲಿ ಕಟ್ಟೆಯ ಮೇಲೆ ಇಲ್ಲ. ಕೋಣೆಯಲ್ಲಿ ಕಣ್ಣಾಡಿಸಿದಾಗ ಎತ್ತರವಾದ, ಕೈಗೆ ನಿಲುಕದ ತಲೆಬಾಗಿಲ ಮೇಲೆ ಒಂದು ಫೋಟೋ; ದಿನಾಲು ಉಳಿದೆಲ್ಲವನ್ನು ಪೂಜಿಸುವಾಗ ಅದನ್ನಂತೂ ಪೂಜಿಸಲು ಅಸಾಧ್ಯವೆಂಬಷ್ಟು ಎತ್ತರದಲ್ಲಿತ್ತು. ನನಗೆ ಆಶ್ಚರ್ಯದ ಹೊನಲು ಹರಿಯಿತು. "ಬಸವ ತತ್ತ್ವದ ಪ್ರಕಾರ ಮೂರ್ತಿ ಪೂಜೆ ಬೇಡಾ" ಎಂದು ಬಿಟ್ಟಿರಬಹುದೆ? ಹಾಗಾದರೆ ಉಳಿದ ನೂರೆಂಟು ದೇವತೆಗಳ ಪೂಜೆ ಏಕೆ? ಅಥವಾ ಬಸವಣ್ಣನವರು ಪೂಜಾರ್ಹರಲ್ಲವೆಂದೆ? ಈಗಿನ ಹಲವಾರು ನಟನ ಕಲಾಕೋವಿದ, ಡಾಂಭಿಕ, ಆಡಂಬರಯುಕ್ತ, ಜ್ಞಾನ, ತಪೋರಹಿತ ಜಾತಿವಾದಿ ಜನರ ವ್ಯಕ್ತಿತ್ವಕ್ಕಿಂತಲೂ ಬಸವಣ್ಣನವರದು ಸಣ್ಣದೆ? ವಿಚಾರ ಮಾಡುತ್ತಾ ಹೋದಾಗ ತಳಮಳವೆನಿಸಿತು.

"ಬಸವಣ್ಣನವರು ಗುರುವಲ್ಲ; ಪೂಜಾರ್ಹರಲ್ಲ" ಎಂಬ ಕಲ್ಪನೆಯನ್ನು ಕೆಲವು ಗುರುಗಳೆನ್ನಿಸಿಕೊಂಡವರು ಹುಟ್ಟಿಸದೇ ಇಲ್ಲ. ಅವರು ಹೇಳಿದ ಮಾತನ್ನು ನಂಬುವ

ಮೂಢ ಅನುಯಾಯಿಗಳನ್ನು ಕಂಡು ಅನುತಾಪವೆನಿಸುತ್ತದೆ. ಶಿವಯೋಗಿ ಸಿದ್ಧರಾಮೇಶ್ವರರು ಹೇಳಿದ್ದಾರೆ:

ಅರ್ಚಿಸಲು ಬೇಡವದ ಪೂಜಿಸಲು ಬೇಡವದ
ನಿತ್ಯ ಜಪ ತಪವು ನಿನಗೆ ಬೇಡ
ಸಚ್ಚಿದಾನಂದಗುರು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಬಸವಾಕ್ಷರ ತ್ರಯವ ನೆನೆ ನಿನಗೆ ನಿತ್ಯಪದವು.

ಭೀಮಕವಿ ನುಡಿಯುತ್ತಾನೆ: "ಬಸವ ಶರಣೆನೆ ಪಾಪವಳಿವುಗು, ಬಸವ ಶರಣೆನೆ ತಾಪವಾರುಗು, ಬಸವ ಶರಣನೆ ಪರಮಪಾವನ ಭಾತಿ ಸಂಧಿಸುಗು"

ಜನಪದ ಸಾಹಿತ್ಯ ಉಲಿಯುತ್ತದೆ:

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯಶಿವ ಮಂತ್ರ ನಿನ್ಹೆಸರು। ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಹೀಗೆ ಬಸವಣ್ಣನವರ ಹೆಸರು ಭವತಾರಕ ಮಂತ್ರವಾಗಿದ್ದರೆ, ಬಸವಣ್ಣನವರ ಕರುಣೆ ಮುಕ್ತಿದಾಯಕ ಶಕ್ತಿಯಾಗಿದೆ. ಇಂಥ ಒಂದು ಸ್ಥಾನ ಸಮಕಾಲೀನರಿಂದ ಹಿಡಿದು ಶಿವಯೋಗಿಗಳು ಅನುಭಾವಿಗಳಾದಿಯಾಗಿ ಇಂದಿನ ಮನ್ವಂತರದ ವಿಚಾರವಂತರ ತನಕ ಬಸವಣ್ಣನವರಿಗೆ ಕೊಡಲ್ಪಟ್ಟಿರುವಾಗ, ಬಸವಣ್ಣನವರ ವ್ಯಕ್ತಿತ್ವ ಅಥವಾ ತತ್ತ್ವವನ್ನರಿಯದ ಮೂಢಮತಿಗಳ ಮಾತಿಗೆ ಮರುಳಾಗುವ ಜನರನ್ನು ಕಂಡು ಏಕೆ ಮರುಕವೆನಿಸಬಾರದು ?!

ತಂತಮ್ಮ ಧರ್ಮಗುರುಗಳನ್ನು ಹೆತ್ತಪ್ಪನೆಂದು, ಧರ್ಮಗುರುವೆಂದು ಇನ್ನಿತರ ಸಂತರನ್ನು ಚಿಕ್ಕಪ್ಪ-ದೊಡ್ಡಪ್ಪರೆಂದು, ಜ್ಞಾನಗುರುಗಳೆಂದು ಭಾವಿಸುವ ಸೌಜನ್ಯ ಜನತೆಯಲ್ಲಿ ಬರಬೇಕು. ಬುದ್ಧನು ವ್ಯಕ್ತಿಪೂಜೆಗೆ ವಿರೋಧವಾಗಿದ್ದರೂ, ಅವನ ಅನುಯಾಯಿಗಳು ಬೌದ್ಧಧರ್ಮದ ಸಂವಿಧಾನ ರೂಪಿಸುವಲ್ಲಿ ಬುದ್ಧನ ಮೂರ್ತಿಗೆ ಅಗ್ರಸ್ಥಾನಕೊಟ್ಟರು. ಈಗ ನನಗೆ ಅರಿವಾಗುತ್ತಲಿದೆ; ಒಂದು ವೇಳೆ ಬೌದ್ಧ ಗುರುಗಳು ಹಾಗೆ ಮಾಡದಿದ್ದರೆ, ಜನರು ಮೂಲಗುರು ಬುದ್ಧನನ್ನು ಬಿಟ್ಟು ನಂತರ ಬಂದ ಭಿಕ್ಕುಗಳ ಪೂಜೆಗೆ ತೊಡಗುತ್ತಿದ್ದರೆಂದು. ಆದ್ದರಿಂದ ಮಠಗಳಲ್ಲಿ ತಮ್ಮ ತಮ್ಮ ಕರ್ತೃಗದ್ದುಗೆ ಇತ್ಯಾದಿಗಳಿಗೆ ಪೂಜೆ ನಡೆಯುವುದಕ್ಕೆ ಮೊದಲು, ಬಸವಣ್ಣನವರ ಭಾವಚಿತ್ರಕ್ಕೆ, ಮೂರ್ತಿಗೆ ಪೂಜೆ ನಡೆಯುವ ಅವಕಾಶವಿರಬೇಕು.


ದೊಡ್ಡ ದೊಡ್ಡ ಮಠಗಳಲ್ಲಿ ಒಂದು ದೊಡ್ಡ ಬಸವ ಭಾವಚಿತ್ರವನ್ನು, ಎತ್ತರದ ವೇದಿಕೆ ಮೇಲಿಟ್ಟು, ದಿನನಿತ್ಯ ಪೂಜಿಸುವ ಪರಿಪಾಠ ಬೆಳೆಸಬೇಕು. ದರ್ಶನಕ್ಕೆ ಭಕ್ತರು ಬಂದಾಗ ಮೊದಲು ಧರ್ಮಗುರುವಿಗೆ ನಮಸ್ಕರಿಸಿ, ನಂತರ ಮಠಾಧಿಪತಿಗಳಿಗೆ ನಮಸ್ಕರಿಸಲು ತರಬೇತಿ ಕೊಡಬೇಕು. ಕೆಲವೊಂದು ಧರ್ಮಮಂದಿರಗಳಲ್ಲಿ ಬಸವ ಭಾವಚಿತ್ರದ ಧೂಳು ಒರೆಸುವ ಅಭ್ಯಾಸವಾಗಲಿ, ದಿನನಿತ್ಯ ಪೂಜಿಸುವ ಪರಿಪಾಠವಾಗಲಿ ಇಲ್ಲ. ಕಾಲಲ್ಲಿ ಬೂಟುಗಳನ್ನು ಧರಿಸಿಕೊಂಡೇ ಸನಿಹಕ್ಕೆ ಹೋಗಿ ಯಾವ ವಿಶೇಷ ಭಯಭಕ್ತಿ ಇಲ್ಲದೆ ವರ್ತಿಸುವುದನ್ನು ಕಾಣುತ್ತೇವೆ. ಇದು ಸಲ್ಲದು. ಮುಂಜಾನೆ ಎದ್ದು ಸುಪ್ರಭಾತದಲ್ಲಿ ಮಕ್ಕಳು ಮೊದಲ ದರ್ಶನ ಪಡೆಯುವಂತೆ ಭಾವಚಿತ್ರಗಳನ್ನು ಅಲಂಕರಿಸಬೇಕು; ನಂತರ ಸ್ನಾನ ಮುಗಿಸಿ ಪೂಜಾಗೃಹದಲ್ಲಿ ಬಸವಣ್ಣನವರಿಗೆ ಪೂಜೆ ಪ್ರಾರ್ಥನೆ ಸಲ್ಲಿಸಿ ಹೊರಗೆ ಬಂದು ತಾಯಿ-ತಂದೆಯರಿಗೆ ನಮಸ್ಕರಿಸಿ ತಿಂಡಿ ತಿನ್ನುವ ಪರಿಪಾಠ ಮಕ್ಕಳಲ್ಲಿ ಬೆಳೆಸಬೇಕು. ದಿನನಿತ್ಯ ಒಂದು ವಚನ ಕಂಠಪಾಠಮಾಡುವ ಅಭ್ಯಾಸ ಕಲಿಸಬೇಕು. ಬಸವಣ್ಣನವರು ಅತ್ಯಂತ ಶಿವೋಹಂಭಾವ ಪರಿಪ್ಲುತ ವಿನಯಶಾಲಿಗಳಾದ ಮಹಾನುಭಾವಿ, ಮಂತ್ರಪುರುಷ. ತಮ್ಮನ್ನು ಪೂಜಿಸ ಹೇಳದೆ, ದೇವನ ಕಡೆಗೆ ಚಿತ್ತವನ್ನು ಹರಿಸಲು ಹೇಳಿದರು. ಅವರ ಈ ವಿಶೇಷ ಗುಣಕ್ಕಾಗಿ ಮತ್ತು ಜೀವಿತ ಕಾಲದಲ್ಲಿ ಅವರು ಗಳಿಸಿದ ಮಂತ್ರಸಿದ್ಧಿ ಅನುಗ್ರಹ ಶಕ್ತಿಗಾಗಿ ಅವರನ್ನು ನಾವು ಆರಾಧಿಸಬೇಕು. ಸಾಮೂಹಿಕ ಪ್ರಾರ್ಥನೆ ನಡೆಯುವಲ್ಲಿ ಅವರ ಭಾವಚಿತ್ರಕ್ಕೆ ಅಗ್ರಪೂಜೆ ಸಲ್ಲಿಸಿ ನಂತರ ಪ್ರಾರ್ಥನೆ ಆರಂಭಿಸಬೇಕು. ಬಸವ ಧರ್ಮದ ಸಂವಿಧಾನದ ಪ್ರಕಾರ ಮೂರ್ತಿಪೂಜೆಗೆ ಅವಕಾಶವಿಲ್ಲವಾದರೂ ಸಮಾಜದ ಸಂಘಟನೆ, ಶಿಸ್ತು, ಧರ್ಮಜಾಗೃತಿಗಾಗಿ ವಚನ ಸಾಹಿತ್ಯ ಸಂವಿಧಾನದಲ್ಲಿ ತಿದ್ದುಪಡಿಮಾಡಿ ಬಸವಣ್ಣನವರ ಪೂಜೆಯನ್ನು ಬಳಕೆಗೆ ತರಬೇಕು.

ಶರೀರದಿಂದ ಅರ್ಚಿಸಿ, ಮಾತಿನಿಂದ ಸ್ತುತಿಸಿ, ಮನದಿಂದ ಧ್ಯಾನಿಸಿ ತ್ರಿಕರಣಗಳಿಂದ ಆರಾಧಿಸಬೇಕಾಗಿರುವ ಬಸವಧರ್ಮಿಯು ಕರ್ತನನ್ನು ಇಷ್ಟಲಿಂಗ ರೂಪದಲ್ಲಿ, ಆ ಕರ್ತನನ್ನು ಕಾಣುವ ಪಥ ನಿರ್ಮಿಸಿದ ಧರ್ಮಗುರು ಬಸವಣ್ಣನನ್ನು ಭಾವಚಿತ್ರದ ಮೂಲಕವೂ ಆರಾಧಿಸಬೇಕು.

ಅಲ್ಲದೆ ವಚನ ಸಾಹಿತ್ಯ ಸಂವಿಧಾನದ ಪ್ರಕಾರ ಗುರು ಲಿಂಗ ಜಂಗಮ ಪೂಜೆ ಮತ್ತು ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ಅರ್ಪಿಸಿ ಮಾಡುವ ದಾಸೋಹ ಪುರಸ್ಕರಣೀಯ. ಆಗ ಬೌದ್ಧಧರ್ಮದ ವಿಚಾರ ಸರಣಿಹಿಡಿದು

ಬುದ್ಧಂ ಶರಣಂ ಗಚ್ಛಾಮಿ (ಧರ್ಮಗುರು ಬುದ್ಧನಿಗೆ ಶರಣಾಗುತ್ತೇನೆ)
ಧಮ್ಮಂ ಶರಣಂ ಗಚ್ಛಾಮಿ (ಧರ್ಮಕ್ಕೆ ಶರಣಾಗುತ್ತೇನೆ)
ಸಂಘಂ ಶರಣಂ ಗಚ್ಛಾಮಿ (ಬೌದ್ಧರ ಒಕ್ಕೂಟಕ್ಕೆ ಶರಣಾಗುತ್ತೇನೆ)

(೧೧ನೇ ಪುಟ ನೋಡಿ)



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಗುಬ್ಬಿ ಹೆರವರ ಮನೆಯ ತನ್ನ ಮನೆಯೆಂಬಂತೆ,
ಧರೆ ಧನ ವನಿತೆಯರು ಎನ್ನವರು ತನ್ನವರೆಂದು
ಹೋರಿ ಹೋರಿ ಸಾವುತ್ತಿದೆ ಜೀವ,
ಸರ್ವಕರ್ತೃ ಕೂಡಲಸಂಗಯ್ಯನೊಬ್ಬನೆ ಎಂದರಿಯದೆ ಕೆಟ್ಟರು.

—ಬಸವಣ್ಣನವರ ಷಟ್‌ಸ್ಥಲ ವಚನಗಳು

ಲೋಕದಲ್ಲಿ ಇದಿರಾಗುವ ಅನುಭವಗಳನ್ನು, ಘಟನೆಗಳನ್ನು ಸಾಧನವಾಗಿ ಇರಿಸಿಕೊಂಡು ವಿಶೇಷವಾದ ತತ್ತ್ವವನ್ನು, ಸಿದ್ಧಾಂತವನ್ನು ಪ್ರತಿಪಾದಿಸುವುದು ಬಸವಣ್ಣನವರ ಸಾಹಿತ್ಯ ನಿರೂಪಣೆಯ ವೈಶಿಷ್ಟ್ಯ. ಇಲ್ಲಿಯಾದರೂ ದಿನ ನಿತ್ಯ ನೋಡುವ ಉಪಮೆಯನ್ನು ನೋಡುತ್ತೇವೆ. ಗುಬ್ಬಿಯು ಅನ್ಯರ ಮನೆಯಲ್ಲಿ ಗೂಡು ಕಟ್ಟುತ್ತದೆ–ಕಸಕಡ್ಡಿ, ಅರಳೆ, ಹುಲ್ಲು ಮುಂತಾದುವನ್ನು ಆರಿಸಿತಂದು ಗೂಡುಕಟ್ಟಿದ ಮನೆಯು ಅತ್ಯಂತ ಸ್ಥಿರ, ಶಾಶ್ವತ, ಅದು ತನ್ನದೇ ಸ್ವತ್ತು ಎಂಬಂತಹ ನಂಬುಗೆ ಅದಕ್ಕೆ. 'ಆ ಗೂಡನ್ನು ಇಂಬಿಟ್ಟುಕೊಂಡಿರುವ ಭವನದ ಮಾಲಿಕ ಬೇರೊಬ್ಬನು; ಸರ್ವ ಸ್ವತಂತ್ರನು; ತನಗೆ ಬೇಕೆನಿಸಿದಾಗ ಈ ಗೂಡನ್ನು ಈಡಾಡಬಲ್ಲ; ಕಿತ್ತೆಸೆಯಬಲ್ಲ' ಎಂಬ ಸಂದೇಹ ಎಳ್ಳಷ್ಟೂ ಇಲ್ಲ.

ಎಲ್ಲೆಲ್ಲಿಯ ವಸ್ತುಗಳನ್ನೋ ಸಂಗ್ರಹಮಾಡಿದ ಗುಬ್ಬಿ, ಅದರಲ್ಲಿ ತನ್ನ ಒಡನಾಡಿಯನ್ನು, ಮೊಟ್ಟೆ-ಮರಿಗಳನ್ನೂ ಇರಿಸತೊಡಗುತ್ತದೆ. ಅದೇ ರೀತಿ ಈ ಜೀವಾತ್ಮನೆಂಬ ಗುಬ್ಬಿ ಸಹ ಪರಮಾತ್ಮನ ಸ್ವಾಮ್ಯದಲ್ಲಿರುವ ಲೋಕದ ಭವನದಲ್ಲಿ ಸಂಸಾರದ

ಗೂಡನ್ನು ಕಟ್ಟುತ್ತದೆ. ಧರೆ-ಧನ, ಮನೆ-ಮಠ, ಆಸ್ತಿ-ಪಾಸ್ತಿ ಮುಂತಾದವನ್ನು ಸಂಗ್ರಹಿಸಿ ತನ್ನ ಜಂಜಾಟದ ಗೂಡನ್ನು ಬಲಪಡಿಸುತ್ತಾ ಹೋಗುತ್ತದೆ. ಅದರಲ್ಲಿ ಸತಿ-ಸುತರಿಗೆ, ಬಂಧು-ಮಿತ್ರರಿಗೆ ಆಶ್ರಯಕೊಡುತ್ತಾ ಹೋಗುತ್ತದೆ. ಪುಸಕ್ಕನೆ ಹಾರಿಬಂದು ಒಂದು ಕಡ್ಡಿಯನ್ನು ಗೂಡಿಗೆ ಸೇರಿಸಿ, ತುಂಬಾ ಬಲಪಡಿಸಿದೆನೆಂದು ಸಂತೋಷ-ಸಂಭ್ರಮಗಳಿಂದ, ಅದಿನ್ನೆಂದೂ ಹಾಳಾಗದೆಂಬ ಆತ್ಮವಿಶ್ವಾಸದಿಂದ ಮತ್ತೆ ಪುರ್ರನೆ ಹಾರಿ ಹೋಗಿ, ಅಹೋರಾತ್ರಿ ದುಡಿದು ದುಡಿದು ಹಣ್ಣಾಗುತ್ತದೆ ಗುಬ್ಬಿ: ಹಾಗೆ ಈ ಜೀವವೂ ಸಹ ಜೀವನದ ಸುಪ್ರಭಾತದಿಂದ ಹಿಡಿದು ಅಸ್ತಮಾನದವರೆಗೆ ಶ್ರಮಿಸಿ ಹಣ್ಣಾಗುತ್ತದೆ, ವಿಶ್ರಾಂತವಾಗಿ ದುಡಿದು ದಣಿಯುತ್ತದೆ, ಹೆಣ್ಣು-ಮಣ್ಣು-ಹೊನ್ನುಗಳ ಸಂಪಾದನೆಗಾಗಿ. ತಾನು ಕಟ್ಟಿಸಿದ ಭವನ, ಬೆಳೆಸಿದ ತೋಟ, ಅಭಿವೃದ್ಧಿಸಿದ ವ್ಯಾಪಾರ, ಹಿಡಿದ ಅಧಿಕಾರ ಎಲ್ಲವೂ ಸ್ಥಿರ, ಕೈಬಿಟ್ಟು ಹೋಗುವಂತಹುವಲ್ಲ ಎಂಬ ಅಖಂಡಶ್ರದ್ಧೆ. ಆದರೆ ಇದು ನಿಜವೆ?

ಮನೆಯ ಮಾಲಿಕನ ದೃಷ್ಟಿ ಯಾವ ಕ್ಷಣದಲ್ಲೋ ಬೀಳಬಹುದು. ಅವನ ಹಸ್ತಗಳು ಯಾವುದೇ ಕ್ಷಣದಲ್ಲಿ ಗೂಡನ್ನು ಕಿತ್ತೆಸೆಯಬಹುದು. ಹಾಗೆ ದೇವನ ಮನೆಯಾದ ಈ ಜಗದಲ್ಲಿ, ಅವನಿಗೂ-ಜೀವನಿಗೂ ಮಧ್ಯೆ ಆಗಿರುವ ವರುಷ, ದಿವಸ ಮತ್ತು ನಿಮಿಷಗಳ ಕರಾರು ಮುಗಿಯುತ್ತಲೇ ಈ ಜೀವಿ ತನ್ನ ವಸತಿಯನ್ನು ಕೀಳಲೇಬೇಕು.

ಸರ್ವಕರ್ತೃ ಕೂಡಲ ಸಂಗಯ್ಯನೆಂದರಿಯದೆ ಭ್ರಮೆಯಿಂದ ಕೆಡುವ ಈ ಲೋಕಿಕರ ವ್ಯವಹಾರ ಕಂಡು ವಿಷಾದವನ್ನು ವ್ಯಕ್ತಪಡಿಸುತ್ತಾರೆ ಬಸವಣ್ಣನವರು. 'ಕರ್ತನಪ್ಪೇ ಈ ಮನೆಯ ಮಾಲಿಕ; ತಾನು ಬಂದು, ಇದ್ದು ಹೋಗುವವನು ಎಂಬ ಅರಿವು ಬಹಳಷ್ಟು ಜನಕ್ಕೆ ಇರದು' ಎಂದು ವ್ಯಥೆಪಡುತ್ತಾರೆ.

"ಹಾಗಾದರೆ ಮನೆಯನ್ನು ಕಟ್ಟಲೇ ಬಾರದೆ? ಬದುಕನ್ನು ಬದುಕ ಬಾರದು ಎಂಬ ನಿರಾಶಾವಾದಿಗಳೇ ಬಸವಣ್ಣನವರು?" ಎಂಬ ಸಂದೇಹ ಉದಿಸುವದು ನಿಜ. ಇಲ್ಲಿ ನಿರಾಶಾವಾದಿಗಳಾಗಲು, ಬದುಕನ್ನು ಬದುಕದಿರಲು, ಅಥವಾ ಅದರಿಂದ ತಪ್ಪಿಸಿಕೊಳ್ಳಲು ಹೇಳುವವರಲ್ಲ ಬಸವಣ್ಣನವರು. ನಿರ್ಲಿಪ್ತ ಪ್ರಜ್ಞೆಯನ್ನು ಬೆಳೆಸುವ ಆಧ್ಯಾತ್ಮವಾದಿಗಳು ಮಾತ್ರ. "ಹೋರಿ ಹೋರಿ ಸಾಯುತ್ತಿದೆ ಜೀವ" ಎಂಬಷ್ಟೇ ನಿಲ್ಲಿಸಿದ್ದರೆ, ಬಸವಣ್ಣನವರು ಇಹಲೋಕದ ಬಾಳ್ವೆಕಂಡು ಜಿಗುಪ್ಸೆಪಟ್ಟು, ನಿರಾಶೆ ವ್ಯಕ್ತಪಡಿಸಿದವರು ಎನ್ನಬಹುದಿತ್ತು. ಆದರೆ ಪರಿಸ್ಥಿತಿ ಹೀಗಿಲ್ಲ; ಕಡೆಯ ವಾಕ್ಯದಲ್ಲಿ ಬಾಳುವ ಬಗೆ ಕಲಿಸುತ್ತಾರೆ. "ನಾನು, ನಾನು ಕಟ್ಟಿದ ವ್ಯವಹಾರದ ಜಾಲ, ಹೆಂಡತಿ-ಮಕ್ಕಳು, ಬಂಧು-ಬಾಂಧವರು ಈ ಎಲ್ಲವುಗಳ ಒಡೆತನ ಪರಮಾತ್ಮನದು,

ತಾನೇನಿದ್ದರೂ ಅವನು ಆಜ್ಞಾಪಿಸಿದಲ್ಲಿ ಕಾರ್ಯ ನಿರ್ವಹಿಸುವ ಸೇವಕ" ಎಂಬ ನಿರ್ಲಿಪ್ತ ಪ್ರಜ್ಞೆ ಅಳವಟ್ಟರೆ ಸ್ವಾರ್ಥ ಕಡಿಮೆಯಾಗುವುದು.

ಓರ್ವ ಸೌಕರದಾರ ತಾನೆಲ್ಲಿ ನೆಲೆಸಬೇಕೆನ್ನುವನೋ ಅಲ್ಲಿ ಸಂಪೂರ್ಣ ಗಮನವನ್ನು ಹರಿಸಿ, ವರ್ಗಾವಣೆಯಾಗುವ ಜಾಗಗಳಲ್ಲಿ ಹೆಚ್ಚಿನ ಆಸ್ತಿ ಬೆಳೆಸಿಕೊಂಡು ಪೇಚಾಡದಂತೆ, 'ನಾವು ನಿಜವಾದ ನೆಲೆಪಡೆಯಬೇಕಾದುದು ದೇವನರಮನೆಯಲ್ಲಿ; ಇಲ್ಲಿಂದ ವರ್ಗವಾಗಿ ಹೋಗುವವರು' ಎಂಬ ನಿರ್ಲಿಪ್ತತೆ ಅಳವಟ್ಟರೆ, ಸ್ವಾರ್ಥ, ದುರಾಶೆ ಕಡಿಮೆಯಾಗಿ ಲೌಕಿಕ-ಪಾರಮಾರ್ಥಗಳನ್ನು ಕೂಡಿ ನಡೆಸುವ ಕಡುಜಾಣನಾಗುತ್ತಾನೆ ಈ ಜೀವಿ.

(೮ನೇ ಪುಟದಿಂದ)

ಎಂದು ನಾವೂ ಗುರು, ಲಿಂಗ, ಜಂಗಮವನ್ನು ಅರ್ಥೈಸಿದರೆ ವಿಶೇಷ ಅರ್ಥ ಗೋಚರವಾಗದಿರದು.

೧. ಗುರು ಅಂದರೆ ಧರ್ಮಗುರು ಬಸವಣ್ಣನಿಗೆ ಶರಣಾಗಿ ನನ್ನ ತನುವನ್ನು ಅವನ ತತ್ತ್ವದ ಆಚರಣೆಗೆ, ಪ್ರಚಾರಕ್ಕೆ ಬಳಸುತ್ತೇನೆ.

೨. ಲಿಂಗ ಎಂದರೆ ಜಗದಾದಿ ಕರ್ತೃ ಪರಮಾತ್ಮನಿಗೆ, ಅವನ ಪ್ರತಿರೂಪವಾದ ಇಷ್ಟಲಿಂಗಕ್ಕೆ ನನ್ನ ಮನವನ್ನಿತ್ತು ಧ್ಯಾನಾಸಕ್ತನಾಗುತ್ತೇನೆ.

೩. ಜ್ಞಾನಿಗಳ ಒಕ್ಕೂಟವಾದ, ಧರ್ಮಾನುಯಾಯಿಗಳ ಒಕ್ಕೂಟವಾದ ಜಂಗಮದ ಅಂದರೆ ಸಮಾಜದ ಹಿತಕ್ಕಾಗಿ ಧನವನ್ನು ಸವೆಸುತ್ತೇನೆ.

ವಿಚಾರ ಪೂರಿತ ಈ ಅರ್ಥ ವಿವರಣೆ ಅಳವಟ್ಟರೆ ಅನೇಕ ಸಂದೇಹ ಗೊಂದಲ ಪರಿಹಾರವಾಗದೆ ಇರವು. ವ್ಯಕ್ತಿ ಪೂಜೆ ತಪ್ಪಿ, ಧರ್ಮಗುರು ಮತ್ತು ತತ್ತ್ವದ ಆರಾಧನೆಗೆ ಅನುಕೂಲವಾಗುವುದು. ಸಮಾಜದ ಚಿತ್ತ ಈ ಕಡೆ ಹರಿಯುವುದೆಂದು ಹಾರೈಸುವೆ. ★

—ಮಾತೆ ಮಹಾದೇವಿ

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ। ಶಿವಮತಕೆ
ಬಸವ ಓಂಕಾರ ಶಿವನಾಮ॥
ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ। ನಿಜದೀಪ
ಬಸವನೇ ಸಗ್ಗ ಸೋಪಾನ॥

ಸಮಸ್ಯೆ ಸಮಾಧಾನ!

—ಪ್ರಭಾಂಡ ಪಂಡಿತ, ಬೀದರ.

** "ಕಾಯಕವೇ ಕೈಲಾಸ" ಎಂದು ಬೋಧಿಸಿದ ವಿಶ್ವಗುರು ಬಸವಣ್ಣನವರ ಜಯಂತಿಗೆ ರಜೆ ಕೇಳುವುದು ವಿರೋಧಾಭಾಸವಲ್ಲವೆ ?

* ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ ಇಂತಹ ಇನ್ನೂ ನೂರೆಂಟು ತತ್ವಗಳನ್ನು, ಆದರ್ಶಗಳನ್ನು ಬೋಧಿಸಿರುವ ಬಸವಣ್ಣನವರ ಜೀವನ ಮತ್ತು ಸಂದೇಶಗಳನ್ನು ಮೆಲುಕಾಡಿಸಲು, ಚಿಂತನೆ ಮಾಡಲು ಅಂದು ರಜೆ ನಮಗೆ ಅವಶ್ಯಕ. ಇದು, ಒಂದು ನಾಡು ತನ್ನ ನೇತಾರರಿಗೆ ಗೌರವ ಸಮರ್ಪಿಸುವ ವಿಧಾನ.

—ಬಸವ ಕುಮಾರ, ಕೋಳಾರ.

** ಲಿಂಗಾಯತ ಸಮಾಜ ಬಲಗೊಂಡು ಬೆಳೆಯುವದೆಂದು ?

* ಮುಂದುವರಿಯುವವರನ್ನು ಕಂಡು ಮತ್ಸರಿಸುವುದನ್ನು ಬಿಟ್ಟಾಗ. ಮತ್ತೊಬ್ಬರು ಒಳ್ಳೆಯ ಕಾರ್ಯಮಾಡಿ ಶ್ರೇಯಸ್ಸು-ಕೀರ್ತಿ ಗಳಿಸಿಕೊಳ್ಳುವುದನ್ನು ತಪ್ಪಿಸಲು ಆಗಬಹುದಾದ ಒಳ್ಳೆಯ ಕಾರ್ಯಕ್ಕೆ ಕಲ್ಲು ಹಾಕುವ ಧೂರ್ತ ಜನರಲ್ಲಿ ಹೃದಯ ಪರಿವರ್ತನೆಯಾದಾಗ.

—ಹೆಸರು ಬೇಡ, ಊರು ಮೊದಲೇ ಬೇಡ.

** ಒಂದು ಬಹುದೊಡ್ಡ ಮಠ, ಆಸ್ತಿಯೂ ಹೇರಳ. ಈಗಿರುವ ಸ್ವಾಮಿಗಳ ಸಂಬಂಧಿ ನಾನಾದ್ದರಿಂದ ಮುಂದಿನ ಅಧಿಕಾರಿಯನ್ನಾಗಿ ಆರಿಸಲಿದ್ದಾರೆ. ನನಗೆ ಧರ್ಮದಲ್ಲಿ ಶ್ರದ್ಧೆಯಿಲ್ಲ, ಆ ಜೀವನದಲ್ಲಿ ನಿಷ್ಠೆಯಿಲ್ಲ. ಆಸ್ತಿ ಅಪಾರ, ಅನಾಯಾಸವಾಗಿ ಬರುವದನ್ನು ಏಕೆ ಬಿಡಬೇಕೆಂಬ ಆಸೆ. ಏನುಮಾಡಲಿ ? ನಿಮ್ಮ ಸಲಹೆ ತಿಳಿಸಿರಿ.

* ಆಸ್ತಿಯ ಆಸೆಗಾಗಿ ಮಠಾಧಿಕಾರಿಯಾಗುವ ಆತ್ಮವಂಚನೆ ಬೇಡ. "ಎಲ್ಲವನ್ನೂ ಕಳೆದುಕೊಂಡರೂ ಚಿಂತೆಯಿಲ್ಲ ಧರ್ಮಕ್ಕಾಗಿ ಪ್ರಾಣಕೊಡಲು ಸಿದ್ಧ," ಎಂಬ ಛಲವಿದ್ದರೆ ಮಾತ್ರ ಮಠಾಧಿಕಾರಿಯಾಗಿರಿ. ಯೋಗ್ಯತೆ ಇದ್ದವರ ಕೈಯಲ್ಲಿ ಮಾತ್ರ ಹಣ, ಜ್ಞಾನ, ಅಧಿಕಾರ ಯಾವಾಗಲೂ ಶೋಭಿಸುತ್ತವೆ; ವಂಚಕರ ಕೈಯಲ್ಲಿ ಅವು ವಿನಾಶಕ್ಕೆ ಕಾರಣವಾಗುತ್ತವೆ.

—ಶ್ರೀ. ಜಿ. ಪಾಟೀಲ, ಬೆಳಗಾಂ.

** ಪುರುಷನಿಗೆ ಹೆಚ್ಚಿನ ವಿಶ್ವಾಸವಿರುವುದು ತಾಯಿ, ತಂದೆ, ಅಥವಾ ಗುರು, ಯಾರ ಮಾತಿನಲ್ಲಿ ?

* ಈ ಯಾರ ಮಾತಿನಲ್ಲೂ ಅಲ್ಲ, ಹೆಂಡತಿಯ ಮಾತಿನಲ್ಲಿ.

—ಪ್ರಕಾಶ, ಹಿರೇಗಂದೂರು.

** ಕುತಂತ್ರ ಬುದ್ಧಿಯ ಓರ್ವನನ್ನು ಸಮಾಧಾನಿಸಲು ಸಮ್ಮೇಳನ ಸಮಿತಿಯೊಂದರ ಅಧ್ಯಕ್ಷನನ್ನಾಗಿಮಾಡಿದರು. ಆಗಬಹುದಾದ ಎಲ್ಲಾ ಒಳ್ಳೆ ಕಾರ್ಯಗಳಿಗೆ ಅವನು ಕಲ್ಲು ಹಾಕುವ ಯತ್ನವನ್ನೇ ಮಾಡಿದ. ನಿಮ್ಮ ಅಭಿಪ್ರಾಯವೇನು ?

* ಕೋತಿಯ ಕೈಯಲ್ಲಿ ಕತ್ತಿಯನ್ನು ಕೊಟ್ಟ ನಿಮ್ಮ ಮೂಢತ್ವಕ್ಕೆ ನಾಚಿಕೊಂಡು ಮರುಗುತ್ತೇನೆ.

—ಶಾಂತಮಲ್ಲಪ್ಪ, ಒಂದೂರು.

** ಮಠಾಧಿಕಾರಿಗಳಿಂದಲೇ ಸಮಾಜವು ಹಾಳಾಗಿರುವದೆಂದು ನನ್ನಭಿಪ್ರಾಯ. ತಮ್ಮ ಅಭಿಪ್ರಾಯ ?

* ಯಾರೋ ಕೆಲವರು ಕಾರ್ಯಮಗ್ನರಾಗದೆ, ಸೋಮಾರಿಗಳಾಗಿ, ವಂಚಕರಾದ ಮಾತ್ರಕ್ಕೆ ಎಲ್ಲರನ್ನೂ ದೂಷಿಸುವದು ತಪ್ಪು. "ಅಲ್ಪ ಸ್ವಲ್ಪ ವಿದ್ಯಾಸಂಸ್ಕಾರವಾಗಿ, ಶಿಕ್ಷಿತರ ಸಂಖ್ಯೆ ವೃದ್ಧಿಯಾಗಲು ಕರ್ನಾಟಕದಲ್ಲಿ ಮಠಗಳದ್ದು ಪ್ರಮುಖ ಪಾತ್ರವಿದೆ" ಎಂದರಿಯದಿದ್ದರೆ ಕೃತಘ್ನತೆಯಾಗುತ್ತದೆ. ಒಬ್ಬ ದುರಾಚಾರಿ ಇಂಜನಿಯರನನ್ನು ನೋಡಿ, ಆ ವರ್ಗವನ್ನೇ ದೂಷಿಸುವದು ತಪ್ಪು.

—ಮನೋಹರ ಚಂದ್ರ, ಊರಿಲ್ಲ.

** ನಾನೊಬ್ಬ ಪತ್ರಿಕೋದ್ಯಮಿ. ನನ್ನ ಪತ್ರಿಕೆಯಲ್ಲಿ ಯಾರನ್ನಾದರೂ ಕುರಿತು ಕುತ್ಸಿತ ಲೇಖನ ಬರೆದು ನಿಂದೆ ಮಾಡಿದರೆ ಅವರ ವಿರೋಧಿಗಳು ಹಣ ಕೊಡುವರು; ಬರೆಸಿ ಕೊಂಡವರೂ ಬಾಯಿ ಮುಚ್ಚಲು ಹಣ ಕೊಡುವರು. ಅದೇ ವಸ್ತುನಿಷ್ಠ ಲೇಖನ ಬರೆದಾಗ ಇಂಥಾ ಪ್ರಾಪ್ತಿ ಆಗದು. ನನಗೆ ಸಲಹೆ ಕೊಡಿ.

* ನಾಲ್ಕು ಜನ ವಿಚಾರವಂತರ, ಪ್ರೌಢಮತಿಗಳ ತಲೆಯಲ್ಲಿ ನಿಮ್ಮ ಪತ್ರಿಕೆಗೆ ಸ್ಥಾನ ಬೇಕಾದರೆ ಉನ್ನತ ಮಟ್ಟ ಕಾಯ್ದುಕೊಳ್ಳಿ. ನಾಯಿಕೊಡೆಯಂತೆ ಅಲ್ಪ ಬಾಳಿ ಸಾಯಬೇಕೆಂಬುದಿದ್ದರೆ ಯಾವ ಅಡ್ಡದಾರಿ ಬೇಕಾದರೂ ಹಿಡಿಯಿರಿ. ಧನದ ಸಂಪಾದನೆಯೊಂದನ್ನೇ ಗುರಿಯಾಗಿರಿಸಿಕೊಳ್ಳಬೇಡಿ, ಜ್ಞಾನ ವಿತರಣೆಯನ್ನು ಧ್ಯೇಯವಾಗಿರಿಸಿಕೊಳ್ಳಿ.

—**ಚಂದ್ರಕಾಂತ ಸ್ವಾಮಿ, ಅವರಾದ**

** ಶತ್ರುವಿಗೂ, ಹಿತಶತ್ರುವಿಗೂ ವ್ಯತ್ಯಾಸವೇನು ? ಯಾರು ಹೆಚ್ಚು ಅಪಾಯಕಾರಿ ?

* ಒಂದು ವ್ಯಾಘ್ರ ಇನ್ನೊಂದು ಗೋಮುಖವ್ಯಾಘ್ರ. ಹುಲಿ ಬಂದಾಗ ನೀವು ಅರಿತು, ಮೊದಲೇ ಸಜ್ಜಾಗಿರುತ್ತೀರಿ; ಗೋವಿನ ಮುಖಹೊದ್ದ ಹುಲಿ ಬಂದಾಗ ನಂಬಿ, ಆರಾಮವಾಗಿರುತ್ತೀರಿ. ಆದ್ದರಿಂದ ಎರಡನೆಯದೇ ಅಪಾಯಕಾರಿ.

—**ಸೂರ್ಯಕಾಂತ, ಭದ್ರಾವತಿ.**

೧. ತಮ್ಮಂತಹ ಪ್ರತಿಭಾವಂತರು ಕೇವಲ ಧಾರ್ಮಿಕರಂಗವನ್ನು ಹಿಡಿಯುವುದು ಬಿಟ್ಟು ರಾಜಕೀಯ ರಂಗಕ್ಕೆ ಏಕೆ ಬರಬಾರದು ?

** ಪ್ರತಿಭಾವಂತರು ರಾಜಕೀಯ ರಂಗದಲ್ಲಿ ಅವಶ್ಯವೆಂದಾದರೆ, ಧಾರ್ಮಿಕ ರಂಗದಲ್ಲಿ ಇನ್ನೂ ಅವಶ್ಯಕ. ಜನರ ಮನೋಭೂಮಿಕೆಯನ್ನು ರೂಪಿಸುವವರು ಅವರಾದ ಕಾರಣ ಪ್ರತಿಭಾವಂತರು, ನಿಶಿತ ಮತಿಗಳು ಹೆಚ್ಚು ಹೆಚ್ಚು ಧಾರ್ಮಿಕ ರಂಗದಲ್ಲಿ ಬೇಕು.

೨. ತಾವು ನೇರವಾದ ರಾಜಕೀಯಕ್ಕೆ ಏಕೆ ಇಳಿಯಬಾರದು ?

ಧರ್ಮ ಪ್ರಸಾರ, ಸಾಹಿತ್ಯ ಪ್ರಕಟಣೆ, ಜ್ಞಾನ ವಿತರಣೆ, ಜನಸೇವೆ ಮುಂತಾದ ಧರ್ಮ ಗುರುಗಳು ಮಾಡಬೇಕಾದ ಆದ್ಯಕರ್ತವ್ಯವೇ ಬೆಟ್ಟದಷ್ಟಿರುವಾಗ, ಇದನ್ನು ಕಡೆಗಣಿಸಿ ಅತ್ತ ಹೋಗುವುದು ಯಾವ ನ್ಯಾಯ ? ನೀವೇ ಹೇಳಿ.

೩. ನೀವು ಯಾವ ಪಕ್ಷದ ಬೆಂಬಲಿಗರು ?

ಜನ ಸೇವೆ-ರಾಷ್ಟ್ರ ಸೇವೆಯನ್ನು ನಿಷ್ಠೆಯಿಂದ ಮಾಡಬೇಕೆನ್ನುವ ಯಾವುದೇ ವ್ಯಕ್ತಿ, ಯಾವುದೇ ಪಕ್ಷದಲ್ಲಿರಲಿ, ಅವನ ಪಕ್ಷ (ಆ ಪಕ್ಷದವರಲ್ಲ) ಪಾತಿಗಳು.

—**ಸುಂದರ ಪ್ರಭು, ಮಂಗಳ ಪ್ರಭು.**

** ಕೆಲವರು ಮುಂಜಾಗ್ರತೆ ವಹಿಸದ ಕಾರಣ ಪೆಟ್ಟುತಿನ್ನುತ್ತಾರೆ; ಆದರೆ ಯಾರಾದರೂ ಬುದ್ಧಿವಾದ ಹೇಳಹೋದರೆ ಅವರನ್ನೇ ತಪ್ಪುತಿಳಿಯುತ್ತಾರೆ. ಅಂಥವರಿಗೆ ತಿಳಿಹೇಳುವ ಬಗೆ ಹೇಗೆ ?

* ಅಪಾಯದ ಮುನ್ನೆಚ್ಚರಿಕೆಯಿಂದ ಮೊದಲೇ ವಿಪತ್ತನ್ನು ತಪ್ಪಿಸಿಕೊಳ್ಳುವವರು ಒಂದು ಪ್ರಕಾರದ ಜನ; ಅಪಾಯ ಒದಗಿದಾಗ ಹೇಗೋ ತಪ್ಪಿಸಿಕೊಳ್ಳುವವರು

ಇನ್ನೊಂದು ಬಗೆ; ಅಪಾಯ ಬಂದು ಹೋದನಂತರ ಅರಿಯುವವರು ಮತ್ತೊಂದು ಬಗೆ. ನೇರವಾಗಿ ಊರು ಸೇರುವ ಪುಣ್ಯವಿಲ್ಲದೆ ಸುತ್ತು ಬಳಸಿನ ಹಾದಿ ಹಿಡಿಯುವವರು ಈ ಮೂರನೆಯ ಪ್ರಕಾರದವರು. ಅಂಥವರಿಗೆ ಬುದ್ಧಿ ಹೇಳ ಹೋಗುವವರದೇ ಮಹಾಮೂರ್ಖತನ.

—**ಮಹಾದೇವ ಎಸ್.ಸಜ್ಜನ, ಭೈರನಾಡಗಿ.**

** ಹೆಣ್ಣು, ಹೊನ್ನು, ಮಣ್ಣು–ಈ ಮೂರರಲ್ಲಿ ಹೆಚ್ಚಿನ ದಾಹ ಹುಟ್ಟಿಸುವದು ಯಾವುದು ?

* ಅಧಿಕಾರವು ಈ ಮೂರಕ್ಕಿಂತಲೂ ಹೆಚ್ಚಿನ ದಾಹಕ್ಕೆ ಕಾರಣ. ಇದಿದ್ದರೆ ಆ ಮೂರು ಕರಗತವಾಗುತ್ತವೆ ಎಂಬ ಅರಿವು ಅವನಿಗೆ ಇರುತ್ತದೆ.

—**ಸುಶೀಲಾ ಕೃಷ್ಣಯ್ಯ, ರಾಜಾಜಿನಗರ.**

** ಕಲ್ಯಾಣ ಕಿರಣಕ್ಕೆ ತ್ರೈವರ್ಣ ಮುಖಪುಟ ನೀಡಿ ಅದರ ಆಕರ್ಷಣೆ ಹೆಚ್ಚಿಸಬಾರದೇಕೆ ಹೇಳಿ ?

* ಚಿನ್ನದ ಪಾತ್ರೆಗೆ ಮುಚ್ಚಿರುವ ಕಣ್ಣುಕೋರೈಸುವ ಮುಚ್ಚಳವನ್ನು ನೋಡುತ್ತ ಪಾತ್ರೆಯೊಳಗಣ ಸತ್ಯಸೂರ್ಯನನ್ನು ಮರೆತು ಬಿಡುವ ಮನೋಭಾವ ಮನುಷ್ಯನದಾದ ಕಾರಣ, ಸರಳವಾದ ಹೊದ್ದಿಕೆ ಸಾಕು. ಒಳಗಿನ ಹೂರಣದಿಂದ ಹೊರಗಿನ ಕವಚಕ್ಕೆ ಬೆಲೆ ಬಂದರೆ ಆಯಿತಲ್ಲವೆ ?

—**ಚಂದ್ರೇಗೌಡ, ಮಂಚನಕುಪ್ಪೆ.**

** ಒಂದು ಮನೆಯ ಹಿರಿಯ ಮಗನ ಹೆಂಡತಿ ಅತ್ಯಂತ ಸೌಜನ್ಯ ಶೀಲೆಯಾಗಿ ತನ್ನ ಮೈದುನ, ನಾದಿನಿಯರನ್ನು ನೋಡಿಕೊಂಡಿದ್ದಳು. ಎರಡನೆ ಸೊಸೆ ಬರುತ್ತಲೇ ಪೂರ್ಣ ಬದಲಾಗಿದ್ದಾಳೆ. ಆಗ ರಸಸಂಗವಾದ ಮನೆ ಈಗ ಸಮರಾಂಗಣವಾಗಿದೆ !

* ಏನು ಮಾಡುವುದಪ್ಪ; ಹೆಣ್ಣು ಒಂದು ಮನೆಗೆ ಒಬ್ಬಳೇ ಇದ್ದಾಗ ಲಕ್ಷ್ಮಿಯಾಗಿದ್ದವಳು, ಇನ್ನೊಂದು ಬರುತ್ತಲೇ ಬ್ರಹ್ಮರಾಕ್ಷಸಿಯಾಗುವಳು. ★

ನ ಗೆ ಹ ನಿ

ಕಳ್ಳನೊಬ್ಬ ಕಾಯಿಗಳನ್ನು ಕೀಳಲು ತೆಂಗಿನ ಮರ ಹತ್ತಿದ. ಯಜಮಾನ ಬರುತ್ತಿರುವುದನ್ನು ಕಂಡು ಸರಸರ ಇಳಿಯಲಾರಂಭಿಸಿದ.

ಯಜಮಾನ : ಏಯ್ ಕಳ್ಳ, ಯಾಕೋ ತೆಂಗಿನ ಮರ ಹತ್ತಿದೆ?

ಕಳ್ಳ : ಹುಲ್ಲು ಕೊಯ್ಯಾಕ್ರಿ.

ಯಜಮಾನ : ಕಳ್ಳನನ್ಮಗ್ನೇ ತೆಂಗಿನ ಮರದ ಮ್ಯಾಲೆ ಹುಲ್ಲು ಇರುತ್ತೇನೋ?

ಕಳ್ಳ : ಅದಕ್ಕೇ ಇಳೀತಾ ಇದೋನು, ಕಾಣ್ತಿಲ್ವೇನ್ರಿ.

ಸ್ಫುರಣ - ಕಿರಣ

—ಸಂಗ್ರಹ : ಮಾಕಾಣಿ

ಮನೆಯ ಒಳಹೋಗಲು ಕೀಲಿಕೈ

ಹವಾಸೇವನೆಗೆ ತಿರುಗಾಡಲು ಹೋಗಿ ಮರಳಿ ಬಂದರು ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು. ಅವರ ಕೋಣೆಯ ಕೀಲಿಕೈಯನ್ನು ಹುಡುಕಲು ಶಿಷ್ಯನು ತಡಕಾಡಲು ತೊಡಗಿದನು. "ಮನೆ ಎಷ್ಟು ದೊಡ್ಡದಾದರೇನು, ಕೀಲಿಕೈ ಇರದಿದ್ದರೆ ಕೀಲಿಯನ್ನು ತೆಗೆಯಲು ಬರುವುದಿಲ್ಲವಷ್ಟೆ. ಸಣ್ಣದಾದ ಬೀಗದಕೈ ಸಿಕ್ಕರೆ ಬೃಹತ್ತಾದ ಮಂದಿರದೊಳಕ್ಕೆ ಪ್ರವೇಶಿಸಬಹುದಾದಂತೆ, ತಾತ್ತ್ವಿಕ ದೃಷ್ಟಿಕೋನ (philosophical outlook) ಇಲ್ಲದಿದ್ದರೆ ಕ್ರಮಬದ್ಧವಾಗಿ ಧರ್ಮವನ್ನೂ ಅರಿಯಲು ಸಾಧ್ಯವಿಲ್ಲ. ಕೇವಲ ಸಾಹಿತ್ಯ ಸಂಸ್ಕಾರವಾಗಿ ತಾತ್ತ್ವಿಕ ವಿವೇಚನೆಮಾಡುವ ದೃಷ್ಟಿಕೋನ ಅಳವಡದಿದ್ದರೆ ಧಾರ್ಮಿಕ ಸಾಹಿತ್ಯವನ್ನು ವಿಶ್ಲೇಷಿಸುವದು ಅಸಾಧ್ಯ." ಎಂದರು.

ನೀರಿನ ಒತ್ತಡ

ಚಾಮರಾಜನಗರದಲ್ಲಿ ಪ್ರವಚನ ನಡೆಯುತ್ತಿತ್ತು. ಒಂದು ನಲ್ಲಿಯಲ್ಲಿ ನೀರು ಬಂದರೆ ಇನ್ನೊಂದರಲ್ಲಿ ಬರುತ್ತಿರಲಿಲ್ಲ. ಕಾರಣ ನೀರಿನ ಒತ್ತಡ ಅಧಿಕವಿಲ್ಲವಾದುದು. ಒಂದು ನಿಲ್ಲಿಸಿ ಮತ್ತೊಂದೆಡೆ ನೀರು ಬಿಟ್ಟುಕೊಳ್ಳಬೇಕಾಗುತ್ತಿತ್ತು. ಆಗ ನಲ್ಲಿಯನ್ನು ತಿರುವಿದೆ. ನೀರು ಬರಲಿಲ್ಲ. ಮತ್ತೊಂದನ್ನು ನಿಲ್ಲಿಸಲು ಹೇಳಿದೆ. ತಕ್ಷಣ ಒಂದು ವಿಚಾರ ಸ್ಫುರಿಸಿತು. "ನೀರಿನ ಒತ್ತಡ ಕಡಿಮೆ ಇದ್ದಾಗ ಒಂದು ನಲ್ಲಿಯಲ್ಲಿ ಬಂದರೆ ಇನ್ನೊಂದರಲ್ಲಿ ಬರದು, ಅಧಿಕವಿದ್ದಾಗ ಎಲ್ಲಾದರಲ್ಲಿ ಬರುವುದು." ಹಾಗೆಯೇ ಜ್ಞಾನಶಕ್ತಿ ಅತ್ಯಧಿಕವಿದ್ದಾಗ ಅದು ಸಾಹಿತ್ಯ, ವಾಣಿ, ಸಮಾಜಸೇವೆ ಎಲ್ಲದರಲ್ಲೂ ವ್ಯಕ್ತವಾಗುವುದು. ಅಲ್ಪವಿದ್ದಾಗ ಒಂದರಲ್ಲಿ ವ್ಯಕ್ತವಾದರೆ ಇನ್ನೊಂದರಲ್ಲಿ ನಾಸ್ತಿಯಾಗುವುದು. ಅಂತೆಯೇ ಕೆಲವರಿಗೆ ಉತ್ತಮ ಬರವಣಿಗೆ ಇರುತ್ತದೆ; ಅಷ್ಟೇ ಪರಿಣಾಮಕಾರಿಯಾದ ವಾಗ್ಮಿತ್ವವಿರದು; ಇನ್ನು ಕೆಲವರಿಗೆ ವಾಗ್ಮಿತ್ವವಿರುತ್ತದೆ; ಅಷ್ಟೇ ಪರಿಣಾಮ

ಕಾರಿಯಾದ ಸಾಹಿತ್ಯ ಅಭಿವ್ಯಕ್ತ ಇರದು. ಆದರೆ ಗಳಿಕೆ ಅಧಿಕವಿದ್ದಾಗ ಎಲ್ಲದರಲ್ಲೂ ವ್ಯಕ್ತವಾಗುತ್ತದೆ.

ಬಲ್ಬು ಮತ್ತು ವಿದ್ಯುತ್

ನಮ್ಮಾಶ್ರಮದ ಶರಣೆ ಗಂಗಮ್ಮ ಚಾಮರಾಜನಗರದಲ್ಲಿ ಪ್ರವಚನ ವಿದ್ದಾಗ, ಸನಿಹದ ಒಂದು ಹಳ್ಳಿ, ಸೋಮವಾರಪೇಟೆಗೆ, ಪ್ರವಚನಮಾಡಲು ಹೋಗಿದ್ದಳು. ಪ್ರವಚನ ನಡೆಯುವಾಗ ಮಧ್ಯೆ ಒಮ್ಮೆ ವಿದ್ಯುತ್ ಸರಬರಾಜು ನಿಂತಿತು. ಐದು ನಿಮಿಷಾನಂತರ ಮತ್ತೆ ಪ್ರವಹಿಸಿತು. ಆಗ ಸಭೆಯನ್ನುದ್ದೇಶಿಸಿ ತನಗೆ ಸ್ಫುರಿಸಿದ ಒಂದು ವಿಚಾರವನ್ನು ಹೇಳಿದಳು. "ನೋಡಿ, ಇಲ್ಲಿ ಬಲ್ಬು ಇದ್ದವು, ಅದರೊಳಗೆ ತಂತಿ ಇದ್ದವು. ಆದರೆ ವಿದ್ಯುತ್ ಇಲ್ಲದಾಗ ಎಲ್ಲವೂ ನಿಷ್ಪ್ರಯೋಜಕವಾಯ್ತು. ಹಾಗೆಯೇ ದೇಹವೆಂಬ ಬಲ್ಬು ಇದ್ದು, ಪ್ರಾಣವೆಂಬ ತಂತಿಯಿದ್ದೂ, ಪರಮಾತ್ಮನ ಕಾರುಣ್ಯದ ವಿದ್ಯುತ್ ನಮ್ಮ ಜೀವನದಲ್ಲಿ ಪ್ರವಹಿಸದಿದ್ದರೆ ನಮ್ಮ ಬದುಕೆಲ್ಲ ಅಜ್ಞಾನದ ಕತ್ತಲೆಯಲ್ಲಿ. ವಿದ್ಯುತ್ತಿನಿಂದ ಈ ವಸ್ತುಗಳಿಗೆ ಬೆಲೆಬರುವಂತೆ, ದೈವೀಕಾರುಣ್ಯದಿಂದ ನಮ್ಮ ಬಾಳಿಗೆ ಬೆಲೆ.

ಊದಿನಕಡ್ಡಿ—ಸುವಾಸನೆ

ಅದೇ ಸಂದರ್ಭದಲ್ಲಿಯೇ, ಗಂಗಮ್ಮನ ಪ್ರವಚನ ಮುಂದುವರಿದಿತ್ತು. ಗ್ರಾಮಾಂತರ ಪ್ರದೇಶಗಳು ಮುಂದುವರಿಯದ ಹೊರತು ಭಾರತ ಮುಂದುವರಿಯದು ಎಂಬ ವಿಷಯದ ಪ್ರತಿಪಾದನೆ ನಡೆದಿತ್ತು. ಗ್ರಾಮಾಂತರ ಪ್ರದೇಶಗಳು ಮುಂದುವರಿಯಬೇಕಾದರೆ ವಿದ್ವಜ್ಜನ ಗೋಷ್ಠಿ, ವಿಚಾರ ವೇದಿಕೆ, ಶರಣರ ಸಂಗ ಮುಂತಾದವು ನಡೆಯಬೇಕು. ಸಾಮೂಹಿಕ ಪ್ರಾರ್ಥನೆ, ಧಾರ್ಮಿಕ ಸಭೆ ಅತ್ಯಾವಶ್ಯಕ ಎಂದು ಹೇಳುವಾಗ, ಸಾಮೂಹಿಕ ಪ್ರಾರ್ಥನೆಯು ಸಮಾಜ ಸಂಘಟನೆ ಮತ್ತು ಆತ್ಮೋದ್ಧಾರ ಎರಡಕ್ಕೂ ಸಹಾಯಕ ಎಂದು ನುಡಿದು, "ಇಲ್ಲಿ ಊದಿನಕಡ್ಡಿ ನಮ್ಮ ಸಲುವಾಗಿ ಅಂತ ಹಚ್ಚಿಟ್ಟರೂ ಎಲ್ಲರಿಗೂ ಅದರ ಸುವಾಸನೆ ಹೇಗೆ ತಲುಪುತ್ತೋ, ಹಾಗೆ ಅಂತಃಕರಣ ಸಂಪನ್ನನಾದ ಓರ್ವನ ಕರೆಗೆ ಓಗೊಟ್ಟು ದೈವೀಶಕ್ತಿ ಅವತರಣವಾದರೂ, ಸುತ್ತಲಿನವರಿಗೂ ಅದರ ಪ್ರಭಾವವಾಗುತ್ತೆ. ಊದಿನಕಡ್ಡಿ ಹತ್ತಿರ ಕುಳಿತವರಿಗೆ ಜಾಸ್ತಿ, ಸ್ವಲ್ಪ ದೂರಕುಳಿತವರಿಗೆ ಕಡಿಮೆ ವಾಸನೆ ಬಡಿದಂತೆ, ಹೆಚ್ಚಿನ ನಿರ್ಮಲಾಂತಃಕರಣವನ್ನು ಹೊಂದಿದವನಿಗೆ ಜಾಸ್ತಿ ಮತ್ತು ಸಾಮಾನ್ಯ ಸಾಧಕನಿಗೆ ಸ್ವಲ್ಪ, ಹೀಗೆ ಲಭ್ಯವಾಗುತ್ತದೆ."

ಕಾಡಿಗೆ—ಗೆದ್ದಿಲು

ತೆಂಗಿನ ಗಿಡವನ್ನು ಗಮನಿಸುತ್ತಿದ್ದೆ. ಒಂದು ಬಗೆಯ ಕಪ್ಪು ಚುಕ್ಕೆ ಗರಿಯನ್ನು ಬಳಸಿತ್ತು. ಪೋಷಕರನ್ನು ಕೇಳಿದಾಗ "ಇದು ಒಂದು ಬಗೆಯ ರೋಗ. ಮಳೆಯಾದರೆ

(೩೧ನೇ ಪುಟ ನೋಡಿ)

ದೃಷ್ಟಾಂತ ಕಥೆ

—ನಾತಾಜಿ

ಕೋಪವೆಂಬುದು ಮನಸ್ಸಿನ ಒಂದು ಉದ್ರಿಕ್ತ ಸ್ಥಿತಿ. ಇದು ದೈಹಿಕವಾಗಿ ಇನ್ನೊಬ್ಬರನ್ನು ಹೊಡೆಯುವದರಲ್ಲಿ, ಮಾತಿನಿಂದ ಕೆಟ್ಟದಾಗಿ ಬೈಯುವುದರಲ್ಲಿ, ಈ ಎರಡೂ ಸಾಧ್ಯವಾಗದಿದ್ದಾಗ ಮನಸ್ಸಿನಲ್ಲಿಯೇ ಅವರನ್ನು ಶಪಿಸಿ ಕೆಟ್ಟದ್ದು ಬಯಸುವುದರಲ್ಲಾಗಲೀ ವ್ಯಕ್ತವಾಗುತ್ತದೆ. ದುಡುಕು ಬುದ್ಧಿಯನ್ನು ಇದು ಕಲಿಸುವ ಕಾರಣ ಸಿಟ್ಟಿನ ಕೈಲಿ ಬುದ್ಧಿಯನ್ನು ಕೊಟ್ಟ ಮನುಷ್ಯ ಏನೇನೋ ಅನಾಹುತಗಳನ್ನು ಮಾಡುವ ಸಂಭವವಿದೆ. ಸಾಧ್ಯವಾದಷ್ಟು ಕೋಪವನ್ನು ಗೆಲ್ಲಬೇಕು. ಇದಕ್ಕೊಂದು ಪೌರ್ವಿಕ ದೃಷ್ಟಾಂತ.

ಒಬ್ಬ ಶಿಷ್ಯನು ಗುರುಕರುಣೆಯನ್ನು ಪಡೆಯಬೇಕೆಂದು ಒಬ್ಬ ಗುರುಗಳ ಆಶ್ರಮಕ್ಕೆ ಬಂದನು. ಅವನ ಸ್ವಭಾವ-ವೃತ್ತಿ ಇವುಗಳನ್ನು ಗಮನಿಸಲು ಗುರುಗಳು ಆಶ್ರಮದಲ್ಲಿ ಆಶ್ರಯಕೊಟ್ಟರು. ಒಂದು ವರ್ಷದ ನಂತರ ಅವನಿಗೆ ಉಪದೇಶ ಮಾಡಲು ಇಚ್ಛಿಸಿದರು. ಅಂದು ಬೆಳಿಗ್ಗೆ ಸ್ನಾನಮಾಡಿ ಶುಚಿರ್ಭೂತನಾಗಿ ಅವನು ಬರುವಾಗ ಆಶ್ರಮದ ಇನ್ನೋರ್ವ ಸೇವಕನನ್ನು ಕರೆದು ಸಾಧಕನ ಮೇಲೆ ಕಸ ಚೆಲ್ಲಲು ಹೇಳಿದರು. ಪೂಜಾಗೃಹಕ್ಕೆ ಸಾಧಕನು ಆತುರಾತುರವಾಗಿ ಬರುತ್ತಲಿದ್ದ. ಇಂದವನಿಗೆ ದೀಕ್ಷೆಯಾಗುವದೆಂದು ಬಹಳಷ್ಟು ಸಂತೋಷವಾಗಿತ್ತು. ಮಾರ್ಗಮಧ್ಯದಲ್ಲಿದ್ದಾಗ ಸೇವಕನು ಸಾಧಕನ ಮೇಲೆ ಕಸವನ್ನು ಚೆಲ್ಲಿ ಮುಸುರೆಯನ್ನು ಹಾಕಿದಾಗ ಇವನಿಗೆ ಕೋಪ ಕೆರಳಿತು, ಸಿಟ್ಟು ನೆತ್ತಿಗೇರಿತು. ಸರಕ್ಕನೆ ಸನಿಹದಲ್ಲಿದ್ದ ಕೋಲೊಂದನ್ನು ಸೆಳೆದುಕೊಂಡು ಸೇವಕನಿಗೆ ಪೆಟ್ಟುಹಾಕಿ, ಮತ್ತೆ ಸ್ನಾನಮಾಡಿ ಗುರುಗಳ ಬಳಿಗೆ ಹೋದ. ಅವರು ಮುಗುಳ್ನಕ್ಕು "ಯಾರಾದರೂ ಏನಾದರೂ ಕೆರಳಿಸಿದಾಗ ಮತ್ತೊಬ್ಬರನ್ನು ಹೊಡೆದು ಸೇಡು ತೀರಿಸಿಕೊಳ್ಳುವ ಮನೋಭಾವವೇ ಹೋಗಿಲ್ಲ. ನಿನಗೆಂತಹ ದೀಕ್ಷೆ" ಎಂದು ನಿರಾಕರಿಸಿ, "ನಿನ್ನ ಕೋಪದ ಮನೋಭಾವ ತೊರೆಯಬೇಕಾದರೆ ಇನ್ನಾರು ತಿಂಗಳು ಅನುಷ್ಠಾನಮಾಡು" ಎಂದರು.

ಸಾಧಕನು ಮತ್ತೆ ಅನುಷ್ಠಾನಕ್ಕೆ ತೊಡಗಿದ. ಆರು ತಿಂಗಳು ಕಳೆದಾದ ಬಳಿಕ ಗುರುಗಳು ದೀಕ್ಷೆಗೆ ಒಂದು ದಿನಾಂಕ ಗೊತ್ತುಪಡಿಸಿದರು. ಅಂದು ಸಹ ಸ್ನಾನಮಾಡಿ

ಮಡಿಯನ್ನುಟ್ಟು ಬರುವಾಗ ಕಸವನ್ನು ಚೆಲ್ಲಲು ಸೇವಕನಿಗೆ ಹೇಳಿದರು. ಸೇವಕನು ಕಸ-ಕಡ್ಡಿ, ಮುಸುರೆಯನ್ನು ಪಾತ್ರೆಯಲ್ಲಿ ತುಂಬಿ ಸಾಧಕನ ಮೇಲೆ ಚೆಲ್ಲಿದನು. ಆಗ ಆ ಸಾಧಕನು ಕೆರಳಿ ಕೆಟ್ಟಕೆಟ್ಟ ಮಾತುಗಳಿಂದ ಬೈದು, ಮರಳಿ ಹೋಗಿ ಮಿಂದು ಬಂದನು. ಸೂಕ್ಷ್ಮವಾಗಿ ಗಮನಿಸಿದ್ದ ಗುರುಗಳು ಹೇಳಿದರು, "ನಿನ್ನ ನಾಲಿಗೆಯು ಇನ್ನೂ ಸಂಸ್ಕರಣಗೊಂಡಿಲ್ಲ. ಕೆಟ್ಟ ಮಾತುಗಳನ್ನಾಡಿ ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯಿದೆ. ಆದ್ದರಿಂದ ಈ ಕೋಪವು ಅಡಗಬೇಕಾದರೆ ಇನ್ನಾರು ತಿಂಗಳು ಕಾಲ ಅನುಷ್ಠಾನಮಾಡು" ಎಂದರು. ನಿರಾಶೆಗೊಂಡ ಸಾಧಕ ಮತ್ತೆ ಆರು ತಿಂಗಳು ಕಳೆದು ದೀಕ್ಷೆಗಾಗಿ ಸಿದ್ಧನಾಗುವಾಗಲೇ ಗುರುಗಳು ಮತ್ತೊಮ್ಮೆ ಕಸ ಚೆಲ್ಲಲು ಸೇವಕನಿಗೆ ಹೇಳಿದರು. ಈ ಬಾರಿ ಕಸ ಚೆಲ್ಲಿದಾಗ ಸಾಧಕನು ಹೊಡೆಯಲೂ ಯತ್ನಿಸಲಿಲ್ಲ, ಬೈಯಲೂ ಇಲ್ಲ, ಒಮ್ಮೆ ಕೆಕ್ಕರಿಸಿ ಕೆಂಗಣ್ಣಿನಿಂದ ನೋಡಿ ಮರಳಿ ಹೋಗಿ ಮಿಂದು ಬಂದನು. ಆಗ ಗುರುಗಳು ಮುಗುಳ್ನಕ್ಕು ಹೇಳಿದರು: "ಮನಸ್ಸಿನಲ್ಲಿ ಸೇಡು ಇನ್ನೂ ಸುಪ್ತವಾಗಿಯೇ ಇದೆ. ನೀನೆಂತಹ ಸಾಧಕ, ನಿನ್ನಂತರಂಗದ ಕೋಪದ ಕಿಡಿ ಕಣ್ಣಿನಲ್ಲಿ ವ್ಯಕ್ತವಾಗಿದೆ. ಇದೂ ಸಿಟ್ಟಿನ ಪ್ರತಿರೂಪವೆ; ಅದೂ ಅಳಿಯಬೇಕು. ಅನುಷ್ಠಾನ ಮಾಡು ಹೋಗು" ಎಂದರು.

ಮರಳಿ ಆರು ತಿಂಗಳು ಸಾಧನೆಯಲ್ಲಿ ಸವೆದವು. ಒಂದು ದಿನ ದೀಕ್ಷೆಗಾಗಿ ದಿನವನ್ನು ಖಚಿತ ಮಾಡಲಾಯಿತು. ಅಂದು ಆ ಸಾಧಕನು ಮಿಂದು ಬರುತ್ತಲಿರುವಾಗ ಗುರುಗಳಿಂದ ಆಜ್ಞಪ್ತನಾದ ಸೇವಕ ಮುಮುಕ್ಷುವಿನ ಮೇಲೆ ಕಸವನ್ನು ಚೆಲ್ಲಿದನು. ಆಗ ಆ ಸಾಧಕನು ಶಾಂತ ಹೃದಯಿಯಾಗಿ ನಮಸ್ಕರಿಸಿ, "ಮಹಾನುಭಾವ ನಿನ್ನ ಉಪಕಾರ ಸ್ಮರಿಸಲದಳ. ನನ್ನ ಕಾಯದಲ್ಲಿ ವ್ಯಕ್ತವಾಗುತ್ತಿದ್ದ ತಮೋಗುಣಪ್ರಧಾನ, ಸ್ಥೂಲ ಕೋಪವನ್ನು ಕಡಿಮೆ ಮಾಡಿದೆ. ವಚನದಲ್ಲಿ ತೋರುತ್ತಿದ್ದ ರಜೋಗುಣ ಪ್ರಧಾನ ಸೂಕ್ಷ್ಮ ಕೋಪವನ್ನು ಕಳೆದೆ. ಮನಸ್ಸಿನಲ್ಲಿ ಹುದುಗಿದ್ದ ಸೂಕ್ಷ್ಮಾತಿಸೂಕ್ಷ್ಮ ಸಾತ್ವಿಕ ಕೋಪವನ್ನು ಬೇರು ಸಹಿತ ಕಿತ್ತುಹಾಕಿದೆ. ಆದ್ದರಿಂದ ನೀನು ನನ್ನ ನಿಜವಾದ ಗುರುವು." ಎಂದನು.

ಆಗ ಗುರುಗಳು ಸಾಧಕನಿಗೆ ನಿರೂಪವನ್ನು ಕಳಿಸಿದರು. "ಬಾ ಮಗು; ನೀನೀಗ ಸತ್ವಗುಣಭರಿತನಾಗಿರುವೆ. ಕಾಯದ, ಮಾತಿನ ಮತ್ತು ಮನಸ್ಸಿನ ಕೋಪವನ್ನು ನಿಗ್ರಹಿಸಿರುವೆ. ಆದ್ದರಿಂದ ನಿನಗಿಂದು ಅನುಗ್ರಹವನ್ನು ನೀಡಲಿರುವೆ." ಹೀಗೆ ಮನುಷ್ಯನು ತನ್ನ ಸಿಟ್ಟನ್ನು ಆದಷ್ಟು ಬೇಗನೆ ನಿಗ್ರಹಿಸಿಕೊಂಡು ಶಾಂತಿಯನ್ನು ಅಳವಡಿಸಿಕೊಂಡರೆ ಬದುಕು ಪ್ರಶಾಂತತೆಯ ತಾಣವಾಗುವುದು.

★

ಪ್ರಾರಬ್ಧ-ಪ್ರಯತ್ನ

ಮಾನವನ ಪ್ರಯತ್ನಕ್ಕೆ ಮೀರಿದುದು ಪ್ರಾರಬ್ಧ. ನಂಬಬೇಕೋ, ಬಿಡಬೇಕೋ ತಿಳಿಯದು. ನಾವು ಬಯಸಿದಂತೆ ಮನುಷ್ಯನನ್ನು ರೂಪಿಸಬಹುದು. ಇದು Behaviourism ವಾದದ ವ್ಯಾಟ್ಸನ್ನನ ಸವಾಲು. ಗಾಂಧೀಜಿಯ ಮಕ್ಕಳು ಏಕೆ ಒಬ್ಬರೂ ತಂದೆಯ ಆದರ್ಶದಲ್ಲಿ ನಡೆಯಲಿಲ್ಲ? ಗಾಂಧೀಜಿಯ ಬದುಕೇ ಒಂದುಶಿಕ್ಷಣ. ಏಕೆ ಅದರ ಪ್ರಭಾವ ಅವರ ಮಕ್ಕಳ ಮೇಲಾಗಲಿಲ್ಲ. ತಮ್ಮ ಪರಿಸರವನ್ನು, ರಾಷ್ಟ್ರದ ಜನತೆಯನ್ನು ಲೋಹಚುಂಬಕ ವ್ಯಕ್ತಿತ್ವದಿಂದ ತಿದ್ದಬಲ್ಲ ತಂದೆಗೆ, ತಮ್ಮ ಮಕ್ಕಳನ್ನೇಕೆ ಆದರ್ಶವಾದಿಗಳನ್ನಾಗಿ ಮಾಡಲಾಗಲಿಲ್ಲ? ಕೊಡಬಹುದಾದ ಒಂದೇ ಉತ್ತರ-ಪ್ರಾರಬ್ಧ. ಕೆಲವರಲ್ಲಿ ಸಂಸ್ಕಾರ-ವಾಸನೆಗಳು ಪ್ರಬಲವಾಗಿದ್ದಾಗ ನಾವೇನೇ ಪ್ರಯತ್ನಿಸಿದರೂ ಮೂಲಸ್ವರೂಪವನ್ನು ಬದಲಿಸಲು ಆಗದು. ಬಹಳಷ್ಟು ಪರಿಸರದ ಒತ್ತಡದಿಂದ ಸರಿಯಾಗಿ ಇಟ್ಟರೂ, ಕಾಲಾನಂತರದಲ್ಲಿ ಮತ್ತೆ ಅದೇ ಸ್ವರೂಪವೇ. ಅಂಥ ಪ್ರಸಂಗದಲ್ಲಿ ಅನಿವಾರ್ಯವಾಗಿ ಅವರ ದಾರಿಗೆ ಬಿಡಬೇಕಲ್ಲದೆ, ಬಲವಂತದಿಂದ ಅವರ ವ್ಯಕ್ತಿತ್ವಕ್ಕೆ ಒಗ್ಗದ ಪಥದಲ್ಲಿಟ್ಟರೆ, ಈ ವ್ಯಕ್ತಿ ಅವರಿಂದ ಲೋಕಕ್ಕೆ ಅಪಕಾರ ಮಾಡಿಸಲು ಕಾರಣೀಭೂತನಾಗುತ್ತಾನೆ. ಉದ್ದೇಶ ಚೆನ್ನಾಗಿದ್ದರೂ, ಅಜ್ಞಾನದಿಂದ ಅನ್ಯಾಯಮಾಡಿದಂತಾಗುತ್ತದೆ.

ಎಷ್ಟೋ ಮಠಾಧಿಕಾರಿಗಳನ್ನು ಬಾಲ್ಯದಲ್ಲೇ ಆರಿಸುತ್ತಾರೆ. ಅವರನ್ನು ಅಧಿಕಾರಿಯನ್ನು ಮಾಡಲು ಹಣವ್ಯಯಿಸಿ, ಸದುದ್ದೇಶದಿಂದ ಬೆಳೆಸುತ್ತಾರೆ. ಆದರ್ಶ ವ್ಯಕ್ತಿಯನ್ನು ನಿರ್ಮಿಸಬೇಕೆಂದು ಶ್ರಮಿಸುತ್ತಾರೆ. ಅವರ ಪ್ರಯತ್ನ ಒಳ್ಳೆಠೆ. ಆದರೆ ಹಾಗೆ ನಿರ್ಮಾಣವಾದ ವ್ಯಕ್ತಿ ತಾನು ವಹಿಸಿಕೊಳ್ಳಲಿರುವ ಅಧಿಕಾರಕ್ಕೆ ಅನರ್ಹ ಎಂದು ತಿಳಿದು ಬಂದಾಗ ಅಯೋಗ್ಯ ಎಂದು ಅರಿವಾದಾಗ ಯಾವ ಪ್ರತಿಕ್ರಿಯೆ ಕೈಗೊಳ್ಳಬೇಕು?

"ಇಷ್ಟೊಂದು ಹಣ ವ್ಯಯಿಸಿದೆವು. ಅದೇಕೆ ವ್ಯರ್ಥವಾಗಬೇಕು? ಎಂದು ಬಲವಂತವಾಗಿ ಆ ಅಯೋಗ್ಯನಿಗೆ ಸ್ಥಾನ ಕೊಟ್ಟರೆ ಈಗ ಖರ್ಚಾಗಿರುವ ಹಣಕ್ಕಿಂತ, ಹೆಚ್ಚಿನ ಅನ್ಯಾಯ ಮುಂದೆ ಆಗುತ್ತದೆ. ಚಿನ್ನದ ಸೂಜಿ ಎಂದು ಕಣ್ಣಿಗೆ ಇಟ್ಟು ಕೊಂಡಂತೆ ಆಗುತ್ತೆ. ಆಗ ಅಂಥ ಅಳಿಮನದವನನ್ನು ತನ್ನ ಹಾದಿಗೆ ಬಿಡುವುದೇ ಒಳ್ಳೆತು. ಇಲ್ಲವಾದರೆ ವಿಷಸರ್ಪವನ್ನು ಸಮಾಜ ನೇತಾರರನ್ನಾಗಿ ಮಾಡಿದಂತೆ ಆಗುತ್ತದೆ. "ಅವರ ಪ್ರಾರಬ್ಧ ನಮ್ಮ ಪ್ರಯತ್ನವನ್ನು ಮೀರಿ ಕೆಲಸಮಾಡಿತು" ಎಂದು ಸಂತೈಸಿಕೊಳ್ಳಬೇಕು.

ಇದಕ್ಕೊಂದು ಸುಂದರ ದೃಷ್ಟಾಂತವಿದೆ. ಒಂದು ಸುಂದರಕಾನನ. ಅಲ್ಲೊಬ್ಬ ಋಷಿ; ತಪೋನಿರತನಾದ ಅವನ ಬಾಳಿನಲ್ಲಿ ಪತ್ನಿಯಷ್ಟೇ ಆಸರೆ. ಸಂತಾನ ಪ್ರಾಪ್ತಿಯಿಲ್ಲ. ಜ್ಞಾನಿಯಾದ ಅವನಿಗೆ ಇಲ್ಲವೆಂಬ ಕೊರಗೂ ಇರಲಿಲ್ಲ.

ಒಂದು ದಿನ ನದಿಯಲ್ಲಿ ಮೀಯುತ್ತಿದ್ದ. ಹದ್ದೊಂದು ಕೊಕ್ಕಿನಲ್ಲಿ ಇಲಿಯ ಮರಿಯೊಂದನ್ನು ಕಚ್ಚಿಕೊಂಡು ಬಂದಿತು. ಕೊಕ್ಕುಜಾರಿ ಇಲಿಮರಿ ಕೆಳಗೆ-ಋಷಿ ಹಿಡಿದಿದ್ದ ಬೊಗಸೆಯಲ್ಲಿ ಬಿದ್ದಿತು. ಇನ್ನೂ ಜೀವವಿದೆ; ಒದ್ದಾಡುತ್ತಿತ್ತು. ಅಯ್ಯೋ ಎನ್ನಿಸಿ ಉಪಚರಿಸಿದ. ಚೇತನಗೊಂಡಿತು. ತನ್ನ ಮಂತ್ರ ಶಕ್ತಿಯಿಂದ ಆ ಹೆಣ್ಣು ಇಲಿಯನ್ನು ಬಾಲೆಯನ್ನಾಗಿ ಪರಿವರ್ತಿಸಿದ. ಸುಂದರ ಬಾಲಿಕೆಯೊಡನೆ ಮನೆಗೆ ಬಂದು, "ವಾತ್ಸಲ್ಯ ತೃಪ್ತಿಗೆ ಶಿಶುವು ದೊರಕಿತು, ಸಂತಸದಿಂದ ಸಾಕು" ಎಂದು ಪತ್ನಿಗೆ ಹೇಳಿದ. ಆಕೆ ಆನಂದದಿಂದ ಸಾಕಿದಳು. ಬಾಲೆ ಕನ್ನೆಯಾದಳು, ತರುಣಿಯಾದಳು; ಸುಂದರ ರೂಪಿನಿಂದ ಕಂಗೊಳಿಸತೊಡಗಿದಳು.

ಮಗಳು ತಾರುಣ್ಯಕ್ಕೆಬರುವುದೇ ತಡ, ಚಿಂತೆಗೊಂಡನು ಸಾಕುತಂದೆ. ಮದುವೆಯ ಹೊಣೆ ಋಷಿಯ ಮೇಲೆ. ಆಗವನು ತನ್ನ ಮಗಳನ್ನು ಅಪೂರ್ವ ವರನಿಗೆ ಧಾರೆಯೆರೆಯುವ ಸಂಕಲ್ಪದಿಂದ ಚಿಂತಿಸತೊಡಗಿದ. ಅವನಿಗೆ ಸೂರ್ಯದೇವನ ನೆನಪಾಯಿತು. ಮಾಂತ್ರಿಕ ಶಕ್ತಿಯಿಂದ ಆಹ್ವಾನಿಸಿದಾಗ ಬಂದ ಸೂರ್ಯನು ಋಷಿಯನ್ನು ಕಂಡು ನಮಸ್ಕರಿಸಿದ. "ರವಿ, ನನ್ನ ಕುವರಿಯ ಕೈ ಹಿಡಿವೆಯಾ?" ಲಾವಣ್ಯವತಿ ತರಳೆಯನ್ನು ಕಂಡು ಮುದಗೊಂಡ ರವಿಯು ಸಂತಸದಿಂದ ಒಪ್ಪಿದ. ಆದರೆ ಆ ತರಳೆ, "ಇಲ್ಲ ಅಪ್ಪ. ಇವನು ಅಷ್ಟು ಕೋಟಿ ಮೈಲಿ ದೂರವಿದ್ದೇ ಸಹಿಸಲಾರದ ತಾಪವನ್ನು ಬೇಸಿಗೆಯಲ್ಲಿ ಕೊಡುವನು. ಇಂಥವನೊಡನೆ ಬಾಳ್ವದುಂಟೆ?" ಮಗಳು ನಿರಾಕರಿಸಿದಾಗ ನಂತರ ಚಂದ್ರನ ಸರತಿ. ಚಂದ್ರನು ಋಷಿಯಿಂದ ಒಪ್ಪಿದರೂ ತರುಣಿಯು ಮುಖ ಸಪ್ಪೆ. "ಹುಣ್ಣಿಮೆಯಂದು ಸುಂದರಾಂಗ ನಿಜ. ಆದರೆ ಅಂದಷ್ಟೇ ಅವನ ಅಂದ. ನಂತರ ಕ್ಷಯರೋಗ. ಮುಖದ ಮೇಲೋ ಬರೀ ಮೊಡವೆ. ನಾನೊಲ್ಲೆ ದೃಢವಾಗಿ ನುಡಿದಳು. ಸೋತ ತಂದೆ ಕೇಳಿದ, "ಸೋಮರಾಜ ನಿನಗಿಂತ ಇನ್ನಾರು ಬಲಶಾಲಿಗಳು?" ಕ್ಷಣಕಾಲ ಚಿಂತಿಸಿ ನುಡಿದನವನು, "ನೋಡಿ ನನ್ನನ್ನು ಮಂಕುಗೊಳಿಸಬಲ್ಲವ ಮೇಘರಾಜನೋರ್ವನೆ? ಅವನನ್ನು ಕಂಡರೆ ನನಗೆ ಭಯ." ಋಷಿಯ ಮಂತ್ರ ಸಿದ್ಧಿಯಿಂದ ಮೇಘರಾಜನ ಆಗಮನ. ಸುಂದರ ತರುಣಿಯನ್ನು ಕಂಡು ಮನಉಬ್ಬಿತವನಿಗೆ, "ಒಪ್ಪಿಗೆ ಏನಮ್ಮಾ?"

"ಅಪ್ಪಾ, ಬೇಸಿಗೆ ಕಾಲದಲ್ಲಷ್ಟು ನೋಡುವಂತಹ ಮುಖ. ಮಳೆಗಾಲದಲ್ಲೋ ರುದ್ರಭಯಂಕರ, ಕಪ್ಪು ಮುಖ. ಗುಡುಗಿದಾಗ ಭಯಾನಕ ನಾನೊಲ್ಲೆ.........."

ಖಿನ್ನನಾದ ಋಷಿ ಮೇಘರಾಜನಿಗಿಂತಲೂ ಸಬಲನು ಯಾರೆಂದು ಕೇಳಿದಾಗ ಅವನು ಹೇಳಿದ, "ನಾನು ಬಲಶಾಲಿ ನಿಜ. ಆದರೆ ನನ್ನನ್ನೂ ಹೆದರಿಸುವವನು ವಾಯುರಾಜ. ಅವನ ಬೀಸುವಿಕೆಗೆ ಥರಥರ ನಡುಗಿ ಓಡುವೆನು. "ಸರಿ, ಋಷಿಯ ಆಹ್ವಾನ ಹೋಯಿತು, ವಾಯುರಾಜನಿಗೆ. ಕನ್ನೆಯನ್ನು ಕೈ ಹಿಡಿಯಲು ಅವನದು ಸಂಪೂರ್ಣ ಒಪ್ಪಿಗೆ. ಆದರೆ ಆಕೆ ಅಂದಳು "ಅಪ್ಪಾ, ಇವನು ನಿಂತಲ್ಲಿ ನಿಲ್ಲದ, ಚಂಚಲನಾದ ಸದಾ ತಿರುಗುವ ಸಂಚಾರಿ. ಇವನನ್ನು ಕಟ್ಟಿಕೊಂಡು ಎಡಬಿಡದೆ ತಿರುಗುತ್ತಾ ನಾನೆಲ್ಲಿ ಬಾಳಲಿ?" ನಿರುತ್ಸಾಹಿತನಾದ ಋಷಿ ವಾಯುರಾಜನಿಗಿಂತ ಬಲಶಾಲಿ ಇನ್ನಾರೆಂದಾಗ ಅವನು ಹೇಳಿದ: 'ಮಹರ್ಷಿ' ನಾನು ಎಂಥಾ ಬಲಶಾಲಿ ಇದ್ದರೂ ಪರ್ವತರಾಜನನ್ನು ಅಲುಗಾಡಿಸಲಾರೆನು. ಅವನೇ ನನಗಿಂತ ಬಲಶಾಲಿ". ಋಷಿಯು ಪರ್ವತರಾಜನ ಬಳಿ ಬಂದು ಪ್ರಶ್ನಿಸಿದ. ಅವನು ಸಂತಸದಿಂದ ಹುಡುಗಿಯನ್ನು ಒಪ್ಪಿದ. ಆದರೆ ತರಳೆ ನುಡಿದಳು, "ಅಪ್ಪಾ ಇವನು ಅರಸಿಕ ಶಿಖಾಮಣಿ, ಇಂಥ ಸುಂದರಿಯಾದ ಸ್ತ್ರೀ ನಾನು ಬಂದು ನಿಂತಿದ್ದರೂ ಮೆಚ್ಚುಗೆ ಸೂಸದ ಜಡನು. ನಾನೊಲ್ಲೆ...." ಋಷಿಯ ತಾಳ್ಮೆ ತಪ್ಪಿತು. ಕಡೆಯಪ್ರಯತ್ನವೆಂದು ಪರ್ವತರಾಜನನ್ನೇ ಕೇಳಿದ. ಆಗವನು "ಮಹಾತ್ಮಾ ನಾನು ಅತ್ಯಂತ ಬಲಶಾಲಿ. ಆದರೆ ನನ್ನಂಥ ಬಲಶಾಲಿಯನ್ನು ನಡುಗಿಸುವ ಏಕ ಮಾತ್ರ ಶತ್ರು ನನ್ನ ಬುಡದಲ್ಲಿರುವ ಮೂಷಕ ಮಹಾರಾಜ ...ಅವನನ್ನು ಕೇಳು...." ಋಷಿ ಮಾತನಾಡಿಸಿದಾಗ ಬಿಲದೊಳಗಿನಿಂದ ಇಣುಕಿತು ಮೂಷಕತಲೆ. ಋಷಿಪುತ್ರಿಯನ್ನು ಮದುವೆಯಾಗಲು ಸಂತೋಷದಿಂದ ಒಪ್ಪಿದನು. ಮುನಿಯು ಮಗಳನ್ನು ಕೇಳಿದಾಗ ಮಗಳ ಮುಖ ನಾಚಿಕೆಯಿಂದ ಕೆಂಪಾಯಿತು. ಮಾತನಾಡದೆ ತಲೆಬಾಗಿ, ಮುಸುಕನ್ನು ಹೊದ್ದು ನೆಲಕೆರೆದಳು. ಮೌನ ಸಮ್ಮತಿಯ ಲಕ್ಷಣವಷ್ಟೆ.

ಮುನಿಗೆ ಅಚ್ಚರಿಯಾಯಿತು, ವಿಷಾದವೂ ಆಯಿತು. ಎಂತಹ ಸಂಸ್ಕಾರ, ಅಧ್ಯಾತ್ಮ, ಸಂಸ್ಕೃತಿಯಲ್ಲಿಟ್ಟರೂ ಕಡೆಗೂ ತನ್ನ ಪೂರ್ವವಾಸನೆಯನ್ನು ತೊರೆಯಲೇ ಇಲ್ಲವೆ? ನೊಂದು ಆ ಹೆಣ್ಣನ್ನು ಇಲಿಯನ್ನಾಗಿ ಪರಿವರ್ತಿಸಿ ಬಿಟ್ಟುಬಿಟ್ಟ. ಅದು ಹೋಗಿ ಬಿಲವನ್ನು ಸೇರಿತು.

ನೀತಿ:- ಮಾನವನೋರ್ವನನ್ನು ಮಹಾತ್ಮನನ್ನು ಮಾಡಬೇಕೆಂದು ಬಲವಂತವಾಗಿ ಪ್ರಯತ್ನಿಸಿದರೆ ಸಾಧ್ಯವಾಗದು. ಆ ನಿಷ್ಠೆ, ನೀತಿ, ಸಂಯಮ ಅಂತರಂಗದಿಂದ ಮೊಳೆಯಬೇಕು. ವಿದ್ಯೆಯ ಸಂಕೇತವಾದ ಸೂರ್ಯ, ಶಾಂತಿಯ ಸಂಕೇತವಾದ ಚಂದ್ರ, ಜನಾನುರಾಗದ ಸಂಕೇತವಾದ ಮೇಘ, ಕೀರ್ತಿಯ ಸಂಕೇತವಾದ ಗಾಳಿ, ಅಮರತ್ವದ ಸಂಕೇತವಾದ ಪರ್ವತ-ಈ ಎಲ್ಲವನ್ನೂ ನೀಡಬಲ್ಲ ತ್ಯಾಗವನ್ನು ಆರಿಸಿಕೊಳ್ಳದೆ, ಮೋಹ-ಸ್ವಾರ್ಥ- ಸಾಂಕೋಚ್ಯದ ಸಂಕೇತವಾದ ಇಲಿಯನ್ನೇ ಮೋಹಿಸುವಂತೆ ಮಾಡಿದುದು ಆ ವ್ಯಕ್ತಿಯಲ್ಲಿ ಸುಪ್ತವಾಗಿದ್ದ ಇಲಿಯ ಸಂಸ್ಕಾರ.

ಬೋಳು ಬಸವನ ಬೊಂತೆ - ೬

ಲೋಕಸ್ವಭಾವ

ದೃಷ್ಟಿ ತಾನಿಲ್ಲದಿರೆ ಸೃಷ್ಟಿಶೂನ್ಯವು ನರಗೆ
ಸೃಷ್ಟಿ ತಾನಿಲ್ಲದಿರೆ ದೃಷ್ಟಿಶೂನ್ಯ
ದೃಷ್ಟಿ ಸೃಷ್ಟಿಗಳೆರಡು ಅನ್ಯೋನ್ಯಪೂರಕವು
ದೃಷ್ಟಿಯಿಂ ಸಂಸೃಷ್ಟಿ—ಬೋಳುಬಸವ ॥೧॥

ನಾರಿಯರಿಗಾಹಾರನರರೆಡರಷ್ಟಂತೆ
ಸಾರತರ ಬುದ್ಧಿಯೋ ನಾಲ್ಕರಷ್ಟು
ಆರರಷ್ಟಿಹುದಂತೆ ಸಾಹಸವು, ಕಾಮವೋ
ಆರೈಯ್ಯಲೆಂಟಂತೆ—ಬೋಳುಬಸವ ॥೨॥

ಸಿರಿಗಳಿಸುವಾತನಿಗೆ ಗುರು ಬಂಧು ವೆಂದಿಲ್ಲ
ಅರಿವನಾರ್ಜಿಪಗೆ ಸುಖನಿದ್ರೆಯಿಲ್ಲ
ನೆರೆ ಹಸಿಯೆ ರುಚಿಪಕ್ವವೆಂದಿಲ್ಲ, ಕಾಮುಕಗೆ
ಕೆರುಲಜ್ಜೆ ಭಯವಿಲ್ಲ—ಬೋಳುಬಸವ ॥೩॥

ಸಿರಿಸತಿಯು ಸುತರೆಲ್ಲ ಮನೆದನವು ಹೊಲವೆಲ್ಲ
ದೊರಕುವುವು ನಿನಗೆ ಋಣರೂಪದಿಂದ
ಅರೆಗಳಿಗೆಯೂ ಕೂಡ ಋಣವು ತೀರಿದ ಬಳಿಕ
ಇರವು ನಿನ್ನೊಡನೆ ತಿಳಿ—ಬೋಳುಬಸವ ॥೪॥

ಬಲವು ಸತ್ಕೃತಯುಗದಿ ಋಷಿಗಳ ತಪೋಬಲವು
ತಿಳಿಯಲದು ತ್ರೇತೆಯೊಳು ಮಂತ್ರಬಲವು
ಇಳೆಯೊಳು ದ್ವಾಪರದಿ ಬಾಹುಬಲವೇ ಬಲವು
ಕಲಿಯುಗದಿ ಸಂಘಬಲ—ಬೋಳುಬಸವ ॥೫॥

ವರನ ರೂಪವ ಕನ್ಯೆ ಮಾತೆಯಾತನ ಸಿರಿಯ
ವರವಿದ್ಯೆಯನು ತಂದೆ ಮದುಮಗನೊಳು
ಅರಸುವರು ಬಂಧುಗಳು ಕುಲವನ್ನು ಉಳಿದವರು
ತರತರದ ಭೋಜನವ—ಬೋಳುಬಸವ ॥೬॥

ಗಾನವನು ಕಿವಿಗೊಟ್ಟು ಕೇಳುವುದು ಪಶುಫಣಿಯು
ಮೌನದಿಂದಾಲಿಪುದು ಶಿಶುವು ಕೂಡ
ಗಾನಕ್ಕೆ ಕಿವಿಗೊಡದ ಮಾನವನು ಹಿಂಜರಿಯ
ಹೀನಕೃತ್ಯವನೆಸಗೆ—ಬೋಳುಬಸವ ||೭||

ಭುವಿಯಲ್ಲಿ ಬಹುದುಃಖಿ ಬಡತನದಿ ಬೇಯುವವ
ಇವನಿಗಿಂ ಕಡುದುಃಖಿ ಸಾಲಗಾರ
ಇವ್ವರೀರ್ವರಿಗು ಮೀರಿದತಿದುಃಖಿ ರೋಗಿಷ್ಠ
ತವೆದುಃಖಿ ಕುಸತಿಪತಿ—ಬೋಳುಬಸವ ||೮||

ವನಿತೆಹೊತ್ತಿಗೆವಿತ್ತ ಪರಹಸ್ತ ಸೇರಿದೊಡೆ
ಪುನರಾಗಮನವಿಲ್ಲವವಕೆ ನಿಜದಿ
ಪುನರಾಗಮಿಸಿದೊಡಂ ಬಲುಕೆಟ್ಟು ಹರಿದು ಮೇ
ಣನಿಶಿಸಿತು ಬಹವು ತಿಳಿ—ಬೋಳುಬಸವ ||೯||

ಅತಿಯುದಾರತೆಯಿಂದ ಹತನಾದನ್ನೆ ಕರ್ಣ
ಅತಿಮಾನದಿಂ ಕೆಟ್ಟ ದುರ್ಯೋಧನ
ಅತಿದಾನದಿಂ ಪೊಕ್ಕ ಪಾತಾಳವನು ಬಲಿಯು
ಅತಿಯಾಗಲಮೃತ ವಿಷ—ಬೋಳುಬಸವ ||೧೦||

ಚೆಂದವಾದೊಡೆ ಕಾರ್ಯ ಮುಂದಾಳು ದೈವವೆನೆ
ವಂದಿಸುತ ಮೆರೆಯುವರು ಬೀದಿಬೀದಿ
ಚೆಂದಗೆಡಲೆಳ್ಳಷ್ಟು ನಿಂದಿಪರು ಪಲವಿಧದಿ
ಮುಂದಾಳುತನ ಕಷ್ಟ—ಬೋಳುಬಸವ ||೧೧||

ಸುಲಭ ಕಠಿಣಗಳೆಂದು ಎರಡಿಲ್ಲ ಕೆಲಸಗಳು
ಪಲಸಮಯವಿವನು ವಿಂಗಡಿಸಲರಿದು
ಸುಲಭದಿಂದಾಗುವುದ ಕಾಲದೊಳು ಮಾಡದಿರೆ
ಬಲುಕಠಿಣವಹು ಕೊನೆಗೆ—ಬೋಳುಬಸವ.

ಪಿ. ಬಸವಣ್ಣ, ಕೊಳ್ಳೇಗಾಲ.

ಮಾತು ಜ್ಯೋತಿರ್ಲಿಂಗ

ಸಂಗ್ರಹ : ಡಾ|| ವಿ. ತಿಪ್ಪೇಸ್ವಾಮಿ,
ಚಿಕ್ಕಜೋಗಿಹಳ್ಳಿ.

ಮಾಲೆಗಾರನ ಕೇಳಿ ನನೆಯರಳುವುದೆ ? —ಬಸವಣ್ಣ

ಹಗಲು ಕಾಣಹ ಗೂಗೆ ಇರುಳಾಯಿತೆಂದಡೆ
ಜಗಕ್ಕೆ ಇರುಳಪ್ಪುದೇ ಮರುಳೆ ? —ಬಸವಣ್ಣ

ಅಂಜಲದೇಕೋ ಲೋಕವಿಗುರ್ಬಣೆಗೆ
ಕೂಡಲ ಸಂಗಮದೇವಾ, ನಿಮ್ಮಾಳಾಗಿ? —ಬಸವಣ್ಣ

ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೇನಯಾ? —ಬಸವಣ್ಣ

ಆರುಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವುದು ?
ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪೆನಾಗಿ —ಬಸವಣ್ಣ

ಲೋಕದಲ್ಲಿ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

—ಅಕ್ಕಮಹಾದೇವಿ

ಕ್ರಿಯೆ ಶುದ್ಧವಾದರೆ ಭಾವಶುದ್ಧ,
ಭಾವ ಶುದ್ಧವಾದರೆ ಆತ್ಮ ಶುದ್ಧ,
ಆತ್ಮ ಶುದ್ಧವಾದರೆ ಅರಿವು ಕರಿಗೊಂಡು
ನಿಂದ ನಿಜದ ನಿಲುವು ಅದುವೇ ಸಾಧ್ಯ.
ಅದರಿಂದ ಕ್ರಿಯಾಶುದ್ಧಿಯೇ ಎಲ್ಲ
ಸಾಧನೆಯ ಮೂಲ.

—ಮೋಳಿಗೆ ಮಾರಯ್ಯ

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು
ಕೋಟಿ, ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು
ಕೋಟಿ, ಗುಹೇಶ್ವರ, ನಿನಗಾಗಿ ಸತ್ತವರನಾರನು ಕಾಣೆ.

—ಪ್ರಭುದೇವ.

(೩೧ನೇ ಪುಟ ನೋಡಿ)



ಒಂದು ಪರಿಚಯ

ಲೇಖಕ : ಸಿ. **ಸೋಮಶೇಖರ**, ಎಂ. ಕಾಂ.
ವಾಣಿಜ್ಯ ಅಧ್ಯಾಪಕರು,
ಎಸ್. ನಿಜಲಿಂಗಪ್ಪ ವಿದ್ಯಾಲಯ, ರಾಜಾಜಿನಗರ,
ಬೆಂಗಳೂರು-೧೦.

ಅಕ್ಕಮಹಾದೇವಿಯನ್ನು ಕುರಿತಾದ ಕಾದಂಬರಿ :
"ತ ರಂ ಗಿ ಣಿ"
ಲೇಖಕಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಪುಟ ೯೦೦, ಬೆಲೆ ೩೩ ರೂಪಾಯಿ
ಪ್ರಕಾಶಕರು :
ಸುಯಿಧಾನ ಸುಗ್ರಂಥ ಮಾಲೆ
ಬಸವ ಮಂಟಪ, ೨೪. ಎರಡನೆಯ ಬ್ಲಾಕು,
ರಾಜಾಜಿನಗರ, ಬೆಂಗಳೂರು-೫೬೦೦೧೦.

ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮದ ಮೂರ್ತಿಯಾಗಿ ವೀರ ವಿರಾಗಿಣಿಯಾಗಿ, ಶ್ರೇಷ್ಠ ವಚನ ಸಾಹಿತ್ಯದ ಅನುಭಾವ-ಸ್ವಾನುಭವಗಳ ಜ್ಯೋತಿಯಾಗಿ "ಅಜ ಕಲ್ಪ ಕೋಟಿ ವರುಷದವರೆಲ್ಲರೂ ಹಿರಿಯರೆ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?............ಹಿರಿಯತನ ನಮ್ಮ ಮಹದೇವಿ ಅಕ್ಕಂಗಾಯಿತು"

ಎನ್ನುವ ಶರಣ ಸ್ತೋಮದ ವಿಶ್ವಾಸ, ಮನ್ನಣೆ, ಗೌರವಗಳಿಗೆ ಪಾತ್ರಳಾಗಿ, ಇಡೀ ಶರಣ ಸಮುದಾಯಕ್ಕೆ ಪ್ರೀತಿಯ ಆಧ್ಯಾತ್ಮಿಕ ಹಿರಿಯ ಅಕ್ಕನಾಗಿ, ಶತ ಶತಮಾನಗಳಿಂದಲೂ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀಯರಲ್ಲಿ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜಾಗೃತಿಯನ್ನು ಉಂಟುಮಾಡಿ, ಸ್ತ್ರೀಯರ ಸಮಾನತೆ, ಸ್ವಾತಂತ್ರ್ಯಕ್ಕಾಗಿ ಕ್ರಾಂತಿಯ ರಣ ಕಹಳೆಯನ್ನು ಊದಿದ ಕ್ರಾಂತಿಯ ಕಣ್ಮಣಿಯಾಗಿ, ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದ ಜನತೆಗೆ ವೈಚಾರಿಕತೆಯನ್ನೂ, ಆಧ್ಯಾತ್ಮಿಕತೆಯ ಸರಳತೆಯನ್ನೂ ಬೋಧಿಸಿ, ಶರಣ ಸತಿ-ಲಿಂಗಪತಿ ಎನ್ನುವ ತತ್ತ್ವದ ಪ್ರತಿಪಾದನೆಯ ಶ್ರೇಷ್ಠ ಶಿವಶರಣೆಯಾಗಿ, ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ತನ್ನ ಇಷ್ಟದೈವ ಶ್ರೀಶೈಲ ಚನ್ನಮಲ್ಲಿಕಾರ್ಜುನನಿಗೆ ಒಲಿದು, ತನ್ನನ್ನೂ, ತನ್ನ ಸರ್ವಸ್ವವನ್ನೂ ಶ್ರೀ ಚನ್ನಮಲ್ಲಿಕಾರ್ಜುನನಿಗೆ ಸರ್ವಸಮರ್ಪಣಾ ಮನೋಭಾವದಿಂದ ಅರ್ಪಿಸಿ, ಶ್ರೀ ಚನ್ನಮಲ್ಲಿಕಾರ್ಜುನನಲ್ಲಿಯೇ ಬೆರೆತು ಒಂದಾದ ಮಹಾ ಆದರ್ಶ (ಸ್ತ್ರೀ)ರತ್ನ ಅಕ್ಕಮಹಾದೇವಿ. ಇಂತಹ ಶ್ರೇಷ್ಠ ಆಧ್ಯಾತ್ಮಿಕ ಶರಣೆ ಶಿರೋಮಣಿಯ ಜೀವನ ಸಿದ್ಧಿ ಮತ್ತು ಸಾಧನೆಯ ಚಿತ್ರಣವೇ ಮಾತೆ ಮಹಾದೇವಿಯವರ ದ್ವಿತೀಯ ಬೃಹತ್ ಕಾದಂಬರಿ **"ತರಂಗಿಣಿ"**ಯ ಮೂಲ ಕಥಾವಸ್ತು.

ಕೇವಲ ನಾಲ್ಕಾರು ಪಾತ್ರಗಳ ಸುತ್ತ ಮೂಡಿ ಬರುವ ಸಾಮಾನ್ಯ ಕಾದಂಬರಿಯ ವಿನ್ಯಾಸದ ಸೂತ್ರಕ್ಕೆ ಅಂಟಿಕೊಳ್ಳದೆ, ಹತ್ತಾರು ಪಾತ್ರಗಳನ್ನು ಕಾದಂಬರಿಯ ಕಥಾವಸ್ತುವಿನ ಮೆರುಗನ್ನು ಹೆಚ್ಚಿಸುವಂತೆ ಔಚಿತ್ಯಪೂರ್ಣವಾಗಿ ಚಿತ್ರಿಸಿ, ಸಾಮಾಜಿಕ, ಸಾಹಿತ್ಯಿಕ ಮತ್ತು ಆಧ್ಯಾತ್ಮಿಕತೆಯ ಮೂರೂ ಉದ್ದೇಶಗಳನ್ನು ಸಮರ್ಥವಾಗಿ ಪೂರ್ಣಗೊಳಿಸಿರುವ **"ತರಂಗಿಣಿ"** ಆಧ್ಯಾತ್ಮಿಕ ಪಿಪಾಸೆಯನ್ನು ಸಂಪೂರ್ಣವಾಗಿ ಪರಿಹರಿಸಬಲ್ಲ ಜ್ಞಾನಗಂಗೆಯಾಗಿ ಹರಿದು ಬಂದಿದೆ.

ಇಲ್ಲಿ ಮೂಡಿ ಬಂದಿರುವ ಪಾತ್ರಗಳು ವಾಸ್ತವಿಕತೆಯ ಭಾವನಾತರಂಗಗಳಿಗೆ ಸಮೀಪವಾಗಿವೆ. ಇವುಗಳಲ್ಲಿ ಸಹಜತೆ ಇದೆ. ಎಲ್ಲಿಯೂ ಅನಗತ್ಯವಾದ ಭಾವುಕತೆಯ ಹುಚ್ಚು ಹೊಳೆ ಹರಿದಿಲ್ಲ. ಈ ತರಂಗಿಣಿಯಲ್ಲಿ ಹರಿದಿರುವ ನೀರು ಸ್ವಚ್ಛವಾಗಿದೆ, ಶುದ್ಧವಾಗಿದೆ. ಪವಿತ್ರ ಆಧ್ಯಾತ್ಮಿಕ ಅಮೃತವನ್ನು ನೀಡುವ ಕಾಮಧೇನುವಾಗಿರುವ ಈ ತರಂಗಿಣಿ, ಪ್ರಾಪಂಚಿಕ ಕೊಳೆಯನ್ನು ತೊಳೆದು ಶುದ್ಧಗೊಳಿಸುವ ಗಂಗಾತೀರ್ಥದಂತೆ.

ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಪ್ರತಿಯೊಂದು ಪಾತ್ರವೂ, ಮೂಲ ಕಥಾವಸ್ತುವಿನ "ತರಂಗಿಣಿ" ಯೊಳಗೆ ಬೆರೆತು ಒಂದಾಗುವ ತೊರೆಯಂತೆ.

ಓಂಕಾರ–ಲಿಂಗಮ್ಮನ ಪಾತ್ರಗಳಲ್ಲಿ ಅಭಿವ್ಯಕ್ತಿಗೊಂಡಿರುವ ಸಹಜ ಪಿತೃ, ಮಾತೃ ವಾತ್ಸಲ್ಯಗಳು ಓದುಗರ ಕರುಳನ್ನು ಸ್ಪಂದಿಸುತ್ತದೆ. ಜೀವಂತವಾಗಿ ಮೂಡಿಬಂದಿರುವ ಶ್ರೀ ಗುರುಲಿಂಗದೇವರ ಪಾತ್ರ ನಮ್ಮ ಭಕ್ತಿಯ ಪ್ರಣಾಮಗಳನ್ನು ನಮಗೆ ಅರಿವಿಲ್ಲದೆಯೇ ನಮ್ಮಿಂದ ಕಸಿದುಕೊಳ್ಳುತ್ತದೆ. ಇತರರ ವಿಷಯಗಳಲ್ಲಿಯೇ ಹೆಚ್ಚು ಆಸಕ್ತಿತೋರುವ ಮಹಿಳಾಮಣಿಗಳ ಬಗ್ಗೆ ಕ್ರೋಧಕ್ಕಿಂತ ಅನುತಾಪವೇ ಹೆಚ್ಚಾಗಿ ಮೂಡಿಬರುತ್ತದೆ. ಅಕ್ಕನ ಗೆಳತಿಯರ ಪಾತ್ರಗಳು ಸಹಜವಾದ, ಸ್ನೇಹ ಸೌಹಾರ್ದತೆಯ ಭಾವನೆಗಳಿಂದ ನಮ್ಮನ್ನೂ ಗೆಳೆಯರನ್ನಾಗಿಮಾಡಿಕೊಂಡು ಬಿಡುತ್ತವೆ. ಕೌಶಿಕನ ಪಾತ್ರವಂತೂ ಕಣ್ಣಿಗೆ ಕಟ್ಟುವಂತೆ ಮೂಡಿಬಂದು ಅವನ ಜೀವನದ ಅಂತ್ಯ ಹೃದಯಂಗಮವಾಗಿದೆ. ಕಾಮದ ಅಗ್ನಿಯಲ್ಲಿ ವಿರಹ ತಾಪವನ್ನು ವ್ಯಕ್ತಪಡಿಸುವ ಪೂರ್ವಾರ್ಧದ ಕೌಶಿಕ, ಉತ್ತರಾರ್ಧದಲ್ಲಿ ಪಶ್ಚಾತ್ತಾಪದ ದಾವಾಗ್ನಿಯಲ್ಲಿ ಬೆಂದು, ತಾನು ಲೌಕಿಕವಾಗಿ ಸತಿಯೆಂದು ಸ್ವೀಕರಿಸಬೇಕೆಂದಿದ್ದವಳನ್ನೇ "ಅಮ್ಮಾ" ಎಂದು ಸಂಬೋಧಿಸಿ, ಆಕೆಯನ್ನೇ ಗುರುವನ್ನಾಗಿ ಸ್ವೀಕರಿಸಿ, ಆಕೆಯನ್ನು "ಮೋಕ್ಷದ ಹಾದಿಯಲ್ಲಿ ನಿರ್ವೇಶಿಸು" ಎಂದು ಕಳಕಳಿಯಾಗಿ ಪ್ರಾರ್ಥಿಸುತ್ತಾ, ಪ್ರಾಪಂಚಿಕ ಐಹಿಕ ಭೋಗಗಳ ವಿಷವರ್ತುಲದಲ್ಲಿ ಸಿಕ್ಕಿ ನರಳುತ್ತಿರುವವರಿಗೆ ಬೆನ್ನುತಟ್ಟಿ ಎಚ್ಚರಿಸಿ, ಜೀವನದ ಅನಿತ್ಯತೆಯನ್ನು ಸಾರುತ್ತಾನೆ. ಕೌಶಿಕನಿಗೆ ಆಪ್ತನಾದ ವಸಂತಕನೂ, ಶಿವಕಾಮಿನಿಯರೂ ವೈರಾಗ್ಯತಾಳಿದ ಚಿತ್ರ ತರಂಗಿಣಿಯ ಸೊಬಗನ್ನು ಮತ್ತಷ್ಟು ಹೆಚ್ಚಿಸುತ್ತದೆ. ಕಲ್ಯಾಣಕ್ಕೆ ಹರಿದು ಬಂದ ನಂತರ ಈ ತರಂಗಿಣಿ, ಒಂದೊಂದು ವಾಕ್ಯದಲ್ಲೂ ಆಧ್ಯಾತ್ಮಿಕ ಸಂಜೀವಿನಿಯನ್ನು ನೀಡುತ್ತದೆ. ಕಿನ್ನರಿ ಬ್ರಹ್ಮಯ್ಯ ಅಕ್ಕನನ್ನು ಪರೀಕ್ಷಿಸುವ ಸಂದರ್ಭದಲ್ಲಿ ನಮ್ಮೆಲ್ಲರ ಮೈ ಮರೆಸುತ್ತಾನೆ. ತಕ್ಷಣ ಎಚ್ಚರಿಸುತ್ತಾನೆ. ಅನುಭವ ಮಂಟಪಕ್ಕೆ ಬಂದ ವಿರಾಗಿಣಿಯನ್ನು ಪ್ರಭುಗಳು ಪ್ರಶ್ನಿಸಿ ಅಂತರ್ಯದ ಪ್ರಕಾಶವನ್ನು ಹೊರಗೆಲ್ಲಾ ಪ್ರಚುರ ಪಡಿಸುವಂತೆ ಮಾಡುವ ಸನ್ನಾಹ, "ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ" ಎನ್ನುವ ಅಣ್ಣನವರ ವಚನವನ್ನು ಸ್ಮರಣೆಗೆ ತರುತ್ತದೆ. ಅನುಭವ ಮಂಟಪದಲ್ಲಿ ಈ ವೈರಾಗ್ಯ ಮೂರ್ತಿಯ ಮುಂದಿಡುವ ಪ್ರಶ್ನೆಗಳಿಗೆ ಮೂಡಿಬರುವ ಉತ್ತರಗಳಲ್ಲಿ ಸರಳತೆಯಿದ್ದು, ಪ್ರಭು ಮತ್ತು ಅಕ್ಕನವರ ನಡುವಿನ ಸಂಪಾದದ ಸೊಬಗು, ಅನುಭವ ಮಂಟಪದ ಇನ್ನಿತರ ಶರಣರೊಂದಿಗೆ ನಮ್ಮನ್ನು ಒಂದಾಗಿಸಿ, ನಮ್ಮ ಆಶ್ಚರ್ಯ, ಆಸಕ್ತಿಗಳನ್ನು ಕೆರಳಿಸುತ್ತದೆ. ಭಕ್ತಿಭಂಡಾರಿ ಬಸವಣ್ಣನವರ ಪಾತ್ರವಂತೂ ನಮ್ಮೆಲ್ಲರ ಹೃನ್ಮನಗಳ ಸಿಂಹಾಸನವನ್ನು ಆಕ್ರಮಿಸಿಕೊಳ್ಳುತ್ತದೆ. ಭಕ್ತಿ, ದಯೆ, ಕರುಣೆ, ಸೌಜನ್ಯ, ಕಿಂಕರತ್ವ ಮೊದಲಾದ ಆದರ್ಶಗುಣಗಳ ಸಹಜೀಕರಣವನ್ನು ಸಾಧಿಸಿರುವ ಬಸವಣ್ಣನವರ ಪಾತ್ರ ನಮ್ಮ ಹೃದಯವನ್ನು ಸ್ಪಂದಿಸುತ್ತದೆ. ಗಂಗಾಂಬಿಕೆ ನೀಲಾಂಬಿಕೆಯರಲ್ಲಿ ಸವತಿಯ ಮಾತ್ಸರ್ಯಕ್ಕೆ ಬದಲಾಗಿ, ಪ್ರೇಮದ ಅನುರಾಗವನ್ನು ಕಂಡು ವಂದಿಸುತ್ತೇವೆ. ಆಧ್ಯಾತ್ಮಿ

ಕತೆಯ ನಿಜಾರ್ಥವನ್ನು ತಿಳಿಯದೆ, ಅಂತರಂಗದ ಶುದ್ಧಿ ಇಲ್ಲದೆ ಉದರ ಪೋಷಣೆಗಾಗಿ ಸನ್ಯಾಸಿ ವೃತ್ತಿಯನ್ನು ಸ್ವೀಕರಿಸುವ ಕೆಲವೊಂದು ಸನ್ಯಾಸಿಗಳ ಬದುಕನ್ನು ಮಾರ್ಪಡಿಸುವ ಸನ್ನಿವೇಶಗಳ ನಿರೂಪಣೆ ಅಕ್ಕನನ್ನು ಸುಧಾರಕಳಾಗಿ ಕಂಡು ವಂದಿಸುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ಮೂಲಕಥಾವಸ್ತು ಬಹಳಷ್ಟು ಓದುಗರಿಗೆ ಪೂರ್ವಭಾವಿಯಾಗಿ ತಿಳಿದಿದ್ದರೂ ಕಾದಂಬರಿಯ ಮುಖ್ಯ ಗುಣವಾದ ಕುತೂಹಲವನ್ನು ತರಂಗಿಣಿ ಕಾದಂಬರಿಯ ಕೊನೆಯವರೆವಿಗೂ ಉಳಿಸಿಕೊಂಡು ಬಂದಿರುವುದು, ಕಾದಂಬರಿಕಾರರು ಈ ಸಾಹಿತ್ಯ ಪ್ರಾಕಾರದಲ್ಲಿ ಗಳಿಸಿರುವ ವಿಶೇಷವಾದ ಪ್ರಭುತ್ವವನ್ನು ಸೂಚಿಸುತ್ತದೆ. ಕಾದಂಬರಿ ರಚನಾ ಶೈಲಿ ಎಲ್ಲರೂ ಮೆಚ್ಚತಕ್ಕಂತಹದ್ದೇ.

ಅನೇಕ ಜ್ವಲಂತ ಸಾಮಾಜಿಕ ಸಮಸ್ಯೆಗಳ ಸಹಜ ವಿಶ್ಲೇಷಣೆಯೊಂದಿಗೆ ಪರಿಹಾರವನ್ನೂ ನೀಡುವಂತಹ ಪ್ರಾಮಾಣಿಕ ಪ್ರಯತ್ನದ ಈ ತರಂಗಿಣಿಯಲ್ಲಿ ಬಾಲ್ಯವಿವಾಹದಂತಹ ವ್ಯವಸ್ಥೆಯನ್ನು ವಿರೋಧಿಸುವ ವೈಚಾರಿಕ ತರ್ಕವನ್ನು ಕಾಣುತ್ತೇವೆ. "ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು.... ನಡುವೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ" ಎನ್ನುವಂತೆ ಹೆಣ್ಣು ಸಹಾ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅರ್ಹಳೂ. ಆಕೆಯೂ ಶಿವ ಸಾಕ್ಷಾತ್ಕಾರವನ್ನು ಪಡೆಯಬಲ್ಲಳು ಎನ್ನುವ ಅಕ್ಕನವರ ತಾತ್ತ್ವಿಕ ನಿಲುವನ್ನು, ಮಹಾದೇವಿಯವರು ಸುಂದರ ಸನ್ನಿವೇಶಗಳ ಚಿತ್ರಣದೊಂದಿಗೆ ಪ್ರತಿಪಾದಿಸಿದ್ದಾರೆ.

ವಚನಗಳು ಎನ್ನುವ ವಿಶಿಷ್ಟ ಸಾಹಿತ್ಯ ಪ್ರಾಕಾರದ ಪರಿಚಯ; ಇಷ್ಟಲಿಂಗ – ಸ್ಥಾವರ ಲಿಂಗಗಳ ವ್ಯತ್ಯಾಸ; ಲಿಂಗ ದೀಕ್ಷೆಯ ಮಹತ್ವ; "ದೇವಸ್ಥಾನಗಳು ದಿವ್ಯಸ್ಥಾನಗಳಾಗಬೇಕು" ಎನ್ನುವ ಚೈತನ್ಯಮಯ ಇಷ್ಟಲಿಂಗದ ವರ್ಣನೆ; "ಪವಿತ್ರತೆಯ ಪರಂಜ್ಯೋತಿಯ ಮುಂದೆ ಕಾಮದ ದೀಪದ ಹುಳುವಿನಾಟ ಏನು ನಡೆದೀತು" ಎನ್ನುವ ಆಧ್ಯಾತ್ಮ ಜ್ಯೋತಿಯ ಪ್ರಭೆಯ ನಿರೂಪಣೆ; ಜಂಗಮ ಯಾರು ? ಎನ್ನುವ ಪ್ರಶ್ನೆಗೆ ಸರಿ ಒಪ್ಪುವ ಉತ್ತರ; ದ್ರೌಪದಿಯೊಡನೆ ಅಕ್ಕನ ಹೋಲಿಕೆಯ ಸುಂದರ ಕಲ್ಪನೆ; "ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ...." ....ಎನ್ನುವ ವಚನಕ್ಕೆ ಹೊಂದಿಕೊಳ್ಳುವ ಸನ್ನಿವೇಶವೊಂದರ ರಚನೆ; ವೇದ ಆಗಮ ಶಾಸ್ತ್ರಗಳ ಸಂಕೋಲೆಯಿಂದ ವಿಮುಕ್ತನಾಗಬೇಕೆಂಬ ಅಕ್ಕನ, ವಚನದ ತಿಳಿಯಾದ ಅರ್ಥವಿವರಣೆ; ಕಲ್ಯಾಣದ ಮಠಗಳಲ್ಲಿ ಸಾಮೂಹಿಕ ಒಡೆತನದ ಪ್ರಯೋಗದ ಪರಿಚಯ; "ತನ್ನವರನ್ನೂ ತನ್ನಂಥವರನ್ನೂ ಪ್ರೇಮಿಸುವುದು ಸ್ವಾರ್ಥ, ಮಾಯೆ; ಎಲ್ಲರನ್ನೂ ಎಂಥವರನ್ನೂ ಪ್ರೇಮಿಸುವುದು ತ್ಯಾಗ, ದಯೆ" ಎನ್ನುವ ವಿಶ್ವ ಕೌಟುಂಬಿಕ ಜೀವನದ ಪ್ರತಿಪಾದನೆ. "ವಸ್ತುವು ಸಿಕ್ಕದಿರುವಾಗ ವಿರಾಗ, ದೊರೆಯುತ್ತಿದ್ದಂತೆಯೇ ಅನುರಾಗ" ಎನ್ನುವ ಅಭಾವ ವೈರಾಗ್ಯದ ಬಗ್ಗೆ ಎಚ್ಚರಿಕೆ; ಮಾಯಾದೇವಿ ಮತ್ತು ಮಹಾದೇವಿಯರ ನಡು

ವಿನ ಹೋಲಿಕೆಯ ಬಗ್ಗೆ ಪ್ರಭು ದೇವರ ಮನದಲ್ಲಿ ನಡೆಯುವ ಮಾನಸಿಕ ಮಂಥನ; "ಪರಿಪಕ್ವನಾದವನು ತನಗಾಗಿ ಮಾತನಾಡನು, ಜಗದ ಕಲ್ಯಾಣಕ್ಕಾಗಿ ಮಾತನಾಡುತ್ತಾನೆ" ಎನ್ನುವ ಅಕ್ಕನ ಉತ್ತರದಲ್ಲಿ ಇರುವ ಸ್ವಾನುಭವದ ದರ್ಶನ; ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಗಳ ಷಟ್‌ಸ್ಥಲ ಸಿದ್ಧಾಂತದ ಅರ್ಥ ವ್ಯಾಖ್ಯಾನ; ಎಲ್ಲಾ ಯೋಗಗಳಿಗೂ ಶ್ರೇಷ್ಟವಾದ, ಆದರ್ಶವಾದ ಶಿವಯೋಗದ ಮಹತ್ವದ ಸುಂದರ ಪ್ರತಿಪಾದನೆ; "ಮಕ್ಕಳ ಮೇಲಿರುವುದಕ್ಕಿಂತ ಹೆಂಡಿರ ಮೇಲೆ ಪ್ರೀತಿಯು ಹೆಚ್ಚಲ್ಲವೇ" ಎಂದು ಅಣ್ಣನವರು ಅಕ್ಕನನ್ನು ಉದ್ದೇಶಿಸಿ ಮಾತನಾಡುವಾಗ ಕಂಡುಬರುವ ಹಾಸ್ಯ ರಸದ ರುಚಿಯ ಅನುಭವ; ಇಷ್ಟಲಿಂಗ, ಭಾವಲಿಂಗ ಪ್ರಾಣಲಿಂಗಗಳ ಅರ್ಥವ್ಯಾಖ್ಯಾನ; "ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ, ಈ ಐದು ತತ್ವಗಳು ಪರಮಾತ್ಮನ ಗುಣಗಳಲ್ಲ, ಸ್ವರೂಪವು" ಎನ್ನುವ ವಿವರಣೆಯೊಂದಿಗೆ, ವಿಷಯಾನಂದ, ಬೌದ್ಧಿಕಾನಂದ, ಆತ್ಮಾನಂದಗಳ ಸ್ವಾರಸ್ಯ ನಿರೂಪಣೆ; ಹಸುಗಳನ್ನು ಕದ್ದು, ಪಶ್ಚಾತ್ತಾಪದಿಂದ ಹಿಂತಿರುಗಿ ಬಂದು ಬಸವಣ್ಣನ ಪಾದಕಮಲಗಳಿಗೆ ಶರಣಾದ ದೃಶ್ಯದ ಸೊಗಸಾದ ಚಿತ್ರಣ; "ಪ್ರಾಪಂಚಿಕರು ಅಲ್ಪಕಾಮಿಗಳಾದರೆ, ಈ ಪರಮಾತ್ಮ ಅತಿಕಾಮಿ" ಎನ್ನುವಲ್ಲಿ ಅಡಗಿರುವ ಸಾಂಕೇತಿಕ ಆಧ್ಯಾತ್ಮ ಮರ್ಮದ ಸೂಚನೆ; ಶರಣರಿಂದ ಬೀಳ್ಕೊಡುವಾಗ ಉಕ್ಕಿ ಬರುವ ಸಹಜವಾದ ಲೌಕಿಕ ದುಃಖದ ಜೊತೆಗೆ ಅವರ ಸಾಂಗತ್ಯದಿಂದ ಸಾಧಿಸಿದ ಪರಿಪೂರ್ಣತೆಯ ಬಗೆಗೆ ಮೂಡಿಬರುವ ಪರಸ್ಪರ ಅಭಿಮಾನ, ಕೃತಜ್ಞತೆಗಳ ಸುಂದರ ಚಿತ್ರಣ; ಶ್ರೀ ಗಿರಿಯ ಆರೋಹಣದ ಸಂದರ್ಭದಲ್ಲಿ ವರ್ಣಿತವಾಗಿರುವ ನಿಸರ್ಗ ಸೌಂದರ್ಯದ ಸಾಕ್ಷಾತ್ ಸತ್ಯ ದರ್ಶನ; ಕೌಶಿಕ - ಶಿವಕಾಮಿನಿಯರಿಗೂ ಮೋಕ್ಷ ಸಾಧನೆಯ ಬಗ್ಗೆ ಆಧ್ಯಾತ್ಮಿಕತೆಯ ಬಗ್ಗೆ ಬೋಧನೆಯ ಕರುಳು ಮಿಡಿಯುವ ಸನ್ನಿವೇಶದ ಕಲ್ಪನೆ. ಕದಳಿವನದ ಬಗೆಗಿನ ಪ್ರಭುದೇವರ ವಚನದ ಯೌಗಿಕ ಮತ್ತು ಭೌಗೋಳಿಕ ಅರ್ಥದ ಜೀವಂತ ನಿರೂಪಣೆ; ಜಿಂಕೆ, ಮೊಲಗಳಲ್ಲಿ ನಾದಿನಿ, ಮೈದುನರನ್ನು ಕಂಡ ಮಾನವೀಯತೆಯ ಅನುಕಂಪ ಮಿಡಿತದ ವರ್ಣನೆ; ಸಾಕ್ಷಾತ್ಕಾರದ ನಂತರ ಸರ್ವಾಂಗ ಸಮರಸಕ್ಕಾಗಿ, ಆತ್ಮನ ಅನುಸಂಧಾನಕ್ಕಾಗಿ ಅಕ್ಕನು ಮಾಡುವ ಸಾಧನೆಯ ಹೃದಯಂಗಮ ಚಿತ್ರಣ; "ಕಂಗಳೇ ಆರತಿ, ಕಾಯವೇ ಕರ, ಒಳಗಿನ ತೇಜಸ್ಸೇ ಬೆಳಕು" ಎನ್ನುವಂತೆ ವಿಶ್ವದ ವಿನೂತನ ಪರಂಜ್ಯೋತಿಯ ಸಹಜ ವರ್ಣನೆ; "ಮಹಾದೇವಿಯೆಂಬ ಉಡುತಡಿಯ ಆ ಝರಿ, ಅಕ್ಕಮಹಾದೇವಿಯೆಂಬ ಬೃಹತ್ ತರಂಗಿಣಿಯಾಗಿ ಕದಳಿಯ ಸಂಗಮ ತಾಣದಲ್ಲಿ ಪರಶಿವ ಸಾಗರದೊಡನೆ ಒಡನೆರೆದು ಒಂದಾಗಿತ್ತು. ಮುಂದೆ ಹುಟ್ಟಲಿರುವ ಮೋಡ, ಮಳೆ, ಝರಿ, ತೊರೆಗಳಿಗೆ ಚೈತನ್ಯ ಸ್ಫೂರ್ತಿಗಳನ್ನೊದಗಿಸುವ ಶ್ರೀ ಚನ್ನಮಲ್ಲಿಕಾರ್ಜುನನ ಚಿನ್ಮಯ ನಿಧಿಯಾಯಿತು" ಎನ್ನುವ ವಾಕ್ಯಗಳೊಡನೆ ಮರಗಳ ಹಾಡಿರುವ ಕಾದಂಬರಿಯ ಸುಂದರ ಪರಿಸಮಾಪ್ತಿ, ಇವುಗಳು ಕಾದಂಬರಿಯ ಹಾಲತೊರೆಗೆ ಬೆಲ್ಲದ ಕೆಸರಿನಂತೆ ಒಂದಾಗಿ, ಬೆರೆತು ಕಾದಂಬರಿಯನ್ನು ಸರ್ವಾಂಗ

ಸುಂದರವನ್ನಾಗಿ ಮಾಡಿದೆ.

ಕಾದಂಬರಿಯ ಒಂದೊಂದು ಮುಖ್ಯ ಅಧ್ಯಾಯಗಳಿಗೂ ಬಹಳ ಸರಿಹೊಂದುವ ಶಿರೋನಾಮೆಗಳನ್ನು ನೀಡಿ, ತಮ್ಮ ಸಾಹಿತ್ಯದ ಸೌಂದರ್ಯ ಪ್ರಜ್ಞೆಯಿಂದ ಮತ್ತು ಭಾಷಾ ಮಾಧ್ಯಮದ ಮಾಧುರ್ಯದಿಂದ ಮಾತೆ ಮಹಾದೇವಿಯವರು ಓದುಗರನ್ನು ಸಂಪೂರ್ಣವಾಗಿ ತಮ್ಮ ಕೃತಿಯ ಕಡೆಗೆ ಸೆಳೆದೊಯ್ದು ನಮ್ಮನ್ನು ವಶೀಕರಣದ ಮಾಂತ್ರಿಕತೆಗೆ ಒಳಪಡಿಸುತ್ತಾರೆ ಎನ್ನುವುದು ಅತಿಶಯೋಕ್ತಿಯಲ್ಲ. ಒಟ್ಟಿನಲ್ಲಿ ತರಂಗಿಣಿ ಪ್ರತಿಯೊಬ್ಬ ಆಧ್ಯಾತ್ಮ ಜೀವಿಯೂ ಓದಬೇಕಾದ ಅಮೂಲ್ಯವಾದ ಕೃತಿ. ಓದದೆ ಇರುವವನಿಗೆ ಆಗುವ ನಷ್ಟ ತುಂಬಾ. ಓದುವವನಿಗೆ ಆಗುವ ಲಾಭ ಅಪಾರ.

(೧೭ನೇ ಪುಟದಿಂದ)

ಮತ್ತು ಕ್ರಿಮಿನಾಶಕ ಸಿಂಪಡಿಸಿದರೆ ಸರಿಯಾಗುತ್ತೆ. ಒಳಗಿನಿಂದ ಬಂದುದಲ್ಲ, ಹೊರಗಿನಿಂದ ಆವರಿಸಿದುದು" ಎಂದರು. ಆಗ ನನ್ನಲ್ಲಿ ಒಂದು ವಿಚಾರ ಸ್ಫುರಿಸಿತು, ಸಾಧಕ ಜೀವನದ ಸಸಿ ಬೆಳೆಯುತ್ತಿರುವಾಗ ಹೊರಗಿನಿಂದ ಬಂದು ಕಾಡಿಸುವ ಹಸಿವು-ತೃಷೆ, ಮಾನಾಪಮಾನ, ಸ್ತುತಿ-ನಿಂದೆ ಇವು ಗಿಡಕ್ಕೆ ಹೊರಗಿನಿಂದ ಬಳಸುವ ರೋಗಗಳಂತೆ, ಹೇಗಾದರೂ ಇವನ್ನು ತೊಡೆಯಬಹುದು. ಆದರೆ ತನ್ನಂತರಂಗದಲ್ಲೇ ಗೆದ್ದಲು ತಿಂದಂತೆ ಹತ್ತುವ ನಿರಾಶೆ, ಆತ್ಮದೌರ್ಬಲ್ಯ ಮುಂತಾದವು ಒಳಗಿನಿಂದಲೇ ಬೆಳೆಯುವಂತಹವು. ಇವು ಬಹಳ ಅಪಾಯಕಾರಿ. ಯಾವ ಕಾರ್ಯವನ್ನೂ ಮಾಡಗೊಡವು, ಕ್ಲೈಬ್ಯ ನಿರಾಶೆಗಳಿಗೆ ಈಡುಮಾಡಿ, ಜೀವನ ವೃಕ್ಷವನ್ನೇ ಘಾತಿಸುವವು.**

(೨೫ನೇ ಪುಟದಿಂದ)

ಲೋಕದ ಚೇಷ್ಟೆಗೆ ರವಿಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.

—ಅಕ್ಕಮಹಾದೇವಿ.

ಜ್ಞಾನ, ಭಕ್ತಿ, ಚಿತ್ತ ಶುದ್ಧಿ, ತ್ಯಾಗ,
ದೇವರಿಗಾಗಿ ವ್ಯಾಕುಲತೆ ಇವೆಲ್ಲ
ದೈವೀಗುಣಗಳು. —ಸ್ವಾಮಿ ವಿರಜಾನಂದರು.

ನ ಗೆ ಹ ನಿ

ಒಬ್ಬ : ಏನಯ್ಯಾ, ಇವತ್ತು ನಿನ್ಹೆಂಡ್ತಿ ಅಡಿಗೇ ಸಹ ಮಾಡ್ದೆ ಮುನಿಸಿಕೊಂಡು ಮೂಲೇಲಿ ಮಲಗಿದಾಳಂತಲ್ಲಯ್ಯಾ ?

ಇನ್ನೊಬ್ಬ : ಯಾರಯ್ಯಾ ಹೇಳಿದ್ದು? ಅವಳ್ನ ಮೂಲೇಲಿ ಮಲಗೋಕ್ಬಿಟ್ರೆ ನಾನು ಗಂಡ್ಸಾಗಿ, ಗಂಡಾ ಆಗಿ ಪ್ರಯೋಜನವೇನಯ್ಯಾ! ಈಗ ತಾನೇ ನಾನೇ ಮಂಚದ ಮೇಲೆ ಹಾಸಿಗೆ ಹಾಸಿ, ಮಲಗು ಅಂತ ಹೇಳಿ ನಾನೇ ಅಡಿಗೆ ಮಾಡ್ಕೊಂಡು ಉಂಡ್ಬಂದಿದ್ದೀನಿ!



ಈ ತಿಂಗಳ ಮಂಗಳಮೂರ್ತಿ

ಅನುಭಾವದ ರಸಚೇತನ ಜಿ. ಎಸ್. ಶಿವರುದ್ರಪ್ಪ

—ಗೊ. ರು. ಚನ್ನಬಸಪ್ಪ

ಕಣ್ಣೀರಿನುಪ್ಪು ಸೋಂಕದ ಸುಖಕೆ
ಹಂಬಲಿಸದಿರೊ ಬೆಪ್ಪೆ ;
ದುಃಖ ಫಲವಿಡಿ ಇದೇಕೋ ನಿನ್ನೆದುರು
ತಟ್ಟೆಯುಲಿ,
ಸುಲಿ, ಸುಖ ಅದರ ಸಿಪ್ಪೆ !

ಇದು ಕವಿ ಶಿವರುದ್ರಪ್ಪನವರ ಕವನದ ಒಂದು ಚರಣ ; ಸುಖ-ದುಃಖಗಳಿಗೆ ವಿನೂತನ ವ್ಯಾಖ್ಯಾನ !

'ಕಣ್ಣೀರ ಹನಿಯಲ್ಲಿ ಮೊಗದ ನಗೆಯನ್ನು ಕಂಡ, ಜಗದ ಹೃದಯವನ್ನು ಕಂಡ, ವಿವಿಧ ಅನುಭವದ ಸವಿಯುಂಡ' ಈ ಕವಿ ಮೊದಲು ಹಾಡಿದುದು 'ಸಾಮ ಗಾನ'. ಅದು 'ಊರ್ಧ್ವ ಗಮನಾಭಿಲಾಷೆ' ಯ ಉದಯ ಗೀತೆ!

'ದಿಟವ ದಿಟ್ಟಿಸಿ ಧೈರ್ಯದಲಿ' ಮುನ್ನಡೆದಿರುವ ಈ ಕನ್ನಡ ಕವಿಚೇತನದ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ಈಸೂರು. 'ಏಸೂರು ಸಿಕ್ಕಿದರೂ ಈಸೂರು ಸಿಕ್ಕವು' ಎನ್ನುವ ಗಾದೆ ಮಾತೊಂದಿದೆ ! ಬಹುಶಃ ದೂರದ ಮಲೆನಾಡಿನಲ್ಲಿರುವುದರಿಂದ ಆ ಗಾದೆ ಹುಟ್ಟಿರಬಹುದು ! ತಂದೆ ಶಾಂತವೀರಪ್ಪ ; ತಾಯಿ ವೀರಮ್ಮ , 1926ರ ಫೆಬ್ರವರಿ 7 ಹುಟ್ಟಿದ ದಿನ.

ಶಾಂತವೀರಪ್ಪನವರದು ಮಾಸ್ತರಿಕೆಯ ಜಾಯಮಾನ. ಮಾಸ್ತರ ಮಗನೆಂತಲೇ ಶಿವರುದ್ರಪ್ಪನವರಲ್ಲಿ ನನಗೆ ಅಭಿಮಾನ ! (ನಾನೂ ಕೆಲಕಾಲ ಮಾಸ್ತರನಾಗಿದ್ದ ಕಾರಣ !) ತಂದೆಗೆ ಊರಿಂದ ಊರಿಗೆ ವರ್ಗ ; ಮಗನಿಗೂ ಅದೇ ಮಾರ್ಗ. ಹೊನ್ನಾಳಿಯಲ್ಲಿ ಓ ನಾ ಮ; ಕೋಟೆಹಾಳದಲ್ಲಿ ಪಾಟಿ ಪುಸ್ತಕ. ರಾಮಗಿರಿಯಲ್ಲಿ ಏಬಿಸಿಡಿ ; ಬೆಲಗೂರಿನಲ್ಲಿ ಭಿನ್ನರಾಶಿ. ದಾವಣಗೆರೆಯಲ್ಲಿ ಆಲ್ಜಿಬ್ರಾ-ಜಾಮಿಟ್ರಿ.

ಇಂಟರ್ ಮೀಡಿಯಟ್ ಕಲಿಕೆ ತುಮಕೂರಿನಲ್ಲಿ. ಪದವಿ ಪರೀಕ್ಷೆಗೆ ಮೈಸೂರು. ಅಂತೂ ಕಲಿಯುವಾಗಲೇ ಲೋಕ ಸಂಚಾರದ ಅನುಭವ.

ಶಾಲಾ ಮಾಸ್ತರನ ಮಗನೆಂದರೆ ಕೇಳಬೇಕೆ? ಹಾಸಿ ಹೊದ್ದರೂ ಮಿಕ್ಕು ಹಂಚುವಷ್ಟು ಬಡತನ. (ಹಂಚಿಕೊಳ್ಳುವವರಿಲ್ಲದೆ ಎರಡು ಮಡಿಕೆ ಮಾಡಿಕೊಂಡು ತಾನೇ ಹಾಸಿ ಹೊದ್ದ ದಿಟ್ಟತನ !) ಪದವಿ ಶಿಕ್ಷಣ ಪಡೆಯಲೆಂದರೆ ಹಣದ ಕೊರತೆ. ಗಳಿಸಿಯಾದರೂ ಕಲಿಯುವ ಹಂಬಲ. ಅದಕ್ಕಾಗಿ ಗುಬ್ಬಿ ತಾಲ್ಲೂಕು ಕಛೇರಿಯಲ್ಲಿ ನೌಕರಿ ; ತಿಂಗಳಿಗೆ ೩೫ ರೂಪಾಯಿ ಸಂಬಳದ 'ಗುಮಾಸ್ತೆ'ಗಿರಿ.

ಕೂಡಿಟ್ಟ ಹಣದೊಂದಿಗೆ ಮೈಸೂರಿಗೆ ಪ್ರಯಾಣ. ೧೯೪೯ರಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. (ಆನರ್ಸ್) ಪದವಿ. ಎ. ಆರ್. ಕೃಷ್ಣಶಾಸ್ತ್ರಿ, ಕುವೆಂಪು ಅವರಂಥ ಮಹೋಪಾಧ್ಯಾಯರ ಆಶೀರ್ವಾದ ಪಡೆದ ಪುಣ್ಯ. ಜಿ. ಎಸ್. ಶಿವರುದ್ರಪ್ಪ ಮೈಸೂರು ವಿಶ್ವವಿದ್ಯಾನಿಲಯದಲ್ಲೇ ಪ್ರಥಮ ಸ್ಥಾನದಲ್ಲಿ ಬಂದ ಸ್ನಾತಕೋತ್ತರ ಪದವೀಧರ. ಬಿ.ಎಂ. ಶ್ರೀ ರಜತ ಪದಕ ಮತ್ತು ಕೇಣಿ ಸಿದ್ದಪ್ಪನವರ ಸ್ವರ್ಣಪದಕಗಳಿಂದ ಪ್ರತಿಭೆಗೆ ಪುರಸ್ಕಾರ.

'ಸೌಂದರ್ಯ ಸಮೀಕ್ಷೆ' ಶಿವರುದ್ರಪ್ಪನವರಿಗೆ ಡಾಕ್ಟರೇಟ್ ತಂದುಕೊಟ್ಟ ಮಹಾ ಪ್ರಬಂಧ. ಅಧ್ಯಾಪಕ ವೃತ್ತಿಯ ಭೂಮಿ ಪೂಜೆ ನಡೆದುದು ದಾವಣಗೆರೆಯ ಡಿ. ಆರ್. ಎಂ. ಕಾಲೇಜಿನಲ್ಲಿ. ನಂತರ ಮೈಸೂರು ಯುವರಾಜ ಕಾಲೇಜು, ಮಹಾರಾಜ ಕಾಲೇಜುಗಳಲ್ಲಿ ಸೇವೆ. ಮಾನಸ ಗಂಗೋತ್ರಿ, ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯಗಳಲ್ಲಿ ಉಪ ಪ್ರಾಧ್ಯಾಪಕ ವೃತ್ತಿ. ೧೯೬೬ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆಗಮನ. ೧೯೭೧ ರಿಂದ ಅಲ್ಲಿನ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಸ್ಥಾನ.

ಇದಿಷ್ಟು ಶಿವರುದ್ರಪ್ಪನವರ ಜೀವನ ಕಥೆ; ಇದುವರೆಗೆ ನಡೆದುಬಂದ ದಾರಿ. ಆದರೆ ಅವರು ನಾಡಿಗೆ ಪರಿಚಿತರಾದುದು ಕೇವಲ ಈ ಯಾತ್ರೆಯಿಂದಲ್ಲ ; ಕಾವ್ಯ ಯಾತ್ರಿಕರಾಗಿ !

ಇಂದು ಜಿ. ಎಸ್. ಎಸ್. ಕನ್ನಡ ಕಾವ್ಯ ಜಗತ್ತಿನಲ್ಲಿ ಅಗ್ರಪಂಕ್ತಿಯ ಹೆಸರು. ಅವರು ಕೇವಲ ಭಾವುಕ ಕವಿಯಲ್ಲ ; ಪ್ರಯೋಗಶೀಲ ಕವಿ ; ಪ್ರಗತಿಶೀಲ ಕವಿ; ಪ್ರಕೃತಿ ಪೂಜೆಯ ಕವಿ ; ಪ್ರತಿಮೆಗಳ ಕವಿ ! ಈ ಯುಗದ ಪ್ರಾತಿನಿಧಿಕ ಕವಿ !

ಶಿವರುದ್ರಪ್ಪನವರ ಕವನಗಳಲ್ಲಿ 'ನವೋದಯ'ವಿದೆ; 'ನವ್ಯ'ತೆಯಿದೆ;

'ಸಮನ್ವಯ' ವಿದೆ. ಸಾಹಿತ್ಯ ಲೋಕದಲ್ಲಿ 'ಸಮನ್ವಯ ಕವಿ' ಯೆಂದೇ ಪ್ರಖ್ಯಾತಿ; ಆದರೂ ಯಾವ ಪಂಥಕ್ಕೂ ಸೇರದ ಸ್ವತಂತ್ರ ವ್ಯಕ್ತಿ.

ಸಹಜತೆ ; ಸೌಜನ್ಯ ಶೀಲತೆ ಅವರ ಕಾವ್ಯದ ವಿಶೇಷ ಲಕ್ಷಣ. ಅವರ ಕಾವ್ಯ ಹೆಸರಿಗಾಗಿ ಕೊಸರಿಬಂದ ಉಸಿರಲ್ಲ ; ಮಳೆ-ಮಣ್ಣಿನ ಸಂಯೋಗದಿಂದ ಮೊಳೆದೇಳುವ ಸಹಜ ಹಸಿರು ! ಅವರೇ ಹೇಳುವಂತೆ, "ಕಾಲ ಮತ್ತು ಮಾನವ-ಇವೆರಡರ ಸಂಬಂಧ ಹಾಗೂ ಸಂಘರ್ಷ ; ನಾಗರಿಕ ಬದುಕಿನಲ್ಲಿ ಮನುಷ್ಯ ದಿನದಿಂದ ದಿನಕ್ಕೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಿರುವ ದುರಂತ ; ವ್ಯಕ್ತಿ-ವ್ಯಕ್ತಿಗಳ ನಡುವಣ ಸಂಪರ್ಕ ಕಡಿದು ಉಂಟಾಗಿರುವ ಏಕಾಕಿತನದ ವಿಷಾದ-ಈ ಮೂರು ವಸ್ತುಗಳ ಚಿಂತನದ ಫಲ" ಅವರ ಕಾವ್ಯ ರಾಶಿ !

ಹೃದಯದ ಹೊರೆ ಹಗುರ ಮಾಡಿಕೊಳ್ಳುವುದು, ಕಹಿ ಸಿಹಿ ಮಾಡಿಕೊಳ್ಳುವುದು ಈ ಕವಿ ಕೊಳಲಿನ ಆಶಯ !

ಕಾವ್ಯ-ಸೌಂದರ್ಯ, ಮಾಧುರ್ಯ ಮತ್ತು ಗಾಂಭೀರ್ಯಗಳಿಂದ ಕೂಡಿದ ಅಭಿವ್ಯಕ್ತಿ ಎನ್ನುವುದಾದರೆ, ಭಾವ-ಭಾಷೆ-ಬುದ್ಧಿಗಳ ಸಂಯೋಜನೆ ಎನ್ನುವುದಾದರೆ ಶಿವರುದ್ರಪ್ಪನವರ ಕಾವ್ಯ ಅದಕ್ಕೆ ಸಮರ್ಥ ಸಾಕ್ಷಿ !

ಕವಿ ಜಿ. ಎಸ್. ಎಸ್. ಎಲ್ಲ ಕೇಳಲಿ ಎಂದು 'ಸಾಮಗಾನ' ಹಾಡಿದವರಲ್ಲ ; ಸೃಷ್ಟಿಯ 'ಚೆಲುವು-ಒಲವು' ಗಳನ್ನು ಸ್ಪಷ್ಟವಾಗಿ ಕಂಡವರು. ಅವರು ಸೃಷ್ಟಿಸಿದ 'ದೇವಶಿಲ್ಪ' ಅನನ್ಯ ಸುಂದರ. ಹಚ್ಚಿಟ್ಟಿರುವ 'ದೀಪದ ಹೆಜ್ಜೆ' ವಾಸ್ತವ ಬದುಕಿನ ನೀತಿ ಸಂಹಿತೆ. 'ಕಾರ್ತೀಕ' ದಲ್ಲಿ ಅವರು ಸಲ್ಲಿಸಿರುವ ಪ್ರಕೃತಿ ಪೂಜೆಯ ಪ್ರಸಾದ 'ತೀರ್ಥವಾಣಿ'. ವರ್ತಮಾನದ ಬದುಕನ್ನು 'ಅನಾವರಣ' ಮಾಡಿ ಕತ್ತಲೆಯಿಂದ ಬೆಳಕಿಗೆ ಹೋಗಲು ಅವರು 'ತೆರೆದ ದಾರಿ' ತೋರಿದ್ದಾರೆ. ನಮಗರಿವಿಲ್ಲದಂತೆಯೇ ನಮ್ಮ ಸುತ್ತಲೂ ಎದ್ದು ನಿಲ್ಲುವ 'ಗೋಡೆ' ಯನ್ನು ಕರಗಿಸಿ 'ನನ್ನ-ನಿನ್ನ ನಡುವೆ' ಸಂಬಂಧ ಸೇತುವೆ ನಿರ್ಮಿಸಿದ್ದಾರೆ !

ನಿರ್ಭೀತ ಮನೋವೃತ್ತಿಯ ಈ 'ಕರ್ಮಯೋಗಿ' ಸಾಹಿತ್ಯ ಲೋಕದ 'ವಿಮರ್ಶೆಯ ಪೂರ್ವ-ಪಶ್ಚಿಮ' ದರ್ಶನ ಮಾಡಿಸಿದ್ದಾರೆ. 'ಸೌಂದರ್ಯ ಸಮೀಕ್ಷೆ' ಮಾಡಿದ ಈ ಸಾಹಸಿಯಿಂದ ಪರಂಪರೆಯ ಸಾಹಿತ್ಯದ 'ಪರಿಶೀಲನೆ' ನಡೆದಿದೆ. ಕನ್ನಡ ಸಾಹಿತ್ಯಜೀವನದ ಪ್ರತಿಬಿಂಬ "ಗತಿಬಿಂಬ"ವಾಗಿದೆ. ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ'. ಪ್ರವಾಸಾನುಭವದ ಕೃತಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ. ನಡೆಸಿರುವ 'ಕನ್ನಡಸಾಹಿತ್ಯ ಸಮೀಕ್ಷೆ' ವಿಚಾರಪೂರ್ಣ.

ಮಾಡಿಕೊಟ್ಟಿರುವ 'ಮಹಾ ಕಾವ್ಯ ಸ್ವರೂಪ' ದರ್ಶನ ಅಧ್ಯಯನ ಪೂರ್ಣ. ಅವರಿಂದ 'ನವೋದಯ' ದ ಸತ್ಯರೂಪ ದರ್ಶನವೇ ಆಗಿದೆ.

ಮಹಾಕವಿ ಕುವೆಂಪು ಅವರು ಹೇಳುವಂತೆ, ಜಿ. ಎಸ್. ಶಿವರುದ್ರಪ್ಪನವರು 'ಕಾವ್ಯ ಮತ್ತು ವಿಮರ್ಶೆಗಳ ಕ್ಷೇತ್ರಗಳಲ್ಲಿ ಕೆಲಸಮಾಡಿ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದವರು. ಕವಿ ಕೆ. ಎಸ್. ನರಸಿಂಹಸ್ವಾಮಿ ಅವರ ಮಾತಿನಲ್ಲಿ ಹೇಳುವುದಾದರೆ 'ಒಳ್ಳೆಯದು ಒಳ್ಳೆಯದನ್ನೇ ಮಾಡುತ್ತದೆ. ತಾನೂ ಬಂಗಾರವಾಗಿ ಬಾಳುತ್ತದೆ. ಜಿ. ಎಸ್. ಎಸ್. ಅದಕ್ಕೊಂದು ಉಜ್ವಲ ನಿದರ್ಶನ'

'ಜಿ. ಎಸ್. ಎಸ್.' ಎಂಬ ಮೂರಕ್ಷರಗಳ ಬಗ್ಗೆ ಡಾ|| ಎಸ್. ಎಂ. ವೃಷಬೇಂದ್ರಸ್ವಾಮಿ ಅವರು ಕೊಟ್ಟಿರುವ ವ್ಯಾಖ್ಯಾನ ಸ್ವಾರಸ್ಯಪೂರ್ಣ; 'ಅವರು ಯಾರಿಗೂ, ಎಂದೂ 'ಜೀ' ಎಂದವರಲ್ಲ; ಇತರರನ್ನು ತೃಪ್ತಿಪಡಿಸಲಿಕ್ಕಾಗಿ ತಾರತಮ್ಯವಿಲ್ಲದೆ ಎಲ್ಲದಕ್ಕೂ 'yes yes' ಎಂದು ತಲೆಯಾಡಿಸಿದವರಲ್ಲ!' ಬಹುಶಃ ಶಿವರುದ್ರಪ್ಪನವರ ಈ ವೈಶಿಷ್ಟ್ಯವೇ ಕೆಲವರಿಗೆ ವಿಚಿತ್ರವಾಗಿ ಕಾಣುತ್ತಿರಲು ಸಾಕು.

ನಿಜ, ಶಿವರುದ್ರಪ್ಪನವರನ್ನು ತಪ್ಪಾಗಿ ತಿಳಿದುಕೊಂಡವರು ಹಲವಾರು ಮಂದಿ. ಅವರಲ್ಲಿ ಈ ಲೇಖಕನೂ ಒಬ್ಬ (ಈಗಲ್ಲ!). ಆ ಮೊದಲು ನಾನು ಅವರನ್ನು ನೋಡಿದ್ದುದು ದೂರದಿಂದ. ಆದರೆ ದೂರದ ಬೆಟ್ಟವೂ ನುಣ್ಣಗೆ ಕಾಣಿಸದಿದ್ದುದೊಂದು ಕೌತುಕ ಅವರೊಂದು ರೀತಿಯ 'ರಿಜರ್ವ್' ಎಂದು ಅವರಿವರು ಹೇಳಿದ ಮಾತು ಮನಸ್ಸಿನಲ್ಲಿ ಮನೆ ಮಾಡಿದ್ದುದು ಅದಕ್ಕೆ ಕಾರಣವಿರಬಹುದು. ಅಂತೂ ಹತ್ತಿರದಿಂದ ಕಂಡಾಗಲೇ ಅವರ ಎತ್ತರ ತಿಳಿದದ್ದು.

ಜಿ. ಎಸ್. ಎಸ್. ಅವರೊಡನೆ ನನಗೆ ಪರಿಚಯ ಬೆಳೆಯಲು ಕಾರಣವಾದುದು ತರೀಕೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನ. (ಅವರು ನಮ್ಮ ತರೀಕೆರೆ ತಾಲ್ಲೂಕಿನ ಅಳಿಯರೆಂಬುದು ತಿಳಿದುದೂ ಆಗಲೇ!) ಆ ಸಂದರ್ಭದಲ್ಲಿ ಹೊರತಂದ 'ಹೊನ್ನ ಬಿತ್ತೇವು ಹೊಲಕೆಲ್ಲ' ಸ್ಮರಣ ಗ್ರಂಥ ಸಮಿತಿಯ ಸದಸ್ಯರಾಗಿ ಶಿವರುದ್ರಪ್ಪನವರು ಇತ್ತ ಸಲಹೆ ಸಹಕಾರಗಳು ಸೌಜನ್ಯಪೂರ್ಣ. ಅಲ್ಲಿಂದೀಚೆಗೆ ಅವರನ್ನು ಆಗೀಗ ಕಾಣುವ, ಮಾತನಾಡುವ, ಮುಖ್ಯವಾಗಿ ಒಪ್ಪಾಗಿ ತಿಳಿದುಕೊಳ್ಳುವ ಅವಕಾಶ.

'ವೇದಿಕೆ' ಗಳಿಂದ ಆದಷ್ಟು ದೂರವಿರುವುದು ಶಿವರುದ್ರಪ್ಪನವರ ಮತ್ತೊಂದು ವೈಶಿಷ್ಟ್ಯ. ಹೆಚ್ಚು ಅಂತರ್ಮುಖಿ, ಮಿತಭಾಷಿ; ಆದರೂ ಸರಸಿ. ಅತ್ಯಂತ ಸಜ್ಜನಿಕೆಯ ವ್ಯಕ್ತಿ; ಆದರೂ "ಯಾವ 'ಮತ' 'ಮಠ' ಕ್ಕೂ ಸೇರಲೆಳಸದ ಸದಾ ಹಿಂಡನಗಲಿದ ಗಜದಂತಹ ಸರ್ವಜ್ಞ ಸ್ವಭಾವ!"

'ಬಲು ನೇರ, ಬಲು ಧೀರ, ಬಲು ಹರಿತ, ಶರಣ ಪಥ' ಸುತ್ತ 'ಕಲ್ಲು ಮುಳ್ಳಿನ ಹಾವು ಚೇಳಿನ ಪರಂಪರೆ, ಬೆಂಕಿಯ ಬೇಲಿ, ಅಗ್ನಿಯ ಕುಂಡ, ಕಲ್ಲಿನ ಗಾಣ, ಮುಳ್ಳಿನ ಮಕುಟ, ಸಿಡಿಗುಂಡುಗಳ ಧೂಮುಜ್ವಲನದ ಜ್ವಾಲೆ' ಇದ್ದರೂ ಅವು ಅವರ ದೃಷ್ಟಿಯಲ್ಲಿ ದಾರಿ ತೋರುವ ಕೈಮರಗಳು!

ಶಿವರುದ್ರಪ್ಪನವರು ಭಾವಜೀವಿಯಿದ್ದರೂ ವಾಸ್ತವ ಬದುಕನ್ನು ಮರೆತವರಲ್ಲ. 'ಮೂಕ ಬೇಸರದ ಗೋರಿಯಾಗಿರುವ ಈ ಲೋಕ'ವನ್ನು 'ನೂರು ವರ್ಣದ ನೂರು ರಾಗ'ದ ಮಧುರ ಗೀತೆ ಹಾಡಿ, 'ಏಳು ಸುತ್ತಿನ ಮಲ್ಲಿಗೆ' ಯನ್ನು ಅರಳಿಸಿದವರು. 'ಕಾಲುದಾರಿಯಲ್ಲಿ ಕಣ್ಣಿಟ್ಟು ನಡೆ'ಯಬೇಕೆಂದು ತಿಳಿಸುವ ವ್ಯವಹಾರ ಕುಶಲಿ.

ಕನ್ನಡ ಕಾವ್ಯ ಲೋಕದಲ್ಲಿ ಈ ಕವಿ ಕೋಗಿಲೆಗೆ 'ಸಾವಿರ ಜನಕ್ಕೆ ನೆರಳಾಗುವ ಮಹದಾಸೆ ಇರದಿದ್ದರೂ, ಒಂದೆರಡಾದರೂ ಬೀಜವಾಗುವಂಥ ಹಣ್ಣು ಬಿಟ್ಟಾವೆಂದು ನಂಬಿ ಕಾಯುವ' ಹಂಬಲ. ಶಿವರುದ್ರಪ್ಪನವರು ಶಿವಕವಿ; ಶಿವಾನುಭಾವಿ. ಎಂತಲೇ ಅವರ ಸಾಹಿತ್ಯ ಬುದ್ಧಿಯನ್ನು ಶುದ್ಧಿಗೊಳಿಸುವ, ಸಿದ್ಧಿಗೇರಿಸುವ ಸಿದ್ಧೌಷಧ. ಅವರ ಅನುಭಾವ ಅಪ್ರತಿಮ; ಅಭಿವ್ಯಕ್ತಿ ರಸೋಜ್ವಲ!

ಶಿವರುದ್ರಪ್ಪನವರಿಗೆ ಐವತ್ತು ತುಂಬಿದಾಗ ಅಭಿಮಾನಿಗಳೆಲ್ಲ ಅರ್ಪಿಸಿದ ಗ್ರಂಥ 'ಸ್ನೇಹ ಕಾರ್ತೀಕ' ಅವರ ಘನ ವ್ಯಕ್ತಿತ್ವದ ಪ್ರತೀಕ. 'ಕೃತಿಗೆ ಸರಿಯಾದ ಕೃತಿ !

'ಸ್ನೇಹ ಕಾರ್ತೀಕ' ದಲ್ಲಿ ನಾಡಿನ ಬಹುತೇಕ ಬಲ್ಲವರು ಶಿವರುದ್ರಪ್ಪನವರನ್ನು ಕುರಿತು ಮನತುಂಬಿ ಬರೆದಿದ್ದಾರೆ. ಅವರಲ್ಲಿ ಕೆಲವರ ಕೆಲವು ನುಡಿಗಳನ್ನಾದರೂ ಇಲ್ಲಿ ನೆನಪುಮಾಡಿಕೊಡಬೇಕೆನಿಸುತ್ತದೆ:

"ಶಿವರುದ್ರಪ್ಪ ಕಷ್ಟ ಸಹಿಷ್ಣು, ನೇರ ಸ್ವಭಾವದ ಸರಳ ಜೀವಿ"

—ಡಾ॥ ಶಿವಕುಮಾರಸ್ವಾಮಿಗಳು

"ತಮ್ಮ ಸಾಹಿತ್ಯ ನಿರ್ಮಿತಿಯೊಡನೆ ಇತರರ ಸಾಹಿತ್ಯದ ನಿರ್ವಾಹವನ್ನು ನೋಡಿಕೊಳ್ಳುತ್ತಿದ್ದಾರೆ"

ಡಾ॥ ದ. ರಾ. ಬೇಂದ್ರೆ

"ಕಾವ್ಯದಲ್ಲಿ, ಸೌಂದರ್ಯ ಶಾಸ್ತ್ರದಲ್ಲಿ, ವಿಮರ್ಶೆಯಲ್ಲಿ ತಮ್ಮದೇ ಆದ ಅನೇಕ ವೈಶಿಷ್ಟ್ಯಗಳನ್ನು ಸಾಧಿಸಿದ್ದಾರೆ"

ಡಾ॥ ವಿ. ಕೃ. ಗೋಕಾಕ

ಶಿವರುದ್ರಪ್ಪನವರ ಭಾವ ಶ್ರೀಮಂತಿಕೆಯ ಪೂರ್ಣ ಪರಿಚಯಕ್ಕೆ 'ಸ್ನೇಹ ಕಾರ್ತೀಕ' ವನ್ನು ಓದಬೇಕು.

ಮಾತು ಜ್ಯೋತಿರ್ಲಿಂಗವಾಗಬೇಕಾದರೆ ಅದು ಸಾರ್ಥಕವಾಗಿರಬೇಕು. ಶಾಶ್ವತ ಸತ್ಯವಾಗಿರಬೇಕು. ಶಿವರುದ್ರಪ್ಪನವರ ಸಾಹಿತ್ಯದಲ್ಲಿ ಅಂತಹ ಜ್ಯೋತಿರ್ಲಿಂಗಗಳ ವಿಶ್ವರೂಪ ದರ್ಶನವೇ ಆಗುತ್ತದೆ. ನಾಡಿನ ಜ್ಞಾನ ಹಾಗೂ ಅನ್ನ ದಾಸೋಹದ ಮಹಾ ಕೇಂದ್ರವೆನಿಸಿರುವ ಶ್ರೀ ಸಿದ್ಧಗಂಗಾ ಮಠವನ್ನು ಕುರಿತು ಈ ಕವಿ ವಾಣಿಯನ್ನು ಕೇಳಿ—

ಸದ್ದು ಗದ್ದಲವಿರದ ಸಾಧನೆ
ಇಲ್ಲಿ ಗದ್ದುಗೆ ಏರಿದೆ,
ಕಾಯಕವೆ ಕೈಲಾಸವೆನ್ನುವ
ಮಾತು ಕೃತಿಯೊಳು ಮೂಡಿದೆ !
ಕಾವಿಯುಡುಗೆಯನುಟ್ಟು ನಭವೆ
ಕಿರಣ ಹಸ್ತವ ಚಾಚಿದೆ ;
ಎಲ್ಲ ನನ್ನವರೆನುವ ಭಾವದ
ಕರುಣೆಯೇ ಕಣ್ತೆರೆದಿದೆ !

—ಎಷ್ಟು ಅರ್ಥಪೂರ್ಣ ; ಎಷ್ಟು ಭಾವಪೂರ್ಣ ! ಏನು ಗಂಭೀರ ; ಎಷ್ಟು ನಿರಾಡಂಬರ ! ಎಂತಹ ಕವಿ ಹೃದಯ ; ಏನು ಸಹಜ ಚಿತ್ರಣ !

ಶಿವರುದ್ರಪ್ಪನವರಿಗೆ ಬುದ್ಧ ಬಸವರ ಆದರ್ಶದ ರಕ್ಷೆಯಿದೆ. ಅವರದು ಸದಾ ಪ್ರಗತಿಶೀಲ ವಿಚಾರಧಾರೆ. ಹೊಸ ಬದುಕಿನ ಚಿಂತನೆ. ಯುವ ಜನಾಂಗದ ಬಗ್ಗೆ ಆಶಾವಾದ. ಅವರು 'ಅನಿವಾರ್ಯ ಕರ್ಮ' ವಾಗಿ ಹಾಡಿದರೂ ಸಮಷ್ಟಿ ಕ್ಷೇಮಕ್ಕೆ ಬೇಕಾದುದನ್ನು ಹಾಡಿದ್ದಾರೆ. ಅದಕ್ಕಾಗಿ ನಾಡು ಋಣಿಯಾಗಿದೆ.

ಈ ಮಂಗಳಮೂರ್ತಿಯ ಪರಿಚಯ ಲೇಖನದ ಮುಕ್ತಾಯಕ್ಕೆ ಹಿರಿಯ ಸಾಹಿತಿ ಹೆಚ್. ದೇವೀರಪ್ಪನವರು 'ಸ್ನೇಹ ಕಾರ್ತೀಕ' ದಲ್ಲಿ ಬರೆದಿರುವ ಒಂದು ಮಾತನ್ನು ಉದ್ಧರಿಸುವುದು ಹೆಚ್ಚು ಸೂಕ್ತ:

"ಬೆಳವಲದ ನಾಡಿನ ಒಂದು ಪುಟ್ಟಹಳ್ಳಿಯಲ್ಲಿ ಜನ್ಮವೆತ್ತಿದ ಈ ಬೆಳಕು ಬೆಳೆದು ಬಳ್ಳಿವರಿದು ಅದರ ಹೆಜ್ಜೆ ಶಿವಮೊಗ್ಗ, ಮೈಸೂರು, ಬೆಂಗಳೂರು, ಪಾಂಡಿಚೆರಿ, ಡೆಲ್ಲಿ, ಹೈದರಾಬಾದ್, ಮಾಸ್ಕೋ ಎಷ್ಟೋ ಕಡೆ ಮೂಡಿರುತ್ತದೆ! ಅದು ಹೋದೆಡೆಯಲ್ಲೆಲ್ಲ ಬೆಳಕೇ ಬೆಳಕು!

**

ಹರಿಹರ ಕಂಡಂತೆ ಬಸವಣ್ಣ-ಅಕ್ಕಮಹಾದೇವಿ

—ಜಗದ್ಗುರು ಮಾತೆ ಮಹಾದೇವಿ

ಭಾಗ ೩

ಪರಸತಿಯರನ್ನು ಬಯಸುವ ದುರ್ಬಲ ಪ್ರಾಣಿಯನ್ನು 'ಜಂಗಮ'ನೆನ್ನುವುದಿರಲಿ 'ಪರಸತಿಯ ಚಿತ್ತದಲಿ ಬಯಸುವವನೆ ಹೊಲೆಯ' ಎಂಬುದರ ಮೂಲಕ 'ಹೊಲೆಯ' ಎನ್ನುವರು. ಇಂತಹ ಬಸವಣ್ಣನವರು ಅವಿವೇಕಿ ಅಜ್ಞಾನಿ ಮನೋಸ್ಥೈರ್ಯವಿಲ್ಲದ ಅನೀತಿವಂತನೊಬ್ಬನು "ಹೆಂಗೂಸಿಲ್ಲದೆ ಇರ್ಪುದಿಲ್ಲ" ಎಂದ ತಕ್ಷಣಕ್ಕೆ ಅವನನ್ನು ಸಂಗಮನಾಥನೆಂದು, ಜಂಗಮರೆಂದು ಕರೆದು, ತನ್ನ ಸತಿಯನ್ನು ಒಪ್ಪಿಸುವಷ್ಟು ಮೂರ್ಖಮತಿಗಳೇ ? ಅದತ್ತಲಿರಲಿ, ಸ್ವತಃ ಬಸವಣ್ಣನವರು ಲಗ್ನವಾಗಿಯೂ ಕೂಡ ಕೆಲವಾರು ವರ್ಷಗಳ ನಂತರ (ಗಾಂಧೀಜಿಯಂತೆ) ಬ್ರಹ್ಮಚರ್ಯವನ್ನು ಪಾಲಿಸುವ ಸಂಕಲ ತೊಟ್ಟಂತೆ ತೋರುವುದು. ಅದನ್ನು ಅವರ ಧರ್ಮಪತ್ನಿ ನೀಲಮ್ಮ ತಾಯಿಯೇ ಹೀಗೆ ಹೇಳಿದ್ದಾಳೆ :

ಮಡದಿ ಎನ್ನಲಾಗದು ಎನ್ನನು ಬಸವಣ್ಣನಿಗೆ
ಪುರುಷನೆನ್ನಲಾಗದು ಬಸವಣ್ಣನ ಎನಗೆ
ಆನು ಬಸವನಿಗೆ ಶಿಶುವಾದೆ, ಬಸವನೆನ್ನ ಶಿಶುವಾದ

ಅಧ್ಯಾತ್ಮ ಹಂತವನ್ನು ಏರುತ್ತ ಏರುತ್ತ ಸ್ವತಃ ಪತ್ನಿಯನ್ನು ತನ್ನ ಮಗಳೆಂದು ಬಸವಣ್ಣ ತಿಳಿದರೆ, ಪತಿಯನ್ನು ತನ್ನ ಮಗನೆಂದು ಭಾವಿಸಿ ಕೇವಲ ತಾಯಿ–ಮಕ್ಕಳು, ತಂದೆ–ಮಗಳ ಹಾರ್ದಿಕ ಸಂಬಂಧವನ್ನು ಉಳಿಸಿಕೊಂಡ ನೀಲಾಂಬಿಕೆ ಎತ್ತ ! "ಊರೊಳಗೆ ಪಣ್ಯಾಂಗನೆಯರಿಲ್ಲದಿರ್ದಡೆನ್ನಂ ಜಂಗಮಕ್ಕೆ ಬಸವರಾಜಂ ಕೊಟ್ಟಲ್ಲದೆ ಮಾಣನೆಂದು ಸಿಂಗರಿಸಿಕೊಂಡು ಬರವಂ ಸಾರ್ದಿಪ್ಪ" ಮಾಯದೇವಿ ಎತ್ತ? ಪತಿಯೊಡನೆಯೇ ಶಾರೀರಿಕ ಸಂಬಂಧ ದಾಟನಿಂತ ಶುದ್ಧ ಅಪರಂಜಿಯಂತಹ ನೀಲಾಂಬಿಕೆ ತಾನಾಗಿ ಸಿಂಗರಿಸಿಕೊಂಡು ನಿಲ್ಲುವುದುಂಟೆ ? ಅಕಸ್ಮಾತ್ತಾಗಿ ಬಸವಣ್ಣನು ಅಂಥ ಮೂಢ ಕೆಲಸಕ್ಕೆ ಒಪ್ಪಿದರೂ ಪತಿಯ ವಿರುದ್ಧವೇ ಪ್ರತಿಭಟಿಸಿ ನಿಲ್ಲುವ ವಿಚಾರವಾದಿನಿಯಾಗಿದ್ದಳು ನೀಲಾಂಬಿಕೆ. ಅಂತಹ ವಿಚಾರ, ಆಚಾರ, ವಾಕ್‌ಸ್ವಾತಂತ್ರ್ಯವನ್ನು ಸ್ತ್ರೀಕುಲಕ್ಕೆ ಬಸವಣ್ಣನು ಒದಗಿಸಿದ್ದ. ಹರಿಹರನ ಈ ಅತಿರೇಕದ ಪ್ರಸಂಗ ಬಸವಣ್ಣನ ಭೂಮವ್ಯಕ್ತಿತ್ವಕ್ಕೆ ಕಲಂಕದ ತೆರೆ ಹೊದ್ದಿಸಿದೆ. ಈ ಪ್ರಸಂಗದ ಸಾರಾಸಾರ ವಿಚಾರ ಮಾಡದೆ, ಬಸವಣ್ಣನ ವಚನಗಳು ಬೆಳಕಿಗೆ ಬಂದ ಬಳಿಕವೂ ಸಹ, ಕಟ್ಟು ಕಥೆಯನ್ನು ನಿಜವಿರಬೇಕೆಂದು ನಂಬಿ ಅಪಹಾಸ್ಯ ಮಾಡುವವರು, ವಿಷಾದಿಸುವವರೂ ಇಲ್ಲದಿಲ್ಲ. ಉದಾಹರಣೆಗೆ: ಪಿ. ವಿ. ಅಜಿತಾರವರು ಬೆಂಗಳೂರು ವಿಶ್ವವಿದ್ಯಾ

೭೫ದ ಮಹಿಳಾವರ್ಷದ ವಿಶೇಷ ಸಂಚಿಕೆ "ಸಾಧನೆ" ಯಲ್ಲಿ "ಗಣಿ" ಎಂಬ ಕವನದಲ್ಲಿ ಸ್ತ್ರೀಯನ್ನು ಇತರರು ಕಂಡ ಬಗ್ಗೆ ಬರೆದಿರುವರು. ಅದರಲ್ಲಿ ಸಾಲು ೩೭–೪೦ ಹೀಗಿವೆ.

ತೀಟೆ ತೀರದ ಶರಣ
ಹುಡುಗಿ ಇಲ್ಲದೆ ಮಲಗ
ಕರೆಗೊಪ್ಪಿ ಒಳಸೇರಿದೆ
ಹೆಸರ ಬಲೆ-ಮುಗಿಲಿನುದ್ದ

ಈ ಪ್ರಸಂಗ ಎಂಥ ಕೆಟ್ಟ ಆಪಾದನೆಯನ್ನು ಬಸವಣ್ಣನವರ ಮೇಲೆ ಮಾಡಿದೆ ! ಯಾವ ಮಹಾಪುರುಷ ಸ್ತ್ರೀಸ್ವಾತಂತ್ರ್ಯಕ್ಕೆ, ಧಾರ್ಮಿಕ ಸಮಾನತೆಗೆ ಹೋರಾಡಿದನೋ, ತನ್ನ ಧರ್ಮದಲ್ಲಿ ಯಾವ ಧರ್ಮವೂ ಸ್ತ್ರೀಗೆ ಕೊಡದಷ್ಟು ಸ್ಥಾನಮಾನ ಕೊಟ್ಟನೋ, ಸಂಪ್ರದಾಯದ ಸಂಕೋಲೆಯಿಂದ ಬಿಡುಗಡೆ 'ಮಾಡಿ, ಆಕೆಗೆ ಶತಮಾನದಿಂದ ಅಂಟಿದ 'ಮಾಯೆ' ಎಂಬ ತಲೆಪಟ್ಟಿಯನ್ನು ಕಿತ್ತೆಸೆದನೋ ಅವನಿಗೆ ಈ ಅಪವಾದ! ಆಧುನಿಕರು ಹೀಗೆ ಅಪಾರ್ಥಮಾಡಲು ಕಾರಣರಾರು ? ಹರಿಹರನಂಥ ಮಹಾ ಕವಿಗಳು! ಹರಿಹರನು ದುರುದ್ದೇಶದಿಂದ ಬರೆದನೇ? ಖಂಡಿತ ಇಲ್ಲ ; ಕೇವಲ ಆವೇಶಭರಿತ ಅಜ್ಞಾನದಿಂದ ಬರೆದಿರುವನು !

ಬಸವಣ್ಣನ ಔದಾರ್ಯ–ತ್ಯಾಗಗಳನ್ನು, ಎಷ್ಟು ಬಣ್ಣಿಸಿದರೂ ಅಲ್ಪವೇ ಎಂಬ ಭರದಲ್ಲಿ ಹರಿಹರ ಕವಿಯು, "ತನ್ನ ಸತಿಯನ್ನು ಸಹ ಕೊಡುವಷ್ಟು ಉದಾರಿಯಾಗಿದ್ದ ಬಸವಣ್ಣ" ಎಂಬುದನ್ನು ಚಿತ್ರಿಸುವ ಪ್ರಯತ್ನ ಮಾಡಿರಬೇಕು. ತಾನು ಮಾಡುತ್ತಿರುವ ಈ ಉಪಕಾರದ ಕಾರ್ಯ ಬಸವಣ್ಣನ ಧೀಮಂತ ವ್ಯಕ್ತಿತ್ವಕ್ಕೆ ಮಂಕು ಮುಚ್ಚಿಸುವ ಅಪಚಾರವನ್ನೇ ಮಾಡೀತೆಂಬ ಅರಿವು ಹರಿಹರನಿಗಿರಲಿಲ್ಲ.

ಈ ಪ್ರಸಂಗವನ್ನು ಚಿತ್ರಿಸಲು ಹರಿಹರನು ಇರಿಸಿಕೊಂಡ ಉದ್ದೇಶವೇ ಬೇರೆಯಿದ್ದು, ಆವೇಶದ ಭರದಲ್ಲಿ ಅದು ಬೇರೆ ರೀತಿಯಲ್ಲೇ ಹೊರಹೊಮ್ಮಿರಬೇಕು ಎನಿಸುತ್ತದೆ.

1. ಪಟ್ಟಣದ ಪಣ್ಯಾಂಗನೆಯರೆಲ್ಲಂ ಕೂಡಿ ದಂಪತಿಗಳಾಗಿರೆ (ಸಾಲು ೧೨೮ ಬಸವರಾಜ ದೇವರ ರಗಳೆ ಹನ್ನೆರಡನೆಯ ಸ್ಥಲ).

2. ಊರೊಳಗೆ ಪಣ್ಯಾಂಗನೆಯರಿಲ್ಲದಿರ್ದಡೆನ್ನಂ (ಸಾಲು ೧೪೧ ಬಸವರಾಜ ದೇವರ ರಗಳೆ ಹನ್ನೆರಡನೆಯ ಸ್ಥಲ).

ಈ ಎರಡು ಸಾಲುಗಳು ಧ್ವನಿಸುವ ತತ್ತ್ವವೆಂದರೆ–ಊರೊಳಗೆ ಪಣ್ಯಾಂಗನೆಯರಿರಲಿಲ್ಲ, ಅವರೆಲ್ಲರು ದಂಪತಿಗಳಾಗಿದ್ದರು (!). 'ದಂಪತಿಗಳು' ಎಂಬ ಶಬ್ದ ಪ್ರಯೋಗವು ಪುರುಷ–ಸ್ತ್ರೀಯರ ಶಾಶ್ವತ ಸಂಬಂಧದ ಸೂಚನೆ ನೀಡುವುದರಿಂದ, ಬಹುಶಃ ವೇಶ್ಯೆಯರೆಲ್ಲ ವಿವಾಹಿತರಾಗಿ ದಂಪತಿಗಳಾಗಿದ್ದುದರಿಂದ ಕಲ್ಯಾಣ ನಗರದಲ್ಲಿ ವೇಶ್ಯಾವೃತ್ತಿಯೂ ಇಲ್ಲವಾಗಿತ್ತು ಎನ್ನಿಸುವುದು. "ಬಸವಣ್ಣನು ಧರ್ಮಪ್ರಚಾರದ ಮಾಧ್ಯಮದ ಮೂಲಕ ವೇಶ್ಯೆಯರ ಜೀವನದಲ್ಲಿ ಪರಿವರ್ತನೆ ತಂದಿದ್ದ; ಆದ್ದರಿಂದ ಹುಡುಕಿದರೂ ಸಹ ವೇಶ್ಯೆಯರು ಸಿಗಲಿಲ್ಲ" ಎಂಬ ತತ್ತ್ವವನ್ನು ಪ್ರತಿಪಾದಿಸಲೋಸುಗ ಹರಿಹರ ಕವಿಯು ಸುಖೀ ಜಂಗಮನ ಪ್ರಸಂಗವನ್ನು ತೆಗೆದುಕೊಂಡಿರಬೇಕು.

ಬಸವಣ್ಣನ ಸ್ವತಂತ್ರ ವಿಚಾರಧಾರೆ, ಪ್ರಗತಿಪರ ದೃಷ್ಟಿಕೋನವನ್ನು ಕಂಡು ಒಳಗೆ ಅಸಹನೆಯಿಂದ ಕುದಿಯುವ ಇನ್ನು ಕೆಲವರು, ಅವನ ಅಭಿಮಾನೀ ಅನುಯಾಯಿಗಳಾದ ಹರಿಹರನಂಥವರು ಬರೆದ ಪ್ರಸಂಗಗಳನ್ನು ಎತ್ತಿ ತೋರಿಸಿ ಅಪಹಾಸ್ಯ ಮಾಡುವದುಂಟು. ಅಷ್ಟೇ ಅಲ್ಲದೆ ಇದಕ್ಕೆ ಪುಷ್ಟಿ ನೀಡುವ ಬಸವಣ್ಣನ ಒಂದು ವಚನವನ್ನು ಉದಾಹರಿಸುವುದೂ ಉಂಟು; ಅದು ಹೀಗಿದೆ.

ಒಡಲು ಭಂಡಾರ........
ಎನ್ನ ಸತಿ ನೀಲಲೋಚನೆ ಸೃಷ್ಟಿಗಗ್ಗಳೆಯ ಚಲುವೆ
ಆಕೆಯನು ಸಂಗಮದೇವಾ, ನೀನು ಜಂಗಮರೂಪಾಗಿ ಬಂದು
ಎನ್ನ ಮುಂದೆ ಸಂಗವ ಮಾಡುತ್ತಿರಲು
ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನವೊಡೆಯ ನೀನೇ ಬಲ್ಲೆ!

(ಬ. ಷ. ಹೆ. ವ. ೧೮೯೪)

ಈ ಭಾಗವನ್ನಷ್ಟೇ ಖಂಡಖಂಡವಾಗಿ ನೋಡದೆ ಇಡೀ ವಚನವನ್ನು ನೋಡಿದರೆ ಇಲ್ಲಿ ಬಸವಣ್ಣನ ಛಲ ತತ್ತ್ವನಿಷ್ಠೆ ತಿಳಿಯುವವು. ವಚನವು ಬಹು ದೊಡ್ಡದಿರುವುದರಿಂದ ಭಾವಾರ್ಥವನ್ನು ಮಾತ್ರ ಕೊಟ್ಟುಬಿಡುವೆ.

ಆ ವಚನದ ಭಾವಾರ್ಥ ಹೀಗಿದೆ: ಸಾಮಾನ್ಯವಾಗಿ ದೇವರಲ್ಲಿ ಶ್ರದ್ಧೆ, ಸಮಾಜ ಸೇವೆಯಲ್ಲಿ ಆಸಕ್ತಿ, ದೀನದಲಿತರ ಉದ್ಧಾರದ ಕಳಕಳಿ; ಜಾತೀಯತಾ ನಿರ್ಮೂಲನಾ ಛಲ ಇಂತಹ ಕಾರ್ಯಗಳಲ್ಲಿ ಮನುಷ್ಯ ತೊಡಗಿದರೆ ಅವನಿಗೆ ಸಮಾಜ ಒಡ್ಡುವ ವಿಘ್ನಗಳು ನೂರಾರು. ಇದನ್ನರಿತ ಅಣ್ಣನವರು ಹೇಳುತ್ತಾರೆ: "ತತ್ತ್ವನಿಷ್ಠನಾಗಿ ಹೋರಾಡುವ ಪ್ರಸಂಗದಲ್ಲಿ ಆ ವ್ಯಕ್ತಿಯ ಆಸ್ತಿಯನ್ನೆಲ್ಲ ಕೊಳ್ಳೆ ಹೊಡೆ

ಯುವ, ಸೂರೆಮಾಡುವ ಪ್ರಸಂಗ ಉಂಟು; ಕೈ ಹಿಡಿದ ಧರ್ಮಪತ್ನಿಯನ್ನೇ ಸೆಳೆದೊಯ್ದು ಹಿಂಸಿಸುವ, ಮಾನಗೆಡಿಸುವ ಸಂಭವವುಂಟು; ಅಥವಾ ವ್ಯಕ್ತಿಯನ್ನು ತತ್ತ್ವಭ್ರಷ್ಟನನ್ನಾಗಿ ಮಾಡಲು, ಮನಸ್ಸನ್ನು ಪರಿವರ್ತಿಸಲು ಅವನ ಮಕ್ಕಳನ್ನೇ ಕಣ್ಣೆದುರಿಗೆ ಕಡಿಯುವ ಸಾಧ್ಯತೆಯುಂಟು. ಇಷ್ಟಕ್ಕೂ ಬೆದರದೆ ಇರುವಾಗ ಆ ವ್ಯಕ್ತಿಯನ್ನೇ ಹೊಡೆದು, ಶೂಲಕ್ಕೆ ಏರಿಸುವುದುಂಟು. ಹೀಗೆ ನಾನಾ ವಿಧದ ಎಡರುಗಳು ಇದಿರಾಗುವುವು.

ಎಂತೆಂತಹ ತತ್ತ್ವನಿಷ್ಠರೂ ತಮ್ಮ ಆಸ್ತಿ ಕೈಬಿಟ್ಟೀತಲ್ಲಾ ಎಂಬ ಭಯಕ್ಕಾಗಿ ಹಣದಾಸೆಯಿಂದ ಆದರ್ಶವನ್ನೇ ಬಲಿಕೊಡುವರು. ಆಸ್ತಿಯನ್ನು ತೊರೆಯುವುದರಲ್ಲಿ ಗಟ್ಟಿಗನಾದವನೂ ಸಹ ತನ್ನ ಹೆಂಡತಿಯ ಹಿಂಸೆಯನ್ನು, ಮಾನಾಪಹರಣವನ್ನೂ ಸಹಿಸದೆ 'ಈ ತತ್ತ್ವದ ಮೇಲಿನ ಪ್ರೀತಿ ಹಾಳಾಗಲೀ; ಇದರಿಂದಲೇ ನನಗೆ ಇಷ್ಟೆಲ್ಲ ಹಿಂಸೆ ಬಂದುದು' ಎಂದು ಆದರ್ಶವನ್ನು ಗಾಳಿಗೆ ತೂರುವ ಸಾಧ್ಯತೆಯುಂಟು. ಹಣ ಹೋಗಲಿ, ಹೆಂಡತಿ ಹೋಗಲಿ ಹೇಗೊ ಸಹಿಸಿಯಾನು; ಮನುಷ್ಯನ ಹೃದಯವು ಮಿಡಿದು ಕರಗುವುದು ತನ್ನ ಮಕ್ಕಳಿಗೆ ಹಿಂಸೆಯಾದಾಗ. ಅಂಥ ಹಸುಗೂಸುಗಳನ್ನು ಕಣ್ಣೆದುರಿಗೇ ಕಡಿಯುತ್ತಿದ್ದರೆ ಯಾವ ತಂದೆಯಾದರೂ ಓಡಿ ಹೋಗಿ, 'ನನ್ನ ಮಗುವನ್ನು ಬಿಡಿ. ನೀವು ಹೇಳಿದಂತೆ ಕೇಳುವೆ. ಹೇಗೋ ನನ್ನ ಹೆಂಡತಿ ಮಕ್ಕಳೊಡನೆ ಬದುಕುವೆ' ಎಂದು ಅಂಗಲಾಚುವುದುಂಟು. ಆದರೆ ಬಸವಣ್ಣನು ಆಗಲೂ ಸೋಲನು.

ಆಗ ವಿರೋಧಿಗಳು ನೇರವಾಗಿ ಅವನಿಗೇ ಹಿಂಸೆ ಕೊಡತೊಡಗುವರು. ಆಗಲಂತೂ ಎಂತಹ ಎಂಟೆದೆಯವನೂ ತನ್ನ ಜೀವ ರಕ್ಷಣೆಗಾಗಿ ಸುಲಭವಾಗಿ ತತ್ತ್ವ ಬಿಡಲು ಸಿದ್ಧನಾಗುವನು. ಆದರೆ ಬಸವಣ್ಣನು ಆ ಪ್ರಸಂಗದಲ್ಲಿಯೂ ಮಣಿಯನು. ಈ ಎಲ್ಲ ರೀತಿಯಲ್ಲಿ ಸಂಗಮನಾಥನು ಭಂಗಪಡಿಸಿ ನೋಡಿದರೆಯೂ ಅವನು ಕನಸು–ಮನಸಿನಲ್ಲಿಯೂ ತಾನು ಹಿಡಿದುದು ಅವಿವೇಕದ ಆದರ್ಶವಾಯಿತಲ್ಲಾ ಎಂದು ವಿಷಾದಿಸನು; ದೇವರಲ್ಲಿ ಶ್ರದ್ಧೆ ಕಳೆದುಕೊಳ್ಳನು. ಲಿಂಗಾರ್ಚನೆಯನ್ನು ಮಾಡುವುದನ್ನು ಬಿಡನು, ಜಂಗಮ ದಾಸೋಹ (ಸಮಾಜ ಸೇವೆ) ಮಾಡುವುದು ತೊರೆಯನು. ಎಲ್ಲರಿಗೂ ದೀಕ್ಷೆ ನೀಡಿ, ಅವರು ಪೂರ್ವಾಶ್ರಮದಲ್ಲಿ ಯಾವ ಜಾತಿಯವರಿದ್ದರೇನು ದೀಕ್ಷಾನಂತರದಲ್ಲಿ ಅವರ ಪಾದೋದಕ–ಪ್ರಸಾದವನ್ನು ಕೊಳ್ಳದೆ ಇರನು..."

ಎಂಥ ಕೆಚ್ಚು ಬಸವಣ್ಣನಲ್ಲಿ! ಈ ವಚನದಲ್ಲಿ ತನ್ನ ಸತಿಯ ಪ್ರಸ್ತಾಪವಿದೆ. ಆದರೆ ಇಲ್ಲಿ ತಾನಾಗಿ 'ಜಂಗಮನಿಗೆ' ಒಪ್ಪಿಸುವ ಕೃತಿಯಿಲ್ಲ; ಅನಿವಾರ್ಯವಾಗಿ ಅಂಥದೊಂದು "ಪ್ರಸಂಗ ಬಂದರೆ ಹೆಂಡತಿ–ಮಕ್ಕಳ ಆಸ್ತಿ ಪಾಸ್ತಿಯ ಹಿತಚಿಂತನೆ

ಯನ್ನಾದರೂ ಮರೆತೇನು ; ತನ್ನ ಪ್ರಗತಿಪರ ಆದರ್ಶಗಳನ್ನು ಗಾಳಿಗೆ ತೂರೆನು" ಎಂಬ ನಿರ್ಧಾರವಿದೆ.

ವೇಶ್ಯಾವೃತ್ತಿಯನ್ನು ನಿರ್ಮೂಲನ ಮಾಡಿದ ಬಸವಣ್ಣ ವೇಶ್ಯಾವೃತ್ತಿಯನ್ನು ಪ್ರಚೋದಿಸಿಯಾನೆಂಬುದು ಅವಿವೇಕ ರಮಣೀಯ ವಿಚಾರ. (ಹೆಚ್ಚಿನ ವಿವರ ಬೇಕಾದಲ್ಲಿ "ಪತಿತೋದ್ಧಾರಕ ಬಸವಣ್ಣ" ನೋಡಿರಿ.)

ಗಣಾರಾಧನೆಯ ಪ್ರಸಂಗ

ಹರಿಹರನು ಆವೇಶಭರಿತನಾಗಿ ಚಿತ್ರಿಸುವ ಇನ್ನೊಂದು–ಗಣಪರ್ವದ ಪ್ರಸಂಗ. ಬಸವಣ್ಣನು ಜಂಗಮರನ್ನು (ನಿರುದ್ಯೋಗಿಗಳನ್ನು !) ಒತ್ತೆಡೆ ಸೇರಿಸಿ ಬಗೆಬಗೆಯ ಭೋಜನ ಪರಿಕರಗಳನ್ನು ಎಡೆಮಾಡಿಸುವುದನ್ನು ಕಂಡಾಗ ಹರಿಹರನ ಭೋಜನ ಪ್ರಾವೀಣ್ಯತೆಯ ಕಲ್ಪನೆ ನಮಗಾಗದಿರದು. ಬಗೆಬಗೆಯ ಓಗರ, ಗಾರಿಗೆ, ಹೂರಿಗೆ, ಲಡ್ಡು, ಹಾಲುಂಡೆ, ಹಾಲೋಗರ, ಸೇವಿಗೆ, ಮೇಲೋಗರ ಇತ್ಯಾದಿ ಇತ್ಯಾದಿಗಳನ್ನು ಎಡೆಮಾಡಿಸಿ, ಜೊತೆಗೆ ಅವರ ಪಾದಪೂಜೆಗಳನ್ನೂ ಮಾಡಿಸುವುದನ್ನು ನೋಡಿದರೆ, "ಬಸವಣ್ಣನಿಗೆ ಬೇರೆ ಕೆಲಸವೇ ಇರಲಿಕ್ಕಿಲ್ಲ ; ಇಂಥ ನಿರುದ್ಯೋಗಿ ಹೊಟ್ಟೆಬಾಕರಿಗೆ ಕುಳಿತುಂಬುವವರಿಗೆ ಸುಗ್ರಾಸವಾಗಿ ಉಣ್ಣಿಸಲು ರಾಜ್ಯದ ಭಂಡಾರವನ್ನು ಬಳಸಿರುವುದೇನೂ ಅಸಂಭವನೀಯವಲ್ಲ. ಇಂಥ ಅವಿವೇಕಯುಕ್ತ ದಾಸೋಹವನ್ನು ಮಾಡಿ ಸೋಮಾರಿಗಳ ತಂಡವನ್ನು ಬೆಳೆಸಿದುದು ಅಪಚಾರವಲ್ಲವೆ ? ಒಂದು ಕಡೆ 'ಕಾಯಕವೇ ಕೈಲಾಸ ; ದುಡಿಯದೆ ಉಣ್ಣತಕ್ಕದ್ದಲ್ಲ, ಗುರುವಾದರೂ ಲಿಂಗವಾದರೂ ಜಂಗಮವಾದರೂ ಕಾಯಕದಿಂದ ಮುಕ್ತಿ ಎನ್ನುವುದು. ಇನ್ನೊಂದು ಕಡೆ ಪರಾವಲಂಬಿಗಳು,ಸೋಮಾರಿಗಳು, ಆಸೆಬುರುಕರು, ಹೊಟ್ಟೆಬಾಕರು ಆದವರಿಗೆ ತುಂಬುವುದು ಎಂಥ ವಿಪರ್ಯಾಸ!" ಎಂಬ ಸಂದೇಹವು ವಿಚಾರವಂತರಲ್ಲಿ ಏಳದಿರದು.

ಬಸವಣ್ಣನ ಪ್ರಗತಿಪರ ದೃಷ್ಟಿಕೋನದ ಹಿನ್ನೆಲೆಯಲ್ಲಿ, ಕವಿಗಳ ಕಾಲ್ಪನಿಕ ಚಿತ್ರಣದ, ಆವೇಶ–ಅತಿರೇಕದ ಪರದೆಯನ್ನು ಛೇದಿಸಿ ವಿಮರ್ಶಾತ್ಮಕವಾಗಿ ಚಿಂತಿಸಿದರೆ ತೋರುವುದಿಷ್ಟು :

1. ಪಾದೋದಕ ಪ್ರಸಾದವನ್ನು ಸ್ವೀಕರಿಸಬೇಕೆಂಬ ತತ್ತ್ವದಲ್ಲಿ ಇಂದು ನಂಬಿಗೆ ಹೋಗಿರಬಹುದು. ಈಗ ಅದು ತನ್ನೆಲ್ಲ ಅರ್ಥವನ್ನು ಕಳೆದುಕೊಂಡಿರಬಹುದು. ಆದರೆ ಅಂದಿನ ಸಂದರ್ಭದಲ್ಲಿ ಆಚರಣೆ ಮಹಾಕ್ರಾಂತಿಕಾರಕವಿತ್ತು. ಬಸವಣ್ಣನ ಧರ್ಮಮಂದಿರದೊಳಕ್ಕೆ ಪರಿವರ್ತಿತರಾಗಿ ಬಂದವರಲ್ಲಿ ಹಾರುವ ಮೊದಲು ಅಂತ್ಯಜ ಕಡೆಯಾಗಿ ನೂರಾರು ಜಾತಿ ಮತ ಪಂಗಡಗಳವರು ಸಮಾವೇಶಗೊಂಡಿದ್ದರು. ಆಗ ಮೇಲುಜಾತಿಯಿಂದ ಬಂದವರು ತಾವೆಂಬ ಅಹಂ ಕೆಲವರಿಗಿದ್ದು,

ಕೀಳುಜಾತಿಯಿಂದ ಪರಿವರ್ತಿತರಾದವರನ್ನು ತಿರಸ್ಕಾರಮಯ ಕೀಳು ದೃಷ್ಟಿಯಿಂದ ನೋಡುವ ಸಾಧ್ಯತೆಯಿತ್ತು. ಈ ಭಾವನೆ ತೊಲಗಿ, ಸಮತಾಭಾವವಳವಟ್ಟು, 'ಗುರು ಮುಟ್ಟಿ ಗುರು'ವಾಗುವ ತತ್ತ್ವದಲ್ಲಿ ನಂಬಿಗೆ ತಾಳಬೇಕಾದರೆ ಅವನ ಪಾದೋದಕ–ಪ್ರಸಾದವನ್ನು ಸ್ವೀಕರಿಸುವುದರಿಂದ ಮಾತ್ರ. ಅದು ಬಸವಣ್ಣನ ಈ ವಚನದಲ್ಲಿ ಸ್ಪಷ್ಟವಾಗಿದೆ.

ದಾಸೀಪುತ್ರನಾಗಲೀ ವೇಶ್ಯಾಪುತ್ರನಾಗಲೀ
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ
ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ
ಹೀಂಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ನರಕ ತಪ್ಪದು ಕಾಣಾ ಕೂಡಲ ಸಂಗಮದೇವಾ

"ಜಂಗಮ"ರೆಂದರೆ ಒಂದು ವಿಶಿಷ್ಟ ಜಾತಿಯವರೆಂದು ಅವರಲ್ಲಿ ಅರ್ಹತೆ ಇರಲಿ–ಬಿಡಲಿ ಅವರ ಪಾದೋದಕ–ಪ್ರಸಾದವನ್ನು ಸ್ವೀಕರಿಸಬೇಕು ಎಂಬ ಅರ್ಥ ಇಲ್ಲಿಲ್ಲ. ಬದಲಾಗಿ ದಾಸೀಪುತ್ರರಾದರೇನು ವೇಶ್ಯಾಪುತ್ರರಾದರೇನು ಶಿವದೀಕ್ಷೆ ಪಡೆದವರೆಲ್ಲರು ಜಂಗಮರು, ಬಳಕೆಗೆ ಯೋಗ್ಯರು, ಪಾದೋದಕ-ಪ್ರಸಾದ ನೀಡಲು ಸಮರ್ಥರು ಎಂಬ ಸಮತಾಭಾವನೆ ಇದೆ.

ಬಸವಣ್ಣನವರು ಸಹಸ್ರಾರು ಮಂದಿ ಜಂಗಮರಿಗೆ ಉಣ್ಣಿಸುತ್ತಿದ್ದರೆಂಬುದನ್ನು ಮನೋಹರವಾಗಿ ಬಾಯಲ್ಲಿ ನೀರೂರಿಸುವಂತೆ ಹರಿಹರನು ಬಣ್ಣಿಸಿದ್ದಾನೆ. ಈ ಜಂಗಮರು ದುಡಿಯಲಾರದ ಸೋಮಾರಿಗಳಾಗಲಿ, ನಿರುದ್ಯೋಗಿಗಳಾಗಲೀ, ವಿಶಿಷ್ಟ ಜಾತಿಯವರೋ ಆಗಿರದೆ ಹೊಸ ಅನುಯಾಯಿಗಳು (New converts) ಆಗಿದ್ದರು. ಇವರುಗಳಲ್ಲಿ ಜಾತಿಭಾವನೆಯಳಿದು ಸಾಮರಸ್ಯ-ಏಕೋಭಾವ ಮಾಡಬೇಕಾಗಿದ್ದರೆ ಅಂತರ್ಭೋಜನ (Inter dining) ದಿಂದ ಮಾತ್ರ. ಆದ್ದರಿಂದ ಈ ದೂರಾಲೋಚನೆಯನ್ನಿರಿಸಿಕೊಂಡೇ ಅಣ್ಣನವರು ಸಾಮೂಹಿಕ (Community dinner) ಸಹಪಂಕ್ತಿ ಭೋಜನವನ್ನು ಆಗಾಗ ಏರ್ಪಡಿಸುತ್ತಿದ್ದುದು.

ಉಪಸಂಹಾರ : ಕ್ರಾಂತಿಕಾರಿ ಮನೋಭಾವದ ಹಾಗೂ ತೀಕ್ಷ್ಣ ವಿಚಾರವಾದಿಯಾಗಿದ್ದ ಬಸವಣ್ಣನ ನಿಜವಾದ ವ್ಯಕ್ತಿತ್ವವನ್ನು ಅನೇಕ ಕವಿಗಳು ಅರ್ಥ ಮಾಡಿಕೊಳ್ಳದೆ ಅವನ ಉಜ್ವಲ ವ್ಯಕ್ತಿತ್ವ–ತತ್ತ್ವಗಳನ್ನು ಭಾವುಕ ವರ್ಣನೆಯ ಹೊದ್ದಿಕೆಯಲ್ಲಿ ಮುಂಕು ಮಾಡಿರುವರು. ಪುರಾತನ ಕವಿಗಳ–ಕಾವ್ಯಗಳ ಆವೇಶ ಪೂರ್ಣ ವರ್ಣನೆ, ಅತಿರೇಕದ ವ್ಯಕ್ತಿ-ನಿಷ್ಠೆಗಳ ತೆರೆಯನ್ನನುರಿಸಿ ಬಸವಣ್ಣನ ಕ್ರಾಂತಿಯ ನಿಜ ಸ್ವರೂಪವನ್ನು ಜನತೆಯ ಮುಂದೆ ತೆರೆದಿರಿಸುವುದು ಇಂದಿನ ವಿಚಾರವಂತರ ಕರ್ತವ್ಯವಾಗಿದೆ.

★

ಗೀತಾಮೃತ

ಸಂಜಯ ಉವಾಚ :

ದೃಷ್ಟ್ವಾತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್ ॥೨॥

ತಾತ್ಪರ್ಯ : ಆ ಸಮಯದಲ್ಲಿ ರಾಜನಾದ ದುರ್ಯೋಧನನು ವ್ಯೂಹಾಕಾರವಾಗಿ ರಚಿಸಲ್ಪಟ್ಟ ಪಾಂಡವರ ಸೈನ್ಯವನ್ನು ನೋಡಿ ದ್ರೋಣಾಚಾರ್ಯರ ಸಮೀಪಕ್ಕೆ ಬಂದು ಈ ಮಾತನ್ನು ಹೇಳಿದನು.

ಪ್ರಶ್ನೆ : ಸಂಜಯನೆಂದರೆ ಯಾರು ? ಎಂಬ ವಿಷಯವು ಹಿಂದೆ ಸೂಕ್ಷ್ಮವಾಗಿ ಹೇಳಲ್ಪಟ್ಟಿದೆ. ಮತ್ತಷ್ಟು ವಿಸ್ತಾರವಾಗಿ ಹೇಳುವುದು ಉತ್ತಮ. ಏಕೆಂದರೆ ಸಂಜಯನೆಂಬುದೂ ಸಹ ಲಾಕ್ಷಣಿಕವಾದ ಹೆಸರೇ. ಅದೂ ಸಹ ಲಕ್ಷಣದ ಮೇಲಿಂದ ಬಂದದ್ದೇ. ಮಹಾಭಾರತ ಯುದ್ಧ ಕಾಲದಲ್ಲಿ ಸಂಜಯನು ಒಬ್ಬನೇ ಇದ್ದರೆ ಈಗ ಅನೇಕರಿದ್ದಾರೆ. ಸ್ತ್ರೀಯರಲ್ಲಿಯೂ ಸಹ ಸಂಜಯ ಸ್ವಭಾವದವರನ್ನು ನೋಡಬಹುದು. ಆದುದರಿಂದ ಸಂಜಯನೆಂದರೆ ಯಾರೆಂಬುದನ್ನು ಮತ್ತೊಂದು ಸಾರಿ ನೋಡೋಣ.

ಭಗವದ್ಗೀತಾ ಶ್ರೀ ಕೃಷ್ಣಾರ್ಜುನ ಸಂವಾದ. ಭಗವದ್ಗೀತೆಯನ್ನು ಹಿಡಿದು ಮಹಾಭಾರತದ ಯುದ್ಧವೆಲ್ಲವೂ ಸಂಜಯ ಧೃತರಾಷ್ಟ್ರರ ಸಂವಾದ. ಶ್ರೀ ವ್ಯಾಸ ಭಗವಂತನ ಕೃಪಾ ಪ್ರಸಾದದಿಂದ ದಿವ್ಯದೃಷ್ಟಿಯನ್ನೂ, ದಿವ್ಯ ಶ್ರವಣವನ್ನೂ ಸಂಪಾದಿಸಿದ ಸಂಜಯನು, ಯುದ್ಧದಲ್ಲಿ ನಡೆದ ಗೂಢ ವೃತ್ತಾಂತವನ್ನೂ ಸಹ ಸ್ವಲ್ಪವೂ ಬಿಡದೆ ಧೃತರಾಷ್ಟ್ರ ಮಹಾರಾಜನಿಗೆ ತಿಳಿಸುತ್ತಿದ್ದನು. ಸಂಜಯನು ನಿಮ್ನಕುಲ ಸಂಜಾತನಾಗಿದ್ದರೂ, ತನ್ನ ಶೀಲಗುಣ, ಯೋಗ್ಯತೆಗಳಿಂದ ಗೌರವಸ್ಥಾನವನ್ನು ಪಡೆದುಕೊಂಡಿದ್ದನು. "ಒರೆಯನ್ನು ನೋಡಬೇಡ, ಕತ್ತಿಯನ್ನು ನೋಡು," "ಕುಲವನ್ನು ನೋಡಬೇಡ, ಗುಣವನ್ನು ನೋಡು'' ಎಂದು ಕಬೀರದಾಸರು ಹೇಳಿದ ಹಿತಬೋಧವು ಇಂತಹವರಲ್ಲಿ ಸಾರ್ಥಕವಾಗುತ್ತದೆ.

ಸಂಜಯನೆಂಬ ಪದದಲ್ಲಿಯೇ ಒಂದು ಲಾಕ್ಷಣಿಕ ಅರ್ಥವು ಕಂಡುಬರುತ್ತದೆ. ಸಂಜಯನೆಂಬ ಒಬ್ಬ ವ್ಯಕ್ತಿ ಎಂದು ಅಷ್ಟರಮಟ್ಟಿಗೇ ತೃಪ್ತರಾಗಬಾರದು, ಅಷ್ಟರಮಟ್ಟಿಗೆ ತೃಪ್ತರಾದರೆ ಯಾವ ಲಾಭವೂ ಕಂಡುಬರುವುದಿಲ್ಲ. ಐದುಸಾವಿರ ವರ್ಷಗಳ ಕೆಳಗೆ ಸಂಜಯನೆಂಬುವನೊಬ್ಬನು ಇದ್ದನೆಂದು ತಿಳಿದುಕೊಂಡ ಮಾತ್ರಕ್ಕೆ ನಮಗಾಗುವ ಉಪಯೋಗವೇನು ? ಹೀಗೆ ಹೇಳುವುದರಿಂದ ಭಾರತ ಇತಿಹಾಸವೆಲ್ಲವೂ

ಕಲ್ಪಿತವೆಂದು ಭಾವಿಸಬಾರದು. ಐತಿಹಾಸಿಕರ ದೃಷ್ಟಿಯು ಸತ್ಯವಾದುದೇ ; ಅದು ಅವರ ಪಾಲಿಗೇ ಇರಲಿ. ಅವರು ಆ ವಿಚಾರದಿಂದ ಪಡೆಯುವ ಲಾಭವೂ ಸಹ ಸತ್ಯವೇ. ಆ ಮಧುರವಾದ ಭೂತಕಾಲದ ಚರಿತ್ರೆಯಿಂದ ಈ ಕಾಲದಲ್ಲಿರುವ ನಾವು ಹೊಂದುವ ಲಾಭವೇನು ? ವ್ಯಾಸ ಮಹರ್ಷಿಯ ರಚನೆಗಳು ಕೇವಲ ಒಂದು ಕಾಲಕ್ಕೆ ಮಾತ್ರ ಸಂಬಂಧಪಟ್ಟವುಗಳಲ್ಲ. ಸರ್ವಕಾಲಗಳಿಗೂ ಅಗತ್ಯವಾದ ಸರ್ವಸಾಮಗ್ರಿಗಳೂ ಅವರ ರಚನೆಯಲ್ಲಿರುತ್ತವೆ. ಕಥೆಯೊಂದಿಗೆ ತತ್ವವನ್ನೂ, ಇತಿಹಾಸ ಸಾಮಗ್ರಿಯೊಂದಿಗೆ ಆಧ್ಯಾತ್ಮ ವಸ್ತುವನ್ನೂ ಜೋಡಿಸುವ ಕೌಶಲ್ಯವು ಅವರ ಲೇಖನಿಯಲ್ಲಿದೆ. ಋಷಿವಾಣಿಯಲ್ಲಿ ತೋರುವ ಶ್ರೇಷ್ಠತೆಯೇ ಇದು.

"ಸಮ್ಯಕ್-ಜಯಃ, ಯಸ್ಯ-ಸಹ, ಸಂಜಯಃ-ಇಂದ್ರಿಯಗಳನ್ನು ಸರಿಯಾಗಿ ಜಯಿಸಿ, ಗುರುದೇವನ ಅನುಗ್ರಹದಿಂದ ಜ್ಞಾನ ದೃಷ್ಟಿಯನ್ನು ಸಂಪಾದಿಸಿದವನು ಸಂಜಯ. ಸಂಜಯ ಎಂಬುದಕ್ಕೆ ಇದೇ ಲಾಕ್ಷಣಿಕ ಅರ್ಥ. ಇದು ಅಂತರಾರ್ಥ. ಇಂದ್ರಿಯಗಳನ್ನು ನಿಗ್ರಹಿಸಲಾರದವನು ಜ್ಞಾನದೃಷ್ಟಿಯನ್ನು ಪಡೆಯಲಾರನು. ಭಾರತೀಯ ಸಂಸ್ಕೃತಿಯಲ್ಲಿ "ಇಂದ್ರಜಿತ್ತು"ಗಿಂತಲೂ "ಇಂದ್ರಿಯಜಿತ್ತು" ದೊಡ್ಡವನು. ಇಂದ್ರನನ್ನು ಗೆಲ್ಲುವುದೇನೂ ಅಷ್ಟು ಮಹತ್ತರವಲ್ಲ. ಇಂದ್ರಿಯಗಳನ್ನು ಗೆಲ್ಲುವುದೇ ಮಹತ್ವ.

ರಾಮಾಯಣ ಕಥೆಯಲ್ಲಿ ಇಂದ್ರನನ್ನು ಗೆದ್ದ 'ಮೇಘನಾದ'ನನ್ನು ಇಂದ್ರಿಯಗಳನ್ನು ಗೆದ್ದ 'ಲಕ್ಷ್ಮಣ'ನು ಜಯಿಸಿದನು. ಲಕ್ಷ್ಮಣನೂ ಜಿತೇಂದ್ರಿಯನು. ಹಾಗಾದರೆ ರಾಮನ ವಿಷಯವೇನು ? ರಾಮನನ್ನು ಜಿತೇಂದ್ರಿಯನೆಂದರೆ ಅವನ 'ದೈವತ್ವ'ಕ್ಕೆ ಕುಂದಕ. ರಾಮನು 'ನಿರೀಂದ್ರಿಯ'ನು, ಇಂದ್ರಿಯಾತೀತನು. ರಾಮನು ನಿರ್ವಿಕಾರನೂ ನಿರಾಮಯನೂ ಎಂಬ ಮಾತು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಲಕ್ಷ್ಮಣನ ಭಾವವನ್ನು ಪಡೆದುಕೊಂಡ ಮೇಲೆ ರಾಮಭಾವವನ್ನು ಪಡೆದುಕೊಳ್ಳಬಹುದು. ಜಿತೇಂದ್ರಿಯನಾದ ಮೇಲೆಯೇ ಜ್ಞಾನಸ್ಥಿತಿ ಉಂಟಾಗುವುದು. ಇಂತಹ ಸಂಜಯ ಭಾವವುಳ್ಳವರೇ ಧೃತರಾಷ್ಟ್ರನಂತಹ ಅವಿದ್ಯಾಗ್ರಸ್ತ ಮನುಷ್ಯರಿಗೆ ಜ್ಞಾನ ಭೋಧೆ ಮಾಡಲು ಅಧಿಕಾರವುಳ್ಳವರು.

ಸಂಜಯನು ವ್ಯಾಸಭಗವಂತನ ಅನುಗ್ರಹದಿಂದ ಪಡೆದ ಜ್ಞಾನನೇತ್ರದ ಬಲದಿಂದ ದೂರದಲ್ಲಿರುವ ಮನುಷ್ಯರನ್ನೂ, ಪದಾರ್ಥಗಳನ್ನೂ ನೋಡುವುದಷ್ಟೇ ಅಲ್ಲದೆ ದೂರದಲ್ಲಿರುವ ಮನುಷ್ಯರ ಹೃದಯದಲ್ಲಿರುವ ಭಾವತರಂಗಗಳನ್ನೂ ಸಹ ತಿಳಿದುಕೊಳ್ಳಬಲ್ಲವನಾಗಿದ್ದನು.

ಈಗ ದುರ್ಯೋಧನನ ಹೃದಯದಲ್ಲಿರುವ ಭಾವತರಂಗವನ್ನು ಧೃತರಾಷ್ಟ್ರನಿಗೆ ವಿವರಿಸುತ್ತಾನೆ.

ಇಲ್ಲಿ ನಾವು ಗಮನಿಸಬೇಕಾದ ಒಂದು ವಿಷಯವಿದೆ. ಟ್ಯಾಂಕಿನಲ್ಲಿರುವ ನೀರು ಕೆಟ್ಟು ಹೋದರೆ ಆ ಕೆಟ್ಟ ನೀರೇ ಕೊಳಾಯಿಯಲ್ಲಿ ಬರುತ್ತದೆ. ಅಂತೆಯೇ ನಾಯಕನ ಕೆಡುಕುತನವು ಅನುಯಾಯಿಗಳಿಗೂ ಸಹ ಸಾಂಕ್ರಮಿಸುವುದೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ರೋಗಗಳು ಸಾಂಕ್ರಾಮಿಕವಾದಂತೆ, ಗುಣಗಳೂ ಸಾಂಕ್ರಾಮಿಕವೇ. ದುಷ್ಟಗುಣದಿಂದ ತಾನೊಬ್ಬನೇ ಮಾತ್ರ ಕೆಟ್ಟುಹೋಗುತ್ತಾನೆಂದಲ್ಲ ; ಆ ರೋಗವು ಸಂಬಂಧಿಕರನ್ನೂ ಸಹ ಭ್ರಷ್ಟ ಮಾಡುತ್ತದೆ. 'ಕುಟುಂಬಕ್ಕೆ ದೊಡ್ಡವನೂ' 'ಸಂಘಕ್ಕೆ ಮುಖ್ಯಸ್ಥನೂ' ಆದವನು ವಕ್ರಗಾಮಿಯಾದರೆ, ಕುಟುಂಬಕ್ಕೂ ಸಂಘಕ್ಕೂ ದುರ್ಗತಿಯೇ. ಧೃತರಾಷ್ಟ್ರನ ಕುಟುಂಬವು ಇದಕ್ಕೆ ಸ್ಪಷ್ಟ ನಿದರ್ಶನ. ತಂದೆ ಹುಟ್ಟು ಕುರುಡ. ಕಣ್ಣಿದ್ದರೂ, ತಾನೇ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿಕೊಂಡ ಕುರುಡು ತಾಯಿ. ಇವರಿಬ್ಬರಿಂದ ಹುಟ್ಟಿದ ಸಂತಾನವು "ದು" ಸಂತಾನ. ಜ್ಞಾನಾಂಧರು. ಧೃತರಾಷ್ಟ್ರನ ಕುಟುಂಬವು ಒಂದು ದೊಡ್ಡ ಅಂಧ ಪರಂಪರೆ.

"ಯದ್ಯದಾಚರತಿ ಶ್ರೇಷ್ಠ, ಸ್ತತ್ತದೇವೇ ತರೋಜನಃ".

ಪ್ರಥಮ ಶ್ಲೋಕದಲ್ಲಿ ಧೃತರಾಷ್ಟ್ರನ ಅಂಧ ವ್ಯವಹಾರವನ್ನು ಕುರಿತು ವಿವರಿಸಿದ್ದಾಗಿದೆ. ಈ ಎರಡನೇ ಶ್ಲೋಕದಲ್ಲಿ ಸಂಜಯನು ಧೃತರಾಷ್ಟ್ರನನ್ನು ಕುರಿತು, "ಆ ಸಮಯದಲ್ಲಿ ರಾಜನಾದ ದುರ್ಯೋಧನನು ವ್ಯೂಹಾಕಾರವಾದ ಪಾಂಡವ ಸೈನ್ಯವನ್ನು ನೋಡಿ, ದ್ರೋಣಾಚಾರ್ಯನ ಸಮೀಪಕ್ಕೆ ಸೇರಿ ಈ ವಿಧವಾಗಿ ಹೇಳಿದನು" ಎಂದು ಹೇಳಿದೆ.

ಈ ಶ್ಲೋಕದಲ್ಲಿ ದುರ್ಯೋಧನನ ಅವಿವೇಕವು ಪ್ರದರ್ಶಿತವಾಗಿದೆ. ವ್ಯೂಹಾಕಾರವಾಗಿ, ನಿಯಮಬದ್ಧವಾಗಿ, ಕ್ರಮ ಶಿಕ್ಷಣದಿಂದ ಇರುವ ಪಾಂಡವ ಸೇನೆಯನ್ನು ನೋಡಿ, ರಾಜರೆಲ್ಲರಿಗೂ ರಾಜನಾದ ದುರ್ಯೋಧನನು ಹೆದರಿಬಿಟ್ಟನು. ಆದುದರಿಂದಲೇ ಸೇನೆಯನ್ನು ನೋಡಬೇಕಾದರೆ, ದ್ರೋಣಾಚಾರ್ಯನ ಪಕ್ಕದಲ್ಲಿ ನಿಂತು ನೋಡಬೇಕಾಯಿತು. ಪಾಪಾತ್ಮನ ಹೃದಯವು ಯಾವಾಗಲೂ ಭಯಗ್ರಸ್ತವಾಗಿಯೇ ಇರುತ್ತದೆ. ಪುಣ್ಯವಂತರನ್ನು, ಧಾರ್ಮಿಕ ವ್ಯಕ್ತಿಗಳನ್ನೂ ನೋಡಿದಾಗ ಅವರ ಭಯವು ಮತ್ತಷ್ಟು ಉಲ್ಬಣವಾಗುತ್ತದೆ. ದೈವೀ ಸಂಪತ್ತಿಗೆ. "ಅಭಯ"ವು ಪ್ರಧಾನ ಸ್ಥಾನದಲ್ಲಿರುವಂತೆ, ಅಸುರೀ ಸಂಪತ್ತಿಗೆ "ಭಯ"ವು ಪ್ರಧಾನ ಸ್ಥಾನವಾಗಿರುತ್ತದೆ.

ದುರ್ಯೋಧನನಲ್ಲಿ ಮತ್ತೊಂದು ಅನುಚಿತ ವ್ಯವಹಾರವು ಕಂಡುಬರುತ್ತದೆ. 'ಶಿಷ್ಟ' ಸಂಪ್ರದಾಯವನ್ನು ತಿಳಿದ ಆರ್ಯಮಾನವನು, ಗುರುಗಳನ್ನು ಸಮೀಪಿಸುತ್ತಲೇ ಅಭಿವಾದವನ್ನು ಅಂದರೆ ನಮಸ್ಕಾರವನ್ನು ಮಾಡಬೇಕು. ಆ ಮೇಲೆ ಮಾತನಾಡಬೇಕು. ಈ ಮರ್ಯಾದೆಯನ್ನು ದುರ್ಯೋಧನನು ಪಾಲಿಸಲಿಲ್ಲ. ಆಚಾರ್ಯರ ಸಮೀಪವನ್ನು ಸೇರುತ್ತಲೇ 'ಹುಕುಂ' ಅನ್ನು ನಡೆಯಿಸಲು ಪ್ರಾರಂಭಿಸಿದನು. ಕುರುಡನ ಮಗನೆಂಬುದನ್ನು ಅಕ್ಷರಶಃ ಪಾಲಿಸಿದನು.

ಹಾಗಲ್ಲ, ತಾನು ರಾಜನಲ್ಲವೇ ? ತನ್ನ ರಾಜ ಮರ್ಯಾದೆಯನ್ನನುಸರಿಸಿ ತನ್ನ ಸೇನಾಧಿಪತಿಗೆ ನಮಸ್ಕಾರ ಮಾಡುವ ಅಗತ್ಯವಿಲ್ಲವೆಂದು ಹೇಳಬಹುದು. ಒಂದು ಪಕ್ಷದಲ್ಲಿ ನೋಡಿದರೆ ಇದು ಸರಿಯೆ. ತಾನು ರಾಜನೆಂತಲೂ, ದ್ರೋಣಾಚಾರ್ಯರು ಸೇನಾಧಿಪತಿಯೆಂತಲೂ ಅಭಿಪ್ರಾಯವು ಅವನಿಗಿದ್ದರಲ್ಲವೇ ? ಹಾಗಿದ್ದ ಪಕ್ಷದಲ್ಲಿ ಸೇನಾಪತಿಯನ್ನು ತಾನಿದ್ದಲ್ಲಿಯೇ ಕರೆಸಿಕೊಳ್ಳಬೇಕಾಗಿತ್ತು. ತಾನು ಆತನಿದ್ದಲ್ಲಿಗೆ ಹೋಗುವುದರಿಂದ ತನ್ನ ಯೋಗ್ಯತೆಯನ್ನು ತಾನು ಮರೆತಂತೆಯೇ ಸರಿ. ಆದ್ದರಿಂದ ಈ ವಾದವು ಸರಿಯಲ್ಲ. ಅವಿವೇಕಿಗಳು ಕ್ರಮವಾದ ಮಾರ್ಗಗಳಲ್ಲಿ ಹೋಗುವುದೇ ಇಲ್ಲ. ಭಯಗ್ರಸ್ಥನಾದವನ ವ್ಯವಹಾರವು ಈ ವಿಧವಾಗಿ ಅಸ್ತವ್ಯಸ್ತವಾಗಿ ಕಂಡು ಬರುತ್ತದೆ. ರಾಜನಾಗಿದ್ದರೆ ದ್ರೋಣನನ್ನು ತನ್ನಲ್ಲಿಗೇ ಕರೆಸಿಕೊಳ್ಳಬೇಕಾಗಿತ್ತು. ಶಿಷ್ಯನಾಗಿದ್ದರೆ ಸಮೀಪದಲ್ಲಿ ಸೇರುತ್ತಲೇ ನಮಸ್ಕಾರವನ್ನು ಮಾಡಬೇಕಾಗಿತ್ತು. ರಾಜವರ್ತನವೂ ಇಲ್ಲದೆ, ಶಿಷ್ಯವರ್ತನವೂ ಇಲ್ಲದೆ, ಉಭಯ ಭ್ರಷ್ಟನಾದ ದುರ್ಯೋಧನನು ಇದೆಲ್ಲಕ್ಕೂ ಕುರುಡನ ಮಗನೆಂಬುದೇ ಕಾರಣ.

ಸಂಬಂಧ: ದುರ್ಯೋಧನನು ಮುಂದಿನ ಶ್ಲೋಕದಲ್ಲಿ ದ್ರೋಣಾಚಾರ್ಯನಿಗೆ ಸೈನ್ಯವನ್ನು ಪ್ರದರ್ಶಿಸುತ್ತಾ ಕೇಳುತ್ತಾನೆ :

ಪಶ್ಯೈತಾಂ ಪಾಂಡುಪುತ್ರಾಣಾ-ಮಾಚಾರ್ಯ ಮಹತೀಂಚಮೂಮ್।
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥೩॥

ತಾತ್ಪರ್ಯ : ಎಲೈ ಆಚಾರ್ಯನೇ, ನಿನ್ನ ಶಿಷ್ಯನೂ ಬುದ್ಧಿವಂತನೂ ದ್ರುಪದ ಪುತ್ರನೂ ಆದ ದೃಷ್ಟದ್ಯುಮ್ನನಿಂದ ವ್ಯೂಹಾಕಾರವಾಗಿ ರಚಿಸಲ್ಪಟ್ಟ ಪಾಂಡುಪುತ್ರರ ಈ ದೊಡ್ಡ ಸೇನೆಯನ್ನು ನೋಡು.

ಈ ಶ್ಲೋಕದಲ್ಲಿ ಮಹಾತ್ಮನಾದ ಸಂಜಯನು ದುರ್ಯೋಧನನ ಹೃದಯದಲ್ಲಿರುವ ಕುಟಿಲ ಪ್ರಸಂಗವನ್ನು ವರ್ಣಿಸುತ್ತಾನೆ.

ಸಂಸಾರದಲ್ಲಿ ದೇವತೆಗಳು ಮತ್ತು ದಾನವರು, ಬುದ್ಧಿವಂತರು ಮತ್ತು ಮೂರ್ಖರು–ಎಲ್ಲಾ ಪ್ರಕಾರದ ಜೀವರುಗಳು ಹಿಂದಿನಿಂದಲೂ ನಿವಾಸ ಮಾಡುತ್ತಾರೆ

ಮತ್ತು ಮುಂದೆಯೂ ಇರುತ್ತಾರೆ. ಇಲ್ಲಿ ಎಲ್ಲರೂ ಸತ್ಯವಾದಿಗಳೂ, ಪರಮ ಧರ್ಮನಿಷ್ಠರೂ ಆಗಿರುವುದಿಲ್ಲ ಮತ್ತು ಎಲ್ಲರೂ ಧಾರ್ಮಿಕರೂ, ದುಷ್ಕರ್ಮಿಗಳೂ, ಕ್ರೂರರೂ ಆಗಿರುವುದಿಲ್ಲ. ಪರಮೇಶ್ವರನ ಸೃಷ್ಟಿಯಲ್ಲಿ ಒಳ್ಳೆಯವರು-ಕೆಟ್ಟವರು, ಸುಖಿಗಳು-ದುಃಖಿಗಳು, ಬಲವಂತರು-ದುರ್ಬಲರು, ಶ್ರೀಮಂತರು-ಬಡವರು, ಮನುಷ್ಯರು-ಪಶುಗಳು ಇತ್ಯಾದಿಯವರಿಗೆ ಅವರವರ ಯೋಗ್ಯತಾನುಸಾರವಾಗಿ ಸ್ಥಾನವು ದೊರಕಿರುತ್ತದೆ. ಒಮ್ಮೆ ಧರ್ಮಪ್ರಿಯರು ಅಧಿಕ ಸಂಖ್ಯೆಯಲ್ಲಿ ತೋರಿಬಂದರೆ ಮತ್ತೊಮ್ಮೆ ಅಧಾರ್ಮಿಕರ ಸಂಖ್ಯೆಯು ಅಧಿಕವಾಗಿ ತೋರಿಬರುತ್ತದೆ. ಆದರೂ ಯುಗ ಯುಗದಲ್ಲಿಯೂ ಧರ್ಮಕ್ಕೆ ಜಯವೆಂಬುದು ದೃಢಸತ್ಯವಾಗಿರುವುದು. ಅಧರ್ಮ ಪಕ್ಷವು ಬಲವಾಗಿದ್ದರೂ, ಶಕ್ತಿ, ವಿದ್ಯಾ, ಐಶ್ವರ್ಯ ಮೊದಲಾದವುಗಳಿಂದ ಕೂಡಿದ್ದರೂ, ನರಸಿಂಹನು ಹಿರಣ್ಯಕಶ್ಯಪನನ್ನು ಸಂಹರಿಸಿದಂತೆ, ಧರ್ಮಪಕ್ಷವು ಅಧರ್ಮಪಕ್ಷವನ್ನು ನಾಶ ಮಾಡುವುದರಲ್ಲಿ ಸಂದೇಹವಿಲ್ಲ.

ಕೌರವರದು ಹನ್ನೊಂದು ಅಕ್ಷೋಹಿಣಿ ಸೇನೆ ; ಪಾಂಡವರದು ಏಳು ಅಕ್ಷೋಹಿಣಿ ಸೇನೆ. ಒಂದು ಅಕ್ಷೋಹಿಣಿ ಸೇನೆಯಲ್ಲಿ ೨೧,೮೭೦ ಆನೆಗಳೂ, ೨೧,೮೭೦ ರಥಗಳೂ, ೬೫,೬೧೦ ಕುದುರೆಗಳೂ ಮತ್ತು ೧,೦೯,೩೫೦ ಕಾಲಾಳುಗಳೂ ಸೇರಿರುತ್ತವೆ. ದುರ್ಯೋಧನನ ಸೇನೆಯು ಪಾಂಡವರ ಸೇನೆಗಿಂತ ದೊಡ್ಡದಾಗಿದ್ದರೂ ಪಾಪದಿಂದ ಉಂಟಾದ ಭಯದಿಂದ ದುರ್ಯೋಧನನಿಗೆ ಶತ್ರು ಪಕ್ಷವು ಪ್ರಬಲವಾಗಿ ಕಂಡು ಬರುತ್ತದೆ. ಈ ಕಾರಣದಿಂದಲೇ ಅವನು ದ್ರೋಣಾಚಾರ್ಯರ ಹತ್ತಿರ ಹೋಗಿ ಅವರಿಗೆ ಉತ್ತೇಜನವುಂಟುಮಾಡುವುದಕ್ಕಾಗಿ ಗಂಭೀರ ಹಾಗೂ ವ್ಯಂಗ್ಯವಾಣಿಯಿಂದ ಪಾಂಡವರ ಭಾರಿ ಸೇನೆಯನ್ನು ನೋಡಿರಿ ಎಂದು ಹೇಳಿದನು.

ದುರಾತ್ಮರುಗಳ ಮಾತು ದುರ್ಯೋಧನನಂತೆ ಸ್ಪಷ್ಟವಾಗಿರುವುದಿಲ್ಲ. ದುರಾತ್ಮರು ಯಾವಾಗಲೂ ಮುಖವನ್ನು ನೋಡಿ ಮಾತನಾಡುತ್ತಾರೆ. ಅವರಿಗೆ ಮನದಲ್ಲಿ ಒಂದು, ವಾಣಿಯಲ್ಲಿ ಮತ್ತೊಂದು, ಕರ್ಮದಲ್ಲಿ ಇನ್ನೊಂದು—ಈ ರೀತಿ ವಿಪರೀತ ಲಕ್ಷಣ ಕಂಡು ಬರುತ್ತವೆ.

ದುರ್ಯೋಧನನ ಮಾತಿನಲ್ಲಿರುವ ಕುಟಿಲ ಪ್ರಸಂಗವನ್ನು ಒಂದು ರೀತಿಯಿಂದ ಕಂಡುಹಿಡಿಯಬಹುದು. ಹೇಗೆಂದರೆ, ಪಾಂಡವರು ಈ ಸೇನೆಯನ್ನು ತೆಗೆದುಕೊಂಡು ನಮ್ಮೊಡನೆ ಯುದ್ಧಕ್ಕೆ ಬಂದಿರುತ್ತಾರೆ. ಈ ಸೇನೆಯಲ್ಲಿ ಯಾವ ಬಲವೂ ಇಲ್ಲ ಎಂಬ ಅರ್ಥವನ್ನಾದರೂ ಮಾಡಬಹುದು. ಇಲ್ಲವೇ, ಪಾಂಡವರು ಇಂಥಾ ದೊಡ್ಡ ಸೇನೆಯನ್ನು ತೆಗೆದುಕೊಂಡು ನಮ್ಮೊಡನೆ ಯುದ್ಧಕ್ಕೆ ಬರಬಹುದೆಂಬ ನಿರೀಕ್ಷೆಯೂ ಸಹ ಇರಲಿಲ್ಲವೆಂಬ ಅರ್ಥವನ್ನಾದರೂ ಮಾಡಬಹುದು.

ಪಾಪಿಗೆ ಸರ್ವತ್ರವೂ ಪಾಪವಾಗಿಯೇ ತೋರುತ್ತದೆ. ಅವನ ಹೃದಯದಲ್ಲಿ ಯಾವಾಗಲೂ ಅಶಾಂತಿಯೇ. ಅವನು ತಾನು ಭಯಭೀತನಾಗಿದ್ದು ಮತ್ತೊಬ್ಬರಿಗೂ ಭಯಭೀತಿಯನ್ನುಂಟುಮಾಡುತ್ತಾನೆ. ಭಯ, ಚಿಂತೆ ಮತ್ತು ಅಶಾಂತಿಗಳಿದ್ದರೂ ಅವರು ತಮ್ಮ ದುಷ್ಕರ್ಮವನ್ನು ಬಿಡುವುದಿಲ್ಲ. ಡಂಭಾಚಾರಿಗಳಾದ ಸ್ವಾರ್ಥ ಜನಗಳು ಒಳಗಿಲ್ಲದ ವೈರಾಗ್ಯವನ್ನು ತೋರಿಸುತ್ತಾರೆ. ಅವರು ಹೇಳುವುದೇನೆಂದರೆ, ಸಂಸಾರದಲ್ಲಿ ಯಾರಿಗೂ ಯಾರೂ ಸಂಬಂಧವಿಲ್ಲ. ಒಬ್ಬರೂ ಸ್ವಾರ್ಥವನ್ನು ಬಿಟ್ಟು ಮತ್ತೊಬ್ಬರಿಗೆ ಸಹಾಯ ಮಾಡಲಾರರು. ತನ್ನವರೆಂದು ಹೇಳಿಸಿಕೊಳ್ಳುವವರೂ ಸಹ ಕಷ್ಟ ಬಂದ ಕೂಡಲೇ ಮುಖವನ್ನು ಬದಲಾಯಿಸುತ್ತಾರೆ. ಸಂಸಾರದಲ್ಲಿ ಒಳ್ಳೆಯದನ್ನು ಮಾಡುತ್ತಾ ಹೋದಂತೆಲ್ಲಾ ಕೆಟ್ಟದ್ದೇ ಬರುತ್ತದೆ-ಎಂದು. ಅವರು ಹೀಗೆ ಮಾತನಾಡುವುದನ್ನು ಕೇಳಿ ಅವರು ನಿಜವಾದ ವೈರಾಗ್ಯವಂತರೆಂದು ಭಾವಿಸಿ ಮೋಸ ಹೋಗಬಾರದು.

ದುರ್ಯೋಧನನ ವೃತ್ತಿಯ ನರನಾರಿಯರು ಒಂದು ಕಡೆ ಸುಳ್ಳು ವೈರಾಗ್ಯವನ್ನು ತೋರಿಸುತ್ತಿದ್ದರೆ, ಮತ್ತೊಂದು ಕಡೆ ಅರ್ಜುನನಂತೆ ಧರ್ಮಕ್ಕೆ ಭಯ ಪಡುವಂಥ ಜನರು ಮೋಹದಿಂದ ಉತ್ಪನ್ನವಾದ ದಯೆಯ ಸುಳಿಗೆ ಸಿಕ್ಕು ದುರ್ಜನರ ದುಷ್ಟ ವ್ಯವಹಾರವನ್ನು ನೋಡಿಯೂ ಸಹ ಸುಮ್ಮನೇ ಕುಳಿತುಬಿಡುತ್ತಾರೆ. ಇಷ್ಟೇ ಅಲ್ಲ-ಇಂಥವರು ತಮ್ಮ ಉದಾಸೀನತೆಯನ್ನು ಧರ್ಮ ಹಾಗೂ ವೈರಾಗ್ಯವೆಂದು ಭಾವಿಸುತ್ತಾರೆ.

ಗೀತೆಯು ಈ ಎರಡೂ ನಮೂನೆಯ ಜನಕ್ಕೆ ಎಚ್ಚರಿಕೆಯನ್ನು ಕೊಡುತ್ತದೆ: ಸಂಸಾರದಲ್ಲಿರುವವರೆಲ್ಲಾ ತನ್ನವರೇ ; ಒಬ್ಬರು ಒಂದಿಲ್ಲಾದರೊಂದು ರೂಪದಿಂದ ಮತ್ತೊಬ್ಬರಿಗೆ ಸಹಾಯ ಮಾಡುವವರೇ ; ಮುಳುಗುವವನಿಗೆ ಹುಲ್ಲುಕಡ್ಡಿಯೇ ಸಹಾಯ ಮಾಡುತ್ತದೆ. ಪ್ರೇಮ, ಸೇವಾ ಮತ್ತು ಸದ್ಭಾವನೆಯಿಂದ ಎಲ್ಲರೊಡನೆ ಯಥೋಚಿತವಾದ ವ್ಯವಹಾರವನ್ನು ಮಾಡಿ ಅದನ್ನು ಈಶ್ವರನಿಗೆ ಸಮರ್ಪಣೆ ಮಾಡುವುದರಲ್ಲಿಯೇ ಮುಕ್ತಿ. ಅನ್ಯಾಯ ಮತ್ತು ದುಷ್ಟ ಗುಣಗಳನ್ನು ಶಿಕ್ಷಿಸದೆ ಸುಮ್ಮನಿರುವ ನಪುಂಸಕನು ಪಾಪಕ್ಕೆ ಭಾಗಿಯಾಗುತ್ತಾನೆ.

ದುರ್ಯೋಧನನ ವೃತ್ತಿಯ ನರನಾರಿಯರು ಸದಾ ಭಯಭೀತರೂ ಸಂಶಯವುಳ್ಳವರೂ ಆಗಿ ದುಃಖವನ್ನು ಅನುಭವಿಸುತ್ತಿರುತ್ತಾರೆ. ಅಂಥವರು ಧನದ ಭೋಗದ ಸುಖವನ್ನು ಬಯಸುತ್ತಿದ್ದರೂ ಮತ್ತೊಬ್ಬರಿಗೆ ಸಂಸಾರವು ಅಸಾರವೆಂದು ಬೋಧಿಸುತ್ತಿರುತ್ತಾರೆ. ಇದಕ್ಕೆ ವಿರುದ್ಧವಾಗಿ ವಿಷಾದಗ್ರಸ್ತವಾದ ಅರ್ಜುನನ ವೃತ್ತಿಯ ಜೀವರುಗಳು ದಯೆ ಮತ್ತು ಕರುಣೆಯಿಂದ ಆವರಿಸಲ್ಪಟ್ಟು ಅನ್ಯಾಯವನ್ನು ಕಣ್ಣು ತುಂಬ ನೋಡಿಯೂ ಸುಮ್ಮನಿರುತ್ತಾರೆ. ಮತ್ತು ಮೋಹವೆಂಬ ಬಲೆಗೆ ಸಿಕ್ಕಿ

ತಮ್ಮನ್ನು ತಾವು ಮರೆತಿರುತ್ತಾರೆ. ಇವರಿಬ್ಬರಿಗೂ ವಿಲಕ್ಷಣವಾಗಿ ಶ್ರೀ ಕೃಷ್ಣ ವೃತ್ತಿಯ ಜನರು ಸದಾ ಸಾವಧಾನರೂ, ಧರ್ಮಶೀಲರೂ ಮತ್ತು ಕರ್ತವ್ಯಪರಾಯಣರೂ ಆಗಿದ್ದು, ಸದಾ ಆನಂದದಲ್ಲಿ ಇರುತ್ತಾರೆ.

ದುರ್ಯೋಧನನು ತನ್ನ ಕುಟಿಲತೆಯಿಂದ ದ್ರೋಣಾಚಾರ್ಯರಿಗೆ ಹಿಂದಿನ ದ್ವೇಷವನ್ನು ನೆನಪಿಗೆ ತಂದು ಕೊಡುತ್ತಾ, ಪಾಂಡವರ ಸೇನೆಯನ್ನು ವ್ಯೂಹಾಕಾರವಾಗಿ ರಚಿಸಿದವನು ದ್ರುಪದರಾಜನ ಮಗ ದೃಷ್ಟದ್ಯುಮ್ನನು. ಈ ದ್ರುಪದನೇ ನಿನಗೆ ಜನ್ಮ ವೈರಿ. ಈ ದ್ರುಪದನು ನಿನ್ನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ದೃಷ್ಟದ್ಯುಮ್ನನನ್ನು ಪಡೆದುಕೊಂಡಿರುತ್ತಾನೆ. ಈ ದೃಷ್ಟದ್ಯುಮ್ನನೇ ನಿನಗೆ ಮೃತ್ಯು. ಆದುದರಿಂದ ನೀನು ಸದಾ ಎಚ್ಚರವಾಗಿರಬೇಕು—ಎಂದು ಹೇಳುತ್ತಾನೆ.

ಭಗವದ್ಗೀತೆಯು ಐತಿಹಾಸಿಕ ಗ್ರಂಥ ಮಾತ್ರವೇ ಅಲ್ಲ, ಆಧ್ಯಾತ್ಮಿಕ ಗ್ರಂಥವೂ ಆಗಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ದ್ರೋಣಾಚಾರ್ಯರೆಂದರೆ ಸಂಸ್ಕಾರಗಳ ಸಮೂಹ. ದೃಷ್ಟದ್ಯುಮ್ನನೆಂದರೆ ಯಜ್ಞಾದಿ ಶುಭ ಕರ್ಮಗಳಿಂದ ಉತ್ಪನ್ನವಾದ ಜ್ಞಾನಜ್ಯೋತಿ. ಈ ಜ್ಞಾನಜ್ಯೋತಿಯು ಅಸದ್ ವೃತ್ತಿಗಳೊಡನೆ ಹೋರಾಡಲು ಸದ್ ವೃತ್ತಿಗೆ ಸಹಾಯ ಮಾಡುತ್ತದೆ. ದೃಷ್ಟದ್ಯುಮ್ನನು ದ್ರೋಣಾಚಾರ್ಯರಿಂದ ವಿದ್ಯೆಯನ್ನು ಸಂಪಾದಿಸಿದಂತೆ ಜ್ಞಾನವು ಸಂಸ್ಕಾರಗಳಿಂದ ಬೆಳೆಯುತ್ತದೆ. ದೃಷ್ಟದ್ಯುಮ್ನನು ದ್ರೋಣಾಚಾರ್ಯರನ್ನು ವಧಿಸಿದಂತೆ ಜ್ಞಾನವು ಸಂಸ್ಕಾರಗಳ ಸಮೂಹವನ್ನು ನಾಶಗೊಳಿಸುತ್ತದೆ.

ಸಂಬಂಧ : ಮುಂದಿನ ಮೂರು ಶ್ಲೋಕಗಳಲ್ಲಿ ದುರ್ಯೋಧನನು ದ್ರೋಣಾಚಾರ್ಯರಿಗೆ ಪಾಂಡವರ ಪಕ್ಷದಲ್ಲಿರುವ ವೀರರನ್ನು ಲೆಕ್ಕ ಮಾಡಿ ತೋರಿಸುತ್ತಾನೆ. (ಸಶೇಷ)



ಹಿಂದಿನ ಸಂಚಿಕೆಯವರೆಗೆ

(ಧರ್ಮಪ್ರಸಾರ-ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೭ ಮೇ ೧೧ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ಈ ಲೇಖನ ಮಾಲಿಕೆಯಲ್ಲಿ ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ).

ಧಾರಾವಾಹಿ-೯ — **ಜಗದ್ಗುರು ಮಾತಾಜಿ**

ಚದುರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಕಟ್ಟಿಗೆಗಳನ್ನು ಹೊರೆಯಾಗಿ ಮಾಡಲು ಹಗ್ಗ ಬೇಕು; ಅತ್ತಿತ್ತ ಹರವಿರುವ ಮುತ್ತು ಪೋಣಿಸಲು ಸೂತ್ರ ಬೇಕು. ಹಾಗೆಯೇ ಲಂಡನ್ ನಗರದಲ್ಲಿ ವ್ಯಾಪಕವಾಗಿ ಹರಡಿರುವ ಹಿಂದುಗಳನ್ನು ಸಂಘಟಿಸಲು ಸನಾತನ ಧರ್ಮ ಮಿಷನ್ ಕಾರ್ಯ ಮಾಡುತ್ತಿತ್ತು. ಇವರು ವಿಶ್ವ ಆಧ್ಯಾತ್ಮಿಕ ಸಂಘ ಎಂಬ ಸಂಸ್ಥೆಯ ಸಹಕಾರದೊಡನೆ ಒಂದು ವಿಚಾರ ವೇದಿಕೆಯನ್ನು ಸಮ್ಮೇಳನದ ರೂಪದಲ್ಲಿ ಜುಲೈ ಮೂರರಂದು ಏರ್ಪಡಿಸಿದ್ದರು. ಅದು ಇಸೆಕ್ಸ್ ಎಂಬ ನಗರ ಭಾಗದಲ್ಲಿ ಇಲ್‌ಫರ್ಡ್ ಎಂಬ ಬಡಾವಣೆಯ ಬೃಹದಾಕಾರದ ಪುರಭವನದಲ್ಲಿ ವ್ಯವಸ್ಥೆಯಾಗಿದ್ದಿತು. ಅಧ್ಯಕ್ಷರಾಗಿ ಡಾ|| ಆನಂದಗಿರಿಪೂರ್ಣ ಎಂಬ ಸ್ವಾಮಿಗಳು ಬರಲಿದ್ದರು. ಪ್ರಪ್ರಥಮ ಮಹಿಳಾ ಜಗದ್ಗುರುವನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸ ಬಯಸಿದ್ದ ಆ ಜನರು ನನಗೆ ಮುಖ್ಯ ಸ್ಥಾನವನ್ನೇ ನೀಡಿದ್ದರು.

ಡಾ|| ಆನಂದಗಿರಿಪೂರ್ಣರು ಶ್ರೀ ಶಂಕರಾಚಾರ್ಯ ಪೀಠದ ಮಹಾಮಂಡಲೇಶ್ವರರು. ಅವರು ಇದೀಗ ಹೆಚ್ಚು ಆ ದೇಶಗಳಲ್ಲೇ ಸಂಚರಿಸುತ್ತಿದ್ದು ಜರ್ಮನಿಯನ್ನು ಕೇಂದ್ರವಾಗಿ ಮಾಡಿಕೊಂಡು, ಯಾವಾಗಲಾದರೊಮ್ಮೆ ಭಾರತಕ್ಕೆ ಬರುವರು. ಉತ್ತರ ಭಾರತೀಯರಲ್ಲಿ, ಮಾತ್ರವಲ್ಲ ಆಂಗ್ಲನಾಡಿನಲ್ಲಿರುವ ಭಾರತೀಯರಲ್ಲಿ ವೇದಾಂತವೆಂದರೆ ಕೇವಲ ಶ್ರೀ ಶಂಕರಾಚಾರ್ಯರ ಸಿದ್ಧಾಂತ ಮಾತ್ರವೆಂದು, ಕೇವಲ ಆ ಪೀಠದವರಿಂದ ದೀಕ್ಷೆ ಪಡೆದವರಷ್ಟೇ ಗುರುಗಳೆಂದು, ಅವರ ಶಾಖೆಗೆ ಸೇರದವರು ಮತ್ತು

ಜನ್ಮತಃ ಬ್ರಾಹ್ಮಣರಲ್ಲದವರು ದೀಕ್ಷೆ ಪಡೆದರೆ ಕೇವಲ ಸಾಧು, ಸನ್ಯಾಸಿಗಳೆಂದು, ಗುರುಗಳಲ್ಲವೆಂಬ ತಿಳುವಳಿಕೆ.

ವೇದಾಂತದಲ್ಲಿ ಅದ್ವೈತ ಸಿದ್ಧಾಂತವು ಅಗ್ರಮಾನ್ಯ ಮತ್ತು ಪ್ರಚಲಿತವಾಗಿದ್ದರೂ ವೇದಾಂತ ಮತಗಳೇ ಆದ ಶ್ರೀರಾಮಾನುಜರ ವಿಶಿಷ್ಟಾದ್ವೈತ ಮತ್ತು ಶ್ರೀಮಧ್ವಾಚಾರ್ಯರ ದ್ವೈತಗಳು ಅಷ್ಟಾಗಿ ಪ್ರಚಾರವಿಲ್ಲ. ಹಿಂದೂ ಪರಂಪರೆಯಲ್ಲಿ ಬರುವ ಸ್ವತಂತ್ರವಾದ ಧರ್ಮದ ಅನುಯಾಯಿಗಳು ನಾವೆಂದೂ ಪರಿಚಯಿಸಿದಾಗ ಅವರಿಗೆ ಆಶ್ಚರ್ಯ.

ಜುಲೈ ಮೂರರಂದು ಇಂಗ್ಲೆಂಡಿನ ವಿವಿಧ ಭಾಗಗಳಿಂದ ಬಂದು ಹಿಂದುಗಳು ಸಮಾವೇಶಗೊಂಡಿದ್ದರು. ಜರ್ಮನಿ, ಫ್ರಾನ್ಸ್‌ಗಳಿಂದಲೂ ಕೆಲವರು ಬಂದಿದ್ದರು. ಹೆಚ್ಚು ಹಿಂದಿ ಮಾತನಾಡುವ ಜನ; ದಕ್ಷಿಣ ಭಾರತದವರು ಅವರೊಡನೆ ಅಷ್ಟಾಗಿ ಬೆರೆಯುತ್ತಿರಲಿಲ್ಲ. ಮಾತ್ರವಲ್ಲ, ದಕ್ಷಿಣ ಭಾರತದಿಂದ ಹೋಗಿರುವ ಕನ್ನಡಿಗ, ತಮಿಳು, ತೆಲುಗು ಮತ್ತು ಮಲೆಯಾಳಿಗಳಲ್ಲಿ ಅಷ್ಟಾಗಿ ಹೊಂದಾಣಿಕೆ ಇಲ್ಲ. ಅವರಲ್ಲಿ ಧಾರ್ಮಿಕ ಪ್ರಜ್ಞೆಯೂ ಕಡಿಮೆ ಎನಿಸಿತು. ಕಾರಣಗಳು ಹಲವಿರಬೇಕು. ಬಹುಪಾಲು ಆಂಗ್ಲದೇಶ ನಿವಾಸಿ ಹಿಂದುಗಳು ಭಾರತದಿಂದ ನೇರವಾಗಿ ಹೋದವರಾಗಿರದೆ, ಉಗಾಂಡ,ಕೀನ್ಯ, ದಕ್ಷಿಣ ಆಫ್ರಿಕಾಗಳಿಗೆ ಒಂದಾನೊಂದು ಕಾಲದಲ್ಲಿ ಹೋಗಿ,ಅಲ್ಲಿಯ ವರ್ಣದ್ವೇಷಕ್ಕೆ ತುತ್ತಾಗಿ ಇಂಗ್ಲೆಂಡಿಗೆ ವಲಸೆ ಬಂದವರು, ಸಂಸಾರ ಸಮೇತವಾಗಿ. ದಕ್ಷಿಣ ಭಾರತೀಯರು ಇಲ್ಲಿಂದ ಅಧ್ಯಯನ ಉದ್ಯೋಗ ಮುಂತಾದ ಉದ್ದೇಶ ಹೊತ್ತು ನೇರವಾಗಿ ಹೋದವರು. ಇನ್ನೂ ಈ ನಾಡಿನ ಹೊಸ್ತಿಲು ದಾಟುವ ಮುನ್ನವೇ ಪಾಶ್ಚಿಮಾತ್ಯ ಸಂಸ್ಕೃತಿಗೆ ಅಥವಾ ನಾಸ್ತಿಕತೆಗೆ ಮರುಳಾದವರು ಅವರಲ್ಲಿ ಬಹಳ ಜನರು. ಸಾಧು ಸಂತರು, ಪ್ರವಚನಕಾರರು-ಸನ್ಯಾಸಿಗಳು ಎಂದರೆ ಉತ್ತರ ಭಾರತದವರಿಗೆ ಬಲು ಭಕ್ತಿ. ಕಾವೀಧಾರಿಗಳಲ್ಲಿ ಅವರು ಜಾತಿ ಭೇದವನ್ನೂ ಎಣಿಸರು. "ಗುರು ಮಹಾರಾಜ್", "ಸಂತ್ ಲೋಗ್" ಎಂದು ಆತ್ಮೀಯವಾಗಿ ಆಮಂತ್ರಿಸುವರು.

ಅಂದಿನ ಸಭೆಯಲ್ಲಿ "ಇಂದಿನ ವೈಜ್ಞಾನಿಕ ಮನ್ವಂತರದಲ್ಲಿ ಧರ್ಮದ ಅವಶ್ಯಕತೆ" ಎಂಬ ಬಗ್ಗೆ ಮಾತನಾಡಿದಾಗ ಸಭಿಕರು ಬಹಳ ಸಂತೋಷಿಸಿದರು ಮತ್ತು ಮುಂದಿನ ಬಾರಿ ಎರಡು ವರ್ಷಗಳ ನಂತರ ನಡೆವ ಸಮ್ಮೇಳನಕ್ಕೆ ನಾನು ಬಂದೇ ತೀರಬೇಕೆಂದು ಬಲವಂತ ಮಾಡಿದರು. ಅವರ ಆನಂದ ಮೇರೆವರಿದಿತ್ತು. ಅತಿಥಿಗಳನ್ನು ಪರಿಚಯಿಸಿದ ಚಮನ್‌ಲಾಲ್ ಮಾರ್ವಾರವರು : "ನಾವು ಆಗಾಗ ಮಾಡುವ ಸಮ್ಮೇಳನಕ್ಕೆ ಸಾಧು-ಸಂತರನ್ನು ಆಮಂತ್ರಿಸುತ್ತಿದ್ದೇವೆ. ಈ ಬಾರಿ ಪುಣ್ಯ ವಿಶೇಷವೆಂಬಂತೆ ಪ್ರಥಮ ಮಹಿಳಾ ಜಗದ್ಗುರುಗಳು ಆಗಮಿಸಿರುವುದು ನಮಗೆ ಮಿತಿಯಿಲ್ಲದ ಸಂತೋಷ

ತಂದಿದೆ. ನಮ್ಮ ಸನಾತನ ಪರಂಪರೆಯ ಸತ್ವವನ್ನು ಸಾರಲು, ಭಾರತೀಯ ಮೌಲ್ಯಗಳ ಪ್ರಸರಣಕ್ಕಾಗಿ ಓರ್ವ ವಿದ್ಯಾವಂತ ಧೀಮಂತ ಮಹಿಳೆ ಆಗಮಿಸಿರುವದು ನಮ್ಮ ದೇಶದ ಉಜ್ವಲ ಆಧ್ಯಾತ್ಮಿಕ ಸಂಪತ್ತಿಗೆ ಸಾಕ್ಷಿ" ಎಂದು ಕೊಂಡಾಡಿ ಹೃತ್ಪೂರ್ವಕ ಸ್ವಾಗತ ನೀಡಿದರು. ಅಂತಹ ಬೃಹತ್ತಾದ ಆ ವೇದಿಕೆ! ಮತ್ತು ಅಪರೂಪದ ಅತಿಥಿಗಳ ಮಧ್ಯೆ ವಿಶೇಷ ಮತ್ತು ವಿದ್ವತ್ ಪೂರ್ಣ ಮನ್ನಣೆ! ನನಗೆ ಸಿಕ್ಕಿದುದು ಪರಮಪ್ರಭು ಬಸವಣ್ಣನವರ ದಯದಿಂದಲೇ ಎಂದು ಭಾವಿಸುವೆ.

ಈ ವರುಷದ ಜುಲೈ ತಿಂಗಳಲ್ಲಿ ಮೂರು ದಿವಸಗಳ ಸಮ್ಮೇಳನ ನಡೆಯಲಿದ್ದು ಅದಕ್ಕೆ ಆಗ್ರಹಪೂರ್ವಕ ಆತ್ಮೀಯ ಆಮಂತ್ರಣ ಬಂದಿದೆ. ಆದರೆ ಅವರಿಗೆ ಆಗ ಮಾತುಕೊಟ್ಟಂತೆ ಈ ವರುಷ ಹೋಗುವದು ಅಸಾಧ್ಯವಾಗುತ್ತಿದೆ, ಏಕೆಂದರೆ ಬಸವ ಗಂಗೋತ್ರಿ ವಿದ್ಯಾಲಯ ಸ್ಥಾಪನೆಯ ಸಂಕಲ್ಪ ಈಡೇರಲು ಶ್ರಮಿಸಬೇಕಾಗಿದೆ ಈ ವರ್ಷ. ಮುಂದಿನ ಸಮ್ಮೇಳನಕ್ಕೆ ಖಂಡಿತವಾಗಿಯೂ ಬರುವೆನೆಂದು ಭರವಸೆ ನೀಡಿ ಪತ್ರ ಬರೆದಿರುವೆ.

ನನ್ನ ವಿದೇಶ ಪ್ರವಾಸದ ಉದ್ದೇಶ ಧರ್ಮಪ್ರಸಾರವೊಂದೇ ಅಲ್ಲದೆ ಜ್ಞಾನ ಸಂಪಾದನೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನವಷ್ಟೇ. ಅದಕ್ಕೆ ಸಂಬಂಧಿಸಿದ ಹಲವರನ್ನು ಕಾಣುವ ಅಪೇಕ್ಷೆ. ಆದ್ದರಿಂದ ಲಂಡನ್ ವಿಶ್ವವಿದ್ಯಾಲಯದ ಓರಿಯಂಟಲ್ ಮತ್ತು ಆಫ್ರಿಕನ್ ವಿಭಾಗದ, "ಪೌರಾತ್ಯ ಧರ್ಮಗಳು" ಎಂಬ ವಲಯದ ಮುಖ್ಯಸ್ಥರಾದ ಪ್ರೊಫೆಸರ್ ಬಾಲ್‌ಹಾಟ್‌ಚಟ್ ಮತ್ತು ಡಾ॥ ಪಿಯಾಟೋಗಾರ್ಸ್ಕಿರವರೊಡನೆ ದೂರವಾಣಿ ಮೂಲಕ ಜುಲೈ ೫ರಂದು ಸಂದರ್ಶನ ಏರ್ಪಡಿಸಿಕೊಂಡೆ. ಬ್ರಿಟಿಷ್ ಮ್ಯೂಸಿಯಮ್ಮಿಗೆ ಅತಿ ಹತ್ತಿರದಲ್ಲೇ ಆ ವಿದ್ಯಾಲಯ. ನಮ್ಮ ಕರ್ನಾಟಕ ವಿಶ್ವವಿದ್ಯಾಲಯ ಅಥವಾ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಂತೆ ಒಂದೇ ಕಟ್ಟಡದಲ್ಲಿರದೆ, ಬೃಹತ್ತಾದ ಹಲವಾರು ಭವನಗಳಿದ್ದುವು. ನನ್ನ ಬಳಿ ಬೃಹತ್ ಲಂಡನ್ ನಗರದ ಭೂಪಟವಿದ್ದುದರಿಂದ ಸುಲಭವಾಗಿ ಅಲ್ಲಿಗೆ ಹೋದೆ. ಅಂಚೆಯ ಮೂಲಕ ನನ್ನ ಬಯೋಡೇಟಾ (ಆತ್ಮ ಪರಿಚಯ) ಕಳಿಸಿದುದರಿಂದ ಬಹಳ ಕುತೂಹಲದಿಂದ ಕಾಯುತ್ತಿದ್ದರು ಡಾ॥ ಪಿಯಾಟೋಗಾರ್ಸ್ಕಿ.

ಮೊದಲ ಅಂತಸ್ತಿನಲ್ಲಿರುವ ರಿಸೆಪ್ಷನಿಸ್ಟಳ ಬಳಿಗೆ ಹೋಗಿ, ನಮ್ಮ ಸಂದರ್ಶನದ ವಿಚಾರ ಹೇಳುತ್ತಿದ್ದಂತೆಯೇ ಆಕೆ ದೂರವಾಣಿಯ ಮೂಲಕ ಅವರನ್ನು ಸಂಪರ್ಕಿಸಿ, ಸಿದ್ಧವಿದ್ದಾರೆ ಎಂದು ತಿಳಿಸಿದಳು. ಸ್ವಯಂಚಾಲಿತ ಲಿಫ್ಟನ್ನೇರಿ, ಸ್ವಯಂಚಾಲಿತ ಬಾಗಿಲುಗಳನ್ನು ಹಾಯ್ದು ಹೋದಾಗ ತಮ್ಮ ಕೋಣೆಯ ಬಳಿ ಕಾಯುತ್ತಿದ್ದರು. ಎತ್ತರದ ಭೀಮಕಾಯ, ತಮ್ಮ ವೇಷಭೂಷಣದ ಕಡೆಗೆ ಗಮನವೇ ಇಲ್ಲ. ನಮ್ಮಲ್ಲಿ

ಒಂದು ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದರೆ ಉಳಿದಾವ ಅರ್ಹತೆಗೆ ಎಳಸದಿದ್ದರೂ ಸೂಟ್-ಬೂಟ್ ಟ್ರಿಮ್ಮಾಗಿರಬೇಕು. ಅವರು ಅದಕ್ಕೆ ಎಳ್ಳಷ್ಟೂ ಆದ್ಯತೆ ನೀಡರು. ಇನ್ನೋರ್ವರನ್ನು ಕಂಡಾಗಲಂತೂ "ನಾನು ಯಾರೋ ಜವಾನ ಇರಬೇಕು" ಎಂದೇ ಭಾವಿಸಿದ್ದೆ. ಅಷ್ಟು ಅಸ್ತವ್ಯಸ್ತವಾಗಿದ್ದರು. ಅವರೇ ಇಡೀ ವಿಭಾಗದ ಮುಖ್ಯಸ್ಥರು.

ತುಂಬಾ ಸಂತೋಷದ ನಗೆ ನಕ್ಕು "ನಮಸ್ತೆ" ಎಂದರು ಡಾ|| ಪಿಯಾಟೋ. ಅವರು ಸಂಸ್ಕೃತದಲ್ಲಿ ಬಲ್ಲಿದರು. ವೇದೋಪನಿಷತ್ತುಗಳ ಸಾರವನ್ನು ಉಂಡವರು. ಶೈವಧರ್ಮದ ತಿರುಳನ್ನು ಅರಿತವರು.

"ನಿಮ್ಮನ್ನು ಕಾಣಲು ಸಂತೋಷ...." ಎಂದು ಮಾತಿಗೆ ತೊಡಗಿದರು. ಅದಕ್ಕೆ ಮುನ್ನ ಕೇಳಿದರು. "ಕ್ಷಮಿಸಿ, ನಾನು ಸಿಗರೇಟು ಸೇದಿದರೆ ಆಕ್ಷೇಪಣೆ ಇಲ್ಲವಷ್ಟೇ. ಪೆಟ್ರೋಲ್ ಇಲ್ಲದಿದ್ದರೆ ಕಾರ್ ಹೇಗೆ ಓಡದೋ ಹಾಗೆ ಕಾಫಿ-ಸಿಗರೇಟು ಇಲ್ಲದಿದ್ದರೆ ನನ್ನ ತಲೆಯೂ ಓಡದು."

ನಾನಲ್ಲಿಗೆ ಉಪದೇಶಕಳಾಗಿ ಹೋಗಿರದೆ ಸಂವಾದ-ಸಂದರ್ಶನಕ್ಕೆ ಹೋಗಿದ್ದೆ. ನವರತ್ನಕೊಳ್ಳದಲ್ಲಿ ಅನೇಕ ಪಶುಪಕ್ಷಿಗಳ ಅಸ್ಥಿಪಂಜರದ ತುಣುಕುಗಳ ಮಧ್ಯೆ ಒಂದು ವಜ್ರವು ಫಳಫಳಿಸುತ್ತಿದ್ದರೆ, ಆ ರತ್ನವನ್ನು ಹೆಕ್ಕಿಕೊಂಡರಾಯಿತು. ಮೂಳೆಗಳ ಕಡೆ ಗಮನವೇಕೆ ? ಎಂದುಕೊಂಡು "ಪರವಾಗಿಲ್ಲ, ನಿಮಗೆ ಸ್ವಾತಂತ್ರ್ಯವಿದೆ, ಸಂಕೋಚಿಸಬೇಡಿ" ಎಂದೆ. ನಿಜಕ್ಕೂ ಸಿಗರೇಟು-ಬೀಡಿ ವಾಸನೆ ನನಗೆ ಎಂದೂ ಸಹ್ಯವಾಗದು. ಸೌಜನ್ಯಕ್ಕಾಗಿ ತಾಳಿಕೊಂಡೆ.

"ನಿಮ್ಮ ಮಾತೃಭಾಷೆ"

"ಕನ್ನಡ"

"ಬಲ್ಲೆ ಬಲ್ಲೆ. ನಾನು ತಾರುಣ್ಯದಲ್ಲಿ ಕೆಲವು ಕಾಲ ತಮಿಳುನಾಡಿನಲ್ಲಿದ್ದು ಚೆನ್ನಾಗಿ ತಮಿಳನ್ನು ಓದಿರುವೆ. ಕನ್ನಡ ದ್ರವಿಡ ಭಾಷೆಯಲ್ಲೊಂದಷ್ಟೇ. ನೀವು ಧರ್ಮಗುರುಗಳಂತೆ ತೋರುವಿರಿ. ನೀವಾರು ?"

"ಲಿಂಗಾಯತ ಧರ್ಮದ ಅನುಯಾಯಿಗಳು...."

"ಲಿಂಗಾಯತರೋ ಅಥವಾ ವೀರಶೈವರೋ... ? ಡಾ|| ಪಿಯಾಟೋಗಾರ್ಸ್ಕಿಯವರ ಪ್ರಶ್ನೆ. ನನಗೆ ಈ ಪ್ರಶ್ನೆಯಿಂದ ದಿಗ್ಭ್ರಾಂತಿಯಾಯಿತು; ಯಾವ ಉದ್ದೇಶದಿಂದ ಕೇಳಿರಬಹುದೆಂಬುವುದು ನನಗೆ ಸ್ಪಷ್ಟವಾಗಿತ್ತು. ಅಲ್ಲದೆ ನನಗೆ ಬೇಕಾದ

ಜಾಡು ಅವರ ಮಾತಿನಲ್ಲಿ ಸಿಗುವಂತಿತ್ತು. ಅವರ ಬಾಯಿಂದಲೇ ಹೊರಡಿಸುವ ಸಂಕಲ್ಪ ಮಾಡಿ, ಮುಗ್ಧಳಂತೆ, ಆ ಬಗ್ಗೆ ಏನೂ ವಿಚಾರವನ್ನೇ ಮಾಡಿಲ್ಲದವಳಂತೆ ನುಡಿದೆ.

"ನಮ್ಮಲ್ಲಿ ಎರಡೂ ಪದ ಬಳಕೆಯುಂಟು; ಎರಡೂ ಪದ ಒಂದೇ ಧರ್ಮದ ಅನುಯಾಯಿಗಳಿಗೆ ಅನ್ವಯಿಸುವವು...."

"ತಪ್ಪು ತಪ್ಪು...." ತಲೆ ಕೆರೆದುಕೊಂಡರು ಡಾ|| ಪಿಯಾಟೋ. ನನಗೆ ಒಳಗೇ ಮೆಚ್ಚುಗೆ. "ಭಲೇ ಪಂಡಿತಾ, ಸಾವಿರಾರು ಮೈಲುಗಳಾಚೆ ಇದ್ದು, ಎಲ್ಲಿಯೋ ಹುಟ್ಟಿ, ಭಾರತವನ್ನು ಎರಡು ವರುಷ ಕಂಡು, ಇಲ್ಲಿರುವ ನೀನು ಅರಿತಷ್ಟು, ಚಿಂತಿಸಿದಷ್ಟೂ ನಮ್ಮವರು ಚಿಂತಿಸಿಲ್ಲ...." ಎಂದು ಮನದಲ್ಲೇ ನಕ್ಕೆ. [ಈ ಬಗ್ಗೆ ನಾನು ಬರೆದಿರುವ ವಿಚಾರ ಬಸವಣ್ಣನವರ ಪದಪ್ರಯೋಗ ಕೋಶದ ಮುನ್ನುಡಿಯಲ್ಲಿ ತಾವು ಓದಬಹುದು]

"ಅದು ಏಕೆ ಮತ್ತು ಹೇಗೆ...." ಅದೇ ಮುಗ್ಧತೆಯಿಂದ ಕೇಳಿದೆ.

"ನೋಡಿ ತಮಿಳುನಾಡಿನಲ್ಲಿ ಸ್ಥಾವರ ಲಿಂಗಧಾರಿಗಳಾದ ಒಂದು ಗುಂಪು ಇದೆ. ಅವರು ವೀರಶೈವರು. ಅವರು ಮಾಣಿಕ್ಯವಾಚಕರನನ್ನು ತಮ್ಮ ಗುರು ಎನ್ನುವರು. ಸಪ್ತಶೈವಗಳಲ್ಲಿ ಅದೊಂದು ಪಂಥ; ಅವರಲ್ಲಿ ವರ್ಣಾಶ್ರಮ ಸಮಾಜ ಪದ್ಧತಿ ಇದೆ. ಕರ್ನಾಟಕದಲ್ಲಿ ಉಗಮಗೊಂಡ ಲಿಂಗಾಯತ ಧರ್ಮ, ಶೈವ-ವೀರಶೈವ ಭಕ್ತಿಯಿಂದ ಪ್ರೇರಿತವಾಗಿದ್ದರೂ, ಅದು ಸ್ವತಂತ್ರ ಧರ್ಮ, ವರ್ಣಾಶ್ರಮದ ಕಟ್ಟುಪಾಡನ್ನು ಮೀರಿದುದು. ಬಸವಣ್ಣನವರೆಂಬ ಸಮಾಜ ಸುಧಾರಕ ಪ್ರವಾದಿಯೊಬ್ಬರು ಆರಂಭಿಸಿದ ಒಂದು ಚಳುವಳಿ ಸ್ವತಂತ್ರ ಧರ್ಮವನ್ನು ರೂಪುಗೊಳಿಸಿತು. "Religions of South India" ಎಂಬ ಗ್ರಂಥ ತೆರೆದು, ಅದರಲ್ಲಿ "Lingayat Movement and Social Reformation" ಎಂಬ ವಿಷಯ ಓದಿ ತೋರಿಸಿದರು.

"ಈ ವಿಷಯದಲ್ಲಿ ನನಗೆ ಹೆಚ್ಚಿನ ಮಾಹಿತಿ ಇರಲು ಕಾರಣ ನನಗೆ ತಮಿಳು ಕಲಿಸಿದ ಗುರು ಶ್ರೀ ರಾಮಲಿಂಗಂ ವೀರಶೈವರಿದ್ದರು...." ಡಾ|| ಪಿಯಾಟೋ ಹೇಳಿ ಮುಗಿಸಿದಾಗ ನನಗೆ ಬಣ್ಣಿಸಲಾರದ ಸಂತೋಷವಾಗಿತ್ತು. ಬೌದ್ಧಿಕ ಪ್ರಾಮಾಣಿಕತೆ ಇರುವ ಆ ಜನ ಪೂರ್ವಾಗ್ರಹ ಪೀಡಿತ ದೃಷ್ಟಿಕೋನವಿಲ್ಲದ ಕಾರಣ, ಸತ್ಯವನ್ನು ಸರಿಯಾಗಿ ಅರಿಯಲು ಯತ್ನಿಸುವರು. ನಮ್ಮವರು ಹಾಗಲ್ಲ. ತಾವು ಯಾವುದನ್ನು ಸಾಧಿಸಬೇಕೆಂದಿರುವರೋ ಅದನ್ನು ಯಾವುದಾದರೂ ಶಾಸ್ತ್ರದಲ್ಲಿ ಹುಡುಕಲೆತ್ನಿಸಿ, ಅದು ಅತ್ಯಂತ ಪುರಾತನ, ವೇದಸಮ್ಮತ ಮತ್ತು ಆಧಾರಿತ ಎಂದು ವಾದಿಸಬಯಸುವರು.

ಇವರಿಗೆ ಸತ್ಯವನ್ನು ನಿರ್ಣಯಿಸುವಲ್ಲಿ ಸ್ವತಂತ್ರ ಮತಿ ಮತ್ತು ಚಿಂತನಶೀಲತೆಗಿಂತ ಶಾಸ್ತ್ರಗಳೇ ಆಧಾರ.

ಡಾ॥ ಪಿಯಾಟೋ ಗಾರ್ಸ್ಕಿಯವರು ಧಾರ್ಮಿಕ ವಿಷಯಗಳಿಂದ ರಾಜಕೀಯ ಮತ್ತು ರಾಷ್ಟ್ರೀಯ ಸಮಸ್ಯೆಯತ್ತ ಕಾಲಿರಿಸಿದರು.

"ಈಗ ಸದ್ಯದಲ್ಲಿ ತುರ್ತುಪರಿಸ್ಥಿತಿ ನಿಮ್ಮ ದೇಶದಲ್ಲಿದೆಯಲ್ಲ. ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಇಂಥ ಪರಿಸ್ಥಿತಿಯಲ್ಲಿ ದೇಶದಿಂದ ಹೊರಗೆ ಬರಲು ತೊಂದರೆ ಏನಾಗಲಿಲ್ಲವೆ ?"

"ಇಲ್ಲ, ನಾವು ರಾಜಕೀಯ ಕ್ಷೇತ್ರದ ವ್ಯಕ್ತಿಗಳಲ್ಲ, ನಮ್ಮ ದೇಶದಲ್ಲಿ ಎಲ್ಲವೂ ಈಗ ವ್ಯವಸ್ಥಿತವಾಗಿದೆ. ಸಾಮಾನ್ಯ ನಾಗರೀಕರಿಗೆ ಅಂಥ ಏನೂ ಬಿಸಿ ತಟ್ಟಿಲ್ಲ. ಆ ದೃಷ್ಟಿಯಿಂದ ಈಗ ಮುಷ್ಕರಗಳು ಕಡಿಮೆಯಾಗಿವೆ. ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ, ರಾಷ್ಟ್ರೀಯ ಉತ್ಪಾದನೆ ಅಧಿಕಗೊಂಡಿದೆ. ವಿಶ್ವವಿದ್ಯಾಲಯ-ಕಾಲೇಜುಗಳಲ್ಲಿ ಪರೀಕ್ಷೆ ಕಾಲಕಾಲಕ್ಕೆ ನಡೆಯುತ್ತಿವೆ. ದೊಂಬಿ ಗದ್ದಲಗಳಿಲ್ಲ".

ವೃತ್ತ ಪತ್ರಿಕೆಗಳಲ್ಲಿ ಏನೇನನ್ನು ಓದಿದ್ದೆವೋ ಅದನ್ನು ವರದಿ ಒಪ್ಪಿಸಿದೆ. ದಕ್ಷಿಣ ಭಾರತದವರಾದ ಮತ್ತು ರಾಜಕೀಯ ಕ್ಷೇತ್ರದ ಆಗುಹೋಗುಗಳು ಅಷ್ಟಾಗಿ ಗೊತ್ತಿಲ್ಲದ ನಾವು, ಸುದ್ಧಿಗಳಿಗಾಗಿ ವೃತ್ತ ಪತ್ರಿಕೆಗಳನ್ನೇ ನಂಬಿದ್ದವರು. ಈ ರೀತಿ ಹೇಳಿದುದು ಅಚ್ಚರಿಯೇನಲ್ಲ. ಈಗ ನೆನಪಿಸಿಕೊಂಡರೆ ನಮ್ಮ ಅಜ್ಞಾನಕ್ಕೆ ನಗೆ ಬರುತ್ತದೆ. ಮಾತ್ರವಲ್ಲ ಆ ಶಾಂತಿ ಸ್ಮಶಾನದ ಶಾಂತಿಯೇ ವಿನಾ ನಂದನವನದ ಪ್ರಶಾಂತತೆಯಲ್ಲ. ಹೆಣದ ಬೆಂಕಿಯ ಬೆಳಕೇ ಹೊರತು ಚಂದಿರನ ಬೆಳಕಲ್ಲ ಎಂದು ಅರಿವಾದಾಗ ಕಸಿವಿಸಿಯಾಗುತ್ತದೆ. ಪತ್ರಿಕಾ ಸ್ವಾತಂತ್ರ್ಯದ ಕತ್ತು ಹಿಸುಕಿ, ಬುದ್ಧಿಯ ಬಾಯಿಗೆ ಬಟ್ಟೆ ತುರುಕಿದ್ದ ಭೀಕರ ಶಾಂತಿ. ನನ್ನ ಉತ್ತರ ಕೇಳಿ ಡಾ॥ ಪಿಯಾಟೋ ಏನೆಂದುಕೊಂಡರೋ, ದೀರ್ಘವಾದ ಉಸಿರನ್ನು ಬಿಟ್ಟರು.

"ಎಲ್ಲಿ ನಿಮ್ಮ ದೇಶ ಸರ್ವಾಧಿಕಾರ ಮತ್ತು ಸಾಮ್ಯವಾದದತ್ತ ಸಾಗುವದೋ ಎಂಬುವ ಭಯ ನಮಗೆಲ್ಲ...." ಅವರ ದನಿಯಲ್ಲಿ ವಿಷಾದ ತುಂಬಿತ್ತು.

"ಬೃಹತ್ತಾದ ಪ್ರಜಾಪ್ರಭುತ್ವದ ರಾಷ್ಟ್ರ. ಅದರ ವೈಶಿಷ್ಟ್ಯ ಕಳೆದುಕೊಳ್ಳಬಾರದು" ಕಳಕಳಿ ಮಿಡಿಯುತ್ತಿತ್ತು, ಭಯ ಮಿಶ್ರಿತವಾಗಿ.

"ಅನಕ್ಷರತೆಯೇ ಜಾಸ್ತಿ ಇರುವ ನಮ್ಮ ದೇಶಕ್ಕೆ ಉತ್ತಮ ಸರ್ವಾಧಿಕಾರಿಯ

ಆಳ್ವಿಕೆ ಇದ್ದರೆ ಒಳ್ಳೆಯದೇ ಆದೀತೇನೋ !" ಎನಂದಾಗ, ಡಾ॥ ಪಿಯಾಟೋ ದಿಗ್ಭ್ರಾಂತರಾಗಿ ನುಡಿದರು, "ಉತ್ತಮತ್ವ-ಸರ್ವಾಧಿಕಾರತ್ವ ಎರಡೂ ಬೆಳಕು-ಕತ್ತಲಿನಂತೆ. ಒಂದಿದ್ದಲ್ಲಿ ಇನ್ನೊಂದು ಇರುವದು ಕಷ್ಟ. ಹಣ ಮತ್ತು ಅಧಿಕಾರಗಳಿಂದ ಪತಿತರಾಗದ ಜನರೇ ದುರ್ಲಭ."

"ಸಾಮ್ಯವಾದದ ಜಾಡಿನಲ್ಲಿ ನಮ್ಮ ದೇಶ ಸಾಗಿದರೆ, ಜನರು ತುತ್ತನ್ನ ಮತ್ತು ಮೈ ಮುಚ್ಚುವಷ್ಟು ಬಟ್ಟೆ, ನಿಲ್ಲಲಿಷ್ಟು ನೆರಳನ್ನಾದರೂ ಪಡೆದಾರು, ಒಂದು ಬಗೆಯ ನೆಮ್ಮದಿಯಾದರೂ ರಷಿಯಾದಲ್ಲಿನಂತೆ ಲಭ್ಯವಾದೀತು...." ನಾನು ಬೇಕೆಂತಲೇ ಹೇಳಿದೆ.

"ಆದರೆ ಧರ್ಮ, ದೇವರು, ಈ ಎಲ್ಲ ಅಧ್ಯಾತ್ಮ ಮೌಲ್ಯಗಳನ್ನು ಬಲಿಗೊಟ್ಟು ಎಂಬುದು ನೆನಪಿದೆಯೆ ?...." ಗಂಭೀರವಾಗಿ ಕೇಳಿದರು.

"ಚೆನ್ನಾಗಿ ಗೊತ್ತಿದೆ. ರಾಷ್ಟ್ರದ ಸಮಗ್ರತೆ, ಆರ್ಥಿಕ ಸಂತೃಪ್ತಿ, ಸಮತಾವಾದವನ್ನು ಧರ್ಮ ತಂದು ಕೊಟ್ಟಿಲ್ಲವಾದಾಗ, ನಾಸ್ತಿಕತೆಯೇ ತರುವುದಾದರೆ ತಪ್ಪಲೆ ಬಿಡಿ...."ನನ್ನ ದನಿಯಲ್ಲಿ ವಿಲಕ್ಷಣ ಹತಾಶೆ ತುಂಬಿತ್ತು. ಧರ್ಮವಂತರೆನ್ನಿಸಿಕೊಂಬ ಜನರು ಮೂಢನಂಬಿಕೆ, ಜಾತೀಯತೆ ಬಿಡಲಾರದ್ದಕ್ಕೆ ವ್ಯಥೆಯಾಗುತ್ತಿತ್ತು.

"ಓಹ್, ಮಾತಾಜಿಯವರೇ, ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ. ಹೊರಗೆ ನಿಂತು ನೀವು ಕಲ್ಪಿಸುವ ರಷಿಯಾಕ್ಕು, ಒಳಗಿದ್ದು ನಾವು ಅನುಭವಿಸುವ ರಷಿಯಾಕ್ಕು ಅಜಗಜಾಂತರ ವ್ಯತ್ಯಾಸ. ಗ್ರಂಥಸ್ಥ ರಷಿಯಾ ವರ್ಣನೆಗೂ, ಜೀವಂತ ಅನುಭವಕ್ಕು ವಿಪರೀತ ವ್ಯತ್ಯಾಸ. ಅಂತೆಯೇ ಪಂಜರದ ಪಕ್ಷಿ ಹೊರಗೆ ಹಾರಬೇಕೆನ್ನುತ್ತದೆ. ಹಾರಾಡುವ ಪಕ್ಷಿ ಹಸಿದು ಪಂಜರದ ಒಳಗಿರುವ ಹಣ್ಣು-ಹಾಲು ನೋಡಿ ಹೋಗಿ ಸೇರಿಕೊಳ್ಳಬೇಕೆನ್ನುತ್ತದೆ....".

"ನಿಮಗೇಕಿಷ್ಟು ದ್ವೇಷ ಆ ನಾಡಿನ ಬಗ್ಗೆ...."

"ಏಕೆಂದರೆ ನಾನು ಅಲ್ಲಿ ಹುಟ್ಟಿದವನು ; ಸಾಮ್ಯವಾದ ಬಂದು ನಾಡಿನ ಸಮಸ್ಯೆ ಬಗೆಹರಿಯುವದೆಂಬ ಕನಸು ಕಂಡಿದ್ದವನು. ವ್ಯಕ್ತಿ ಸ್ವಾತಂತ್ರ್ಯ, ಬುದ್ಧಿ ಸ್ವಾತಂತ್ರ್ಯ ಕಳೆದುಕೊಂಡು, ಹಸಿಕಟ್ಟೆಯಲ್ಲಿ ಉಸಿರುಕಟ್ಟಿ ಒದ್ದಾಡುವ ಜಿಂಕೆಯಂತೆ ಕೊರಗುತ್ತ ಬಾಳುವ ಬಗೆಯನ್ನು ಅಲ್ಲಿ ಇಚ್ಛಿಸದೆ, ಈ ಆಂಗ್ಲನಾಡಿನ ರಾಜಕೀಯ ಆಶ್ರಯ ಪಡೆದುಕೊಂಡವನು...."

"ನಿಜ, ದಿನನಿತ್ಯ" ಕಬ್ಬಿಣದ ತೆರೆ"ಯೆಂದು ಹೆಸರಾಂತ ಸೋವಿಯೆಟ್ ದೇಶದಿಂದ ಹೇಗೋ ತಪ್ಪಿಸಿಕೊಂಡು ಬರುವವರ ಸಂಖ್ಯೆ ಅಪಾರ. ಟೆಲಿವಿಷನ್, ರೇಡಿಯೋ

ಸಂದರ್ಶನಗಳಲ್ಲಿ ಅವರು ಹೇಳುವ ಬದುಕಿನ ಕಥೆ ಕರುಣಾಜನಕ. ಕೆಲವರು ವಿದೇಶಿ ಸಂಗಾತಿಗಳನ್ನು ಆರಿಸಿಕೊಂಡು ಹೊರಗೆ ಬರುವರು. ನನಗೆ ಇಂಗ್ಲೆಂಡಿಗೆ ಹೋದ ನಂತರವೇ ಸಾಮ್ಯವಾದೀ ರಾಷ್ಟ್ರಗಳ ನಿಜ ಪರಿಚಯ ಸಾಧ್ಯವಾಯಿತು. ಡಾ॥ ಪಿಯಾಟೋ ಈ ವಿಷಯದಿಂದ ಮುಂದಕ್ಕೆ ಸಾಗಿದರು.

"ನೀವು ಲಿಂಗಾಯತ ಧರ್ಮದ ಬಗ್ಗೆ ಡಾಕ್ಟರೇಟ್ ಅಭ್ಯಾಸವನ್ನು ಏಕೆ ಮಾಡಬಾರದು? ಸಾಮಾನ್ಯವಾಗಿ ಹಿಂದೂ ತತ್ತ್ವಜ್ಞಾನದ ಬಗ್ಗೆ ಇಲ್ಲಿ ಅಧ್ಯಯನ ಚೆನ್ನಾಗಿ ನಡೆಯುತ್ತಿದ್ದರೂ, ಲಿಂಗಾಯತ ಧರ್ಮದ ಪ್ರಗತಿಪರ ಜಾಗತಿಕ ಮೌಲ್ಯಗಳ ಅರಿವು ಅಷ್ಟಿಲ್ಲ. ಅದು ಒಂದು ಒಳ್ಳೆಯ ಕೊಡುಗೆಯೂ ಆಗುತ್ತದೆ. ಲಂಡನ್ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸಬಹುದು. ಇಲ್ಲಿ ಉತ್ತಮ ಗ್ರಂಥಾಲಯವಿದೆ, ನೀವು ಇಚ್ಛಿಸಿದರೆ ಹೊಸ ಸಾಹಿತ್ಯವನ್ನು ನಿಮ್ಮ ದೇಶದಿಂದ ತರಿಸಬಹುದು.

ತಲೆಯಲ್ಲಿ ಈ ಡಾಕ್ಟರೇಟ್‌ಗಾಗಿ ಅಭ್ಯಸಿಸುವ ಹುಳುವನ್ನು ಹೊಗಿಸಿ, ಡಾ॥ ಪಿಯಾಟೋ ತಮ್ಮ ಲೈಬ್ರರಿ ತೋರಿಸಲು ಕರೆದೊಯ್ದರು. ಓರಿಯಂಟಲ್ ಮತ್ತು ಆಫ್ರಿಕನ್ ಧರ್ಮಗಳ ಅಧ್ಯಯನ ಕೇಂದ್ರದ ಲೈಬ್ರರಿ ಬೃಹದಾಕಾರವಾದುದು ಮತ್ತು ಸುಂದರ. ಸದ್ದುಗದ್ದಲವಿಲ್ಲದೆ ವಿದ್ಯಾರ್ಥಿಗಳು ಅಭ್ಯಸಿಸುವ ಈ ಜ್ಞಾನಭಂಡಾರ ನೋಡಿದವನು, ಅವಿದ್ಯಾವಂತನಾದರೆ ತನ್ನಷ್ಟಕ್ಕೆ ತಾನೇ ಹಳಿದುಕೊಳ್ಳದೆ ಇರಲಾರ. ನಾನು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು ಮತ್ತು ಅನೇಕ ವಿದ್ಯಾಲಯಗಳ ಮುಂದೆ ತರುಣರ ಗುಂಪುಗಳನ್ನು ಕಂಡೆ. ಆದರೆ ಅವರಲ್ಲಿ ಹೆಂಗಳೆಯರನ್ನು ಚುಡಾಯಿಸುವ ಅನಾಗರಿಕತ್ವವಿಲ್ಲ. ಹುಡುಗ-ಹುಡುಗಿ ಜೊತೆಜೊತೆಯಾಗಿ ತಿರುಗುವದು, ಕೆಲವೊಮ್ಮೆ ದಾರಿಯ ಬದಿಯಲ್ಲೇ ನಿಂತು ಸುತ್ತಣ ಜಗತ್ತಿನ ಪರಿವೆಯೂ ಇಲ್ಲದೆ ಸರಸ-ಸಲ್ಲಾಪ ಮಾಡುವದು ಬಹು ಸಹಜ. ಆದರೆ ಹುಡುಗಿಯರ ಬೆನ್ನು ಹತ್ತಿ ತಿರುಗಿ ಚುಡಾಯಿಸುವಂತಹ ಕ್ಷುಲ್ಲಕ ವರ್ತನೆ ಕಾಣಬರುವುದಿಲ್ಲ ಆ ತರುಣರಲ್ಲಿ.

ಡಾ॥ ಪಿಯಾಟೋ ಅನೇಕ ವಿಭಾಗಗಳನ್ನು, ಭಾರತೀಯ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಸಂಗ್ರಹಗಳನ್ನು, ಮುದ್ರಿತ ಗ್ರಂಥಗಳ ಪಡಿಯಚ್ಚು ಬೇಕಾದರೆ ತಕ್ಷಣ ಪ್ರತಿ ಮಾಡಿಕೊಳ್ಳುವ ಸ್ವಯಂಚಾಲಿತ ಫೋಟೊಸ್ಟಾಟ್ ಯಂತ್ರವನ್ನು ತೋರಿಸುತ್ತ ಬಂದರು. ಅವರ ಸೌಜನ್ಯ, ಪ್ರೌಢಿಮೆ, ಆಸಕ್ತಿ ಕಂಡು ಡಾಕ್ಟರೇಟ್ ಪದವಿಗಾಗಿ ಅಭ್ಯಸಿಸುವ ಅಪೇಕ್ಷೆ ಮೊಳೆಯಿತು. "ಅರ್ಜಿಯನ್ನು ಸಲ್ಲಿಸಿರಿ. ನಮ್ಮ ವಿಶ್ವವಿದ್ಯಾಲಯಕ್ಕೆ ಒಂದು, ಪ್ರೌಢ ಪ್ರಬಂಧ ದೊರೆತು, ಆಂಗ್ಲ ವಿಶ್ವಕ್ಕೆ ನೂತನ ಸಾಹಿತ್ಯ ಸಿಕ್ಕಿದರೆ ನಮಗೆ ಹೆಮ್ಮೆ ಮತ್ತು ಆನಂದ" ಡಾ॥ ಪಿಯಾಟೋಗಾರ್ಸ್ಕಿಯವರಿಂದ ಬೀಳ್ಕೊಂಡು ಹೊರಟೆ. ಅಲ್ಲಿ ಅಧ್ಯಯನ ಮುಂದುವರಿಸಬೇಕೆಂಬ ಅದಮ್ಯ ಆಸೆ ಗರಿಬಿಚ್ಚಿದ ಹಕ್ಕಿಯಂತೆ ಹಾರುತ್ತಿತ್ತು. ತಾಯ್ನಾಡಿಗೆ ಪತ್ರ ಬರೆದು ಒಪ್ಪಿಗೆ ಪಡೆಯೋಣವೆಂದು ಮನೆಗೆ ಬಂದು ಲೇಖನಿ ಕೈಗೆತ್ತಿಕೊಂಡೆ.

(ಸಶೇಷ)

ಕಿಶೋರ ಕುಂಜ

ಮಮತೆಯ ಮಕ್ಕಳೆ,

ಈ ಬಾರಿ ನಿಮಗೆ ವ್ಯಾಧ ವಾಲ್ಮೀಕಿಯಾದ ಬಗೆಯಂತಹ ಮತ್ತೊಂದು ವಿಶೇಷ ಪರಿವರ್ತನೆಯ ಕಥೆ ಸಿಗಲಿದೆ. ಬದುಕಿನಲ್ಲಿ ಒದಗುವ ಕೆಲವು ಘಟನೆಗಳು, ಭೇಟಿಯಾಗುವ ವ್ಯಕ್ತಿಗಳು, ಮಾನವ ಜೀವನವನ್ನು ಸಂಪೂರ್ಣವಾಗಿ ಪಲ್ಲಟಿಸಿ, ಪಾಪಿಯನ್ನು ಪಾವನನನ್ನಾಗಿ, ಪತಿತನನ್ನು ಪುನೀತನನ್ನಾಗಿ ಮಾಡಬಲ್ಲವು. ಅಂತಹ ಒಂದು ಪ್ರಸಂಗ ಮಾತಂಗತಮ್ಮನು ಶರಣ ನನ್ನಯ್ಯನಾದುದು.

ಮಾತಂಗಪರ್ವತ ದುರ್ಗಮವಾದ ಅರಣ್ಯದಿಂದ ಕೂಡಿದ ಗಿರಿ ಸಾಲು. ಅಲ್ಲೊಬ್ಬ ಬೇಡರ ದೊರೆ ಮಾತಂಗ ತಮ್ಮ. ಅವನು ಬಹಳ ಕ್ರೂರಿ, ರಕ್ತದಾಹದಿಂದ ಕೂಡಿದ ದರೋಡೆಗಾರ. ಹಿಂಸಿಸಿ ಜನರನ್ನು ಕೊಲ್ಲುವುದರಲ್ಲಿ ಅವನಿಗೆ ವಿಶೇಷ ತೃಪ್ತಿ; ಅವರ ರಕ್ತದ ಸೋಂಕು ಇವನಿಗೆ ಪನ್ನೀರು. ಇವನ ಹೆಂಡತಿ ಮಾರಿರಾಣಿ ಗಂಡನ ಈ ರಕ್ತದಾಹಕ್ಕೆ ಬೇಸತ್ತಿದ್ದಳು. ಆದರೆ ಅಂತರಂಗದಲ್ಲೇ ಜಿಗುಪ್ಸೆಪಟ್ಟರೂ ತುಟಿಯಿಂದಾಡದೆ ಅನುಭವಿಸುತ್ತಿದ್ದಳು.

ಒಂದು ದಿನ ಮಾತಂಗ ತಮ್ಮನ ಕ್ರೂರ ದೃಷ್ಟಿಗೆ ಕೆಲವು ಬಡಪಾಯಿ ಯಾತ್ರಿಕರು ಸಿಕ್ಕಿಬಿದ್ದರು. ಅವನ ಗಂಡುಗೊಡಲಿಯ ಏಟಿಗೆ ಸಿಕ್ಕಿ ಪೆಟ್ಟು ತಿಂದರೂ ಪಾರಾಗಿ ತಪ್ಪಿಸಿಕೊಂಡರು. ರಕ್ತಸಿಕ್ತವಾದ ಅಂಗಾಂಗಗಳಿಂದಲೇ ಭಯಬಿದ್ದು ಓಡುತ್ತ ದುರ್ಗಮ ಅರಣ್ಯ ಪ್ರದೇಶ ದಾಟಿದರು. ಎದುರಿನಿಂದ ಕಾವಿಧಾರಿಯಾದ ಓರ್ವ ತೇಜಸ್ವಿ ಪುರುಷ ಶಾಂತಗಂಭೀರ ಮುಖಮುದ್ರೆ ಹೊತ್ತು ಬರುತ್ತಿದ್ದ. ಅವನನ್ನು ಕಂಡು ವ್ಯಾಕುಲಿತರಾಗಿ ಕೇಳಿದರು: "ಎಲ್ಲಿಗೆ ಹೊರಟಿರುವಿರೀ ಸ್ವಾಮಿ?" "ಈ ಅರಣ್ಯದ ಮಾರ್ಗವಾಗಿ ದಕ್ಷಿಣದ ಕಲ್ಯಾಣಪುರದ ಕಡೆಗೆ ಹೊರಟಿರುವೆ." ಅವರು ಥರಥರ ನಡುಗುತ್ತ ಹೇಳಿದರು: "ಬೇಡ ಸ್ವಾಮಿ, ಹುಲಿಯ ಗವಿಯಿಂದ ಪಾರಾಗಿ ಬರಬಹುದು, ಸಿಡಿಲಿನ ಗರ್ಭದಿಂದ ಹೊರಬರಬಹುದು. ಆ ಕ್ರೂರಿ ಮಾತಂಗ ತಮ್ಮನ ಕೈಯಿಂದ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯ. ತಾವೀ ದಾರಿಯಲ್ಲಿ ಹೋಗಬೇಡಿ...."

"ಏಕೆ, ಅವನಾರು, ಏನು ಮಾಡುತ್ತಾನೆ?" ಅದೇ ಶಾಂತಿಯಿಂದ ಆ ಮಹಾತ್ಮರು ಕೇಳಿದರು.

"ಅವನೊಬ್ಬ ಕ್ರೂರಿಯಾದ ಬೇಡ, ದರೋಡೆಗಾರ. ಅವನು ತುಂಬ ಹಿಂಸೆ ಕೊಟ್ಟು ಕೈಗೆ ಸಿಕ್ಕವರನ್ನು ಕೊಲ್ಲುತ್ತಾನೆ. ನಮ್ಮ ರಕ್ತಸಿಕ್ತ ಮೈಗಳನ್ನು ನೋಡಿ.

ಕತ್ತರಿಸಿರುವ ಬೆರಳುಗಳನ್ನು ನೋಡಿ. ಬುದ್ಧಿ ನೆಟ್ಟಗಿಲ್ಲದವರಷ್ಟೇ ಅವನ ಬಳಿಗೆ ಹೋಗಬೇಕು."

"ಬೇಡ ಗುರುಗಳೇ, ಈ ಸಾಹಸಕ್ಕೆ ಕೈಹಾಕುವದು ಬೇಡ." ಶರಣನ ಶಿಷ್ಯರು ಒಕ್ಕೊರಲಿನಿಂದ ಕೂಗಿದರು. ಆ ಶರಣಮುಗುಳ್ನಕ್ಕ. ಅವನ ಕಣ್ಣು ಮಿಂಚಿದವು, ನುಡಿದ.

"ರೋಗಿಗಳಿದ್ದಲ್ಲಿ ವೈದ್ಯರಿಗೆ ಕೆಲಸ. ಕತ್ತಲೆ ಇದ್ದಲ್ಲಿ ಬೆಳಕಿಗೆ ಕಾಯಕ, ಪಾಪಿಗಳು, ಪತಿತರು ಇದ್ದಲ್ಲಿಯೇ ಗುರುವಿನ ಚಿಕಿತ್ಸೆ, ಕಾಯಕ." ಹಾಗೇ ಮುಂದುವರಿದ ವಿಶೇಷ ಸಂಕಲ್ಪದೊಡನೆ. ಅವನ ಶಿಷ್ಯರುಗಳು ಪಲಾಯನ ಸೂತ್ರ ಪಠಿಸಿದರು.

ಆ ಶರಣನ ಹೆಸರು ಸುಜ್ಞಾನಿದೇವ. ಅವನು ಒಡಿಸ್ಸಾ ದೇಶದ ಮಣಿಕರ್ಣಿಕಾಪುರದವನು. ವಾತ್ಸಲ್ಯ-ಆತ್ಮವಿಶ್ವಾಸ ಮೇಳವಿಸಿದ್ದ ಶಾಂತ ಮತ್ತು ಗಂಭೀರವಾದ ಮುಖ. ದೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಬಂದ. ಕೆಂಗಣ್ಣುಗಳಿಂದ ದೃಷ್ಟಿಸುತ್ತಿದ್ದ ಮಾತಂಗತಮ್ಮನ ಬಳಿ ನಿಧಾನವಾಗಿ ಸಾಗಿದ. ಕೆನ್ನೀರು ತೊಟ್ಟಿಕ್ಕುತ್ತಿದ್ದ ಗಂಡುಗೊಡಲಿಯನ್ನು ಹಿಡಿದು, ಕೆದರಿದ ತಲೆ, ಉಗ್ರವಾದ ಮುಖ, ಕ್ರೂರ ಕಣ್ಣುಗಳಿಂದ ನಿಟ್ಟಿಸುತ್ತಿದ್ದ ಮಾತಂಗತಮ್ಮನ ಕೈಕಾಲು, ತನ್ನತ್ತಲೇ ನಿರಾಯುಧನಾಗಿ ಬರುತ್ತಿದ್ದ ಕಾವಿಧಾರಿ ಶರಣನನ್ನು ಕಂಡು ಕಂಪಿಸಿದವು. ಅವನಿಗೇ ಆಶ್ಚರ್ಯವಾಯಿತು.

"ಇದೇನು ರೋಷಾವೇಶ ಉಕ್ಕುತ್ತಿದ್ದ ನನಗೆ ಕೈಕಾಲುಗಳಲ್ಲಿ ನಡುಗು ಉಂಟಾಗಿದೆ". ಧೈರ್ಯವನ್ನು ಪ್ರೈಗೂಡಿಸಿಕೊಂಡು ಅಟ್ಟಹಾಸದ ಕ್ರೂರನಗೆ ನಕ್ಕು ಗರ್ಜಿಸಿದ ;

"ಏ, ಯಾರದು, ನಿಲ್ಲು. ನನ್ನನ್ನು, ನನ್ನ ಕೊಡಲಿಯನ್ನು ಕಂಡು ಭಯವಾಗದೆ ?"

ಆ ಸಾತ್ವಿಕ ಶರಣ ಮುಗುಳ್ನಕ್ಕ. ಹುಣ್ಣಿಮೆ ಚಂದಿರ ನಕ್ಕಂತಾಯಿತು. "ತಮ್ಮಾ, ನನ್ನಂತೆಯೇ ಇರುವ ಇನ್ನೋರ್ವ ಮಾನವನನ್ನು ಕಂಡು ಭಯಪಡುವುದು ಉಚಿತವೆ ?" ಅವನ ನಗೆ ಉಕ್ಕುವ ಹಾಲಿಗೆ ತಣ್ಣೀರನ್ನು ಎರಚುವಂತೆ, ಮಾತಂಗತಮ್ಮನ ಕ್ರೌರ್ಯವನ್ನು ಅಡಗಿಸುತ್ತಿತ್ತು.

"ನೋಡಿಲ್ಲಿ; ಈ ಕೊಡಲಿ ಎಷ್ಟು ಜನರ ಬಲಿ ತೆಗೆದುಕೊಂಡಿದೆ ಎಂಬುದು ತಿಳಿದಿದೆಯೇ? ನಿನ್ನನ್ನೂ ಕೊಲ್ಲುವೆ...."

"ನನ್ನನ್ನೇ... ಸಾಧ್ಯವಿಲ್ಲ. ನಾನು ಎಂದರೆ ದೇಹವಲ್ಲ ಆತ್ಮ. ಆತ್ಮನನ್ನು ಕತ್ತಿ, ಕತ್ತರಿಸಲಾರದು, ಬೆಂಕಿ ಸುಡಲಾರದು; ನೀನು ದೇಹವನ್ನು ಕೊಲ್ಲಬಹುದು ನನ್ನಾತ್ಮವನ್ನು ಹತಮಾಡಲಾರೆ. ಅದಿರಲಿ, ಇಷ್ಟೆಲ್ಲ ಜನರ ತಲೆಯೊಡೆದು ಪಾಪಕಾರ್ಯ ಮಾಡುತ್ತಿರುವೆಯಲ್ಲ ಯಾರಿಗಾಗಿ ಮಾಡುತ್ತಿರುವೆ...."

"ಯಾರಿಗಾಗಿ? ಸನ್ಯಾಸಿಯಾದ ನಿನಗೆ ತಿಳಿಯುವ ಬಗೆಯೆಂತು? ನನ್ನ ಪ್ರೀತಿಪಾತ್ರಳಾದ ಹೆಂಡತಿ ಮಾರಿರಾಣಿ ಮತ್ತು ಮಕ್ಕಳಿಗಾಗಿ....

ಆಕೆ ನಿಜವಾಗಿಯೂ ನಿನ್ನನ್ನು ಪ್ರೀತಿಸುವಳೆ?"

"ಪ್ರಾಣಕ್ಕಿಂತಲೂ ಹೆಚ್ಚು...." ಸಂಪ್ರೀತನಾಗಿ ಮಾತಂಗತಮ್ಮ ಹೇಳಿದ. "ಹಾಗಾದರೆ ಪರೀಕ್ಷಿಸೋಣ" ಎಂದು ಸುಜ್ಞಾನಿ ದೇವನು ಮಾತಂಗ ತಮ್ಮನ ಸೇವಕನನ್ನು ಕರೆದು, "ಮಾರಿರಾಣಿಯ ಬಳಿಗೆ ಹೋಗಿ ಮಾತಂಗತಮ್ಮನು ಯಾರೊಡನೆಯೋ ಹೋರಾಡುವಾಗ ಸತ್ತಿರುವನೆಂದು, ತಕ್ಷಣ ಬರಬೇಕೆಂದು ತಿಳಿಸು" ಎಂದು ಆಜ್ಞಾಪಿಸಿ ಕಳಿಸಿದ. ಸೇವಕನು ಸುದ್ದಿ ತಿಳಿಸಿದಾಗ ಮಾರಿರಾಣಿ ಸಂತೋಷದ ನಗೆ ನಕ್ಕು ಹೇಳಿದಳು, "ಅವನ ಪಾಪ ಕಾರ್ಯಗಳಿಂದ ಬೇಸತ್ತಿದ್ದೆ. ಇಂದಿಗೆ ಅವನಿಂದ ಬಿಡುಗಡೆಯಾಯ್ತು" ಅಷ್ಟೇ ಅಲ್ಲದೆ ಇನ್ನೋರ್ವ ಬೇಡರ ನಾಯಕ ಕನ್ನುಗನೊಂದಿಗೆ ಓಡಿ ಹೋದಳು.

ಮಾರಿರಾಣಿ ಅಳುತ್ತ ಬರುವುದನ್ನು ಆತುರದಿಂದ ಕಾಯುತ್ತಿದ್ದ ಮಾತಂಗ ತಮ್ಮನ ಉತ್ಸಾಹ ಅಡಗಿತು, ಓರ್ವನೇ ಸೇವಕನು ಕಾಲೆಳೆದುಕೊಂಡು ಬರುವದನ್ನು ಕಂಡಾಗ. ಪರಿಸ್ಥಿತಿ ತಿಳಿದಾಗ ಹೆಂಡತಿಯ ಮೇಲೆ ರೋಷ ಏರುವ ಬದಲು ಅಜ್ಞಾನದ ಪರದೆ ಹರಿಯತೊಡಗಿತು.

"ಮಹಾನುಭಾವ ನನ್ನವರು-ತನ್ನವರೆಂದು ಅವರ ತೃಪ್ತಿಗಾಗಿ ಮಾಡಬಾರದ ಪಾಪ ಮಾಡಿರುವೆನಲ್ಲವೆ? ಈ ಪಾಪದಲ್ಲಿ ಅವರೂ ಪಾಲುಗಾರರೋ...."

"ಇಲ್ಲ ತಮ್ಮಾ, ತಮ್ಮ ತಮ್ಮ ಪಾಪಗಳನ್ನು ತಾವೇ ಅನುಭವಿಸಬೇಕು." ಮಾತಂಗತಮ್ಮ ನಡುಗಿ, ತನ್ನನ್ನುದ್ಧರಿಸಲು ಬೇಡಿ, ಸುಜ್ಞಾನಿದೇವನ ಪಾದಕ್ಕೆರಗಿ ಕಂಬನಿಗರೆದ.

ವಾತ್ಸಲ್ಯದಿಂದ ಮೇಲಕ್ಕೆತ್ತಿ "ಏಳು ತಮ್ಮಾ, ಇಂದಿಗಾದರೂ ಅರಿವು ಮೂಡಿತಲ್ಲವೆ? ದೇವನಿಗೆ ಶರಣಾಗತನಾಗು ; ಮಹಾಗುರು ಬಸವಣ್ಣ ಹೇಳುತ್ತಾರೆ :

ಎಲವೋ ಎಲವೋ ಪಾಪಕರ್ಮವ ಮಾಡಿದವನೆ!

ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೆ!

ಒಮ್ಮೆ ಶರಣೆನ್ನೆಲವೋ

ಓರ್ವಂಗೆ ಶರಣೆನ್ನು ನಮ್ಮ ಕೂಡಲ ಸಂಗಮದೇವಂಗೆ!

ನಿನಗೂ ಭವಿಷ್ಯವಿದೆ". ಥಡನೆ ಬರಲಿಚ್ಛಿಸಿದ ಮಾತಂಗತಮ್ಮನನ್ನು ಕರೆದುಕೊಂಡು ಸುಜ್ಞಾನಿದೇವ ಪ್ರಯಾಣ ಮುಂದುವರಿಸಿದ. ಉರಿಯೊಡನಾಡಿದ ಕರ್ಪೂರ ಉರಿಯಾಗುವಂತೆ ಸುಜ್ಞಾನಿ ದೇವನ ಸಂಪರ್ಕದಿಂದ ಸಾತ್ವಿಕನಾಗತೊಡಗಿದ. ಹಲವಾರು ತಿಂಗಳು ದಾರಿ ತುಳಿದ ಬಳಿಕ ಕಲ್ಯಾಣವನ್ನು ಕಂಡನು. ಭೂಕೈಲಾಸವೆನಿಸಿದ್ದ ಬಸವಣ್ಣನ ಮಹಾ ಮನೆ ಕಂಡು ಪುಳಕಿತರಾದರು.

ಮಮತೆ-ಮರುಕಗಳು ಮಡುಗಟ್ಟಿದ ಮಹಾಗುರು ಬಸವಣ್ಣನ ದೃಷ್ಟಿವಲಯಕ್ಕೆ ಬಿದ್ದ ಆಗಂತುಕರು ಪುಳಕಿತರಾಗಿ ವಂದಿಸಿದರು. ಸುಜ್ಞಾನಿದೇವನು ಮಾತಂಗ ತಮ್ಮನ

ಪರಿವರ್ತನೆಯ ಇತಿಹಾಸವನ್ನು ವಿವರಿಸಿ, ಗುರುವಿನ ಆಶ್ರಯ ಮತ್ತು ಸತ್ಸಂಗವನ್ನು ಬಯಸಿ ಬಂದಿರುವನೆಂದು ನುಡಿದಾಗ ಬಸವಣ್ಣನವರು ಮಾತೃಹೃದಯದಿಂದ :

"ಬಾ ನನ್ನಯ್ಯ" ಎಂದು ಹತ್ತಿರಕ್ಕೆ ಕರೆದು ಮೈದಡವಿ, ತಲೆ ನೇವರಿಸಿದರು. ಪರುಷ ಹಸ್ತವು ಮಾತಂಗ ತಮ್ಮನನ್ನು ಸೋಂಕಿದಾಗ ಕಟುಕ ಮಾತಂಗತಮ್ಮ ಶರಣ ನನ್ನಯ್ಯನಾಗಿ ಪರಿವರ್ತಿತನಾದ. 'ನನ್ನಯ್ಯ' ಎಂಬ ಕರೆ ಹೃದಯವನ್ನು ಸೆಳೆಯಿತು, ಪಾದಕ್ಕೆರಗಿ ಪಶ್ಚಾತ್ತಾಪದ ಕಂಬನಿ ಹರಿಸಿದ. ಅತ್ತ ಮಹಾಮರು ಬಸವಣ್ಣನಿಗೆ ಪಾದಾಭಿಷೇಕ ಮಾಡಿದರೆ, ಮಾತಂಗತಮ್ಮ ಪರಿವರ್ತನೆಗೊಂಡು ನನ್ನಯ್ಯನಾದ ಹೃದಯಸ್ಪರ್ಶಿ ಘಟನೆಯಿಂದ ಸುರಿದ ಸಂತೋಷದ ಹನಿಗಳು ಬಸವಣ್ಣನವರ ಕಣ್ಣಿಂದ ಸುರಿದು, ನನ್ನಯ್ಯನ ತಲೆಯ ಮೇಲೆ ಬಿದ್ದು, ಅವನಿಗೆ ಶರಣತ್ವದ ಪಟ್ಟಗಟ್ಟಿದವು.

ಹೀಗೆ ಸುಜ್ಞಾನಿದೇವ-ನನ್ನಯ್ಯರು ಶರಣ ಗಣ ಮಣಿಗಳಾಗಿ ಅನುಭವ ಮಂಟಪದ ಮಾಲೆಯಲ್ಲಿ ಸೇರಿದರು.

—ತ್ರಿನೇತ್ರಿ

★

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಚಾಮರಾಜನಗರ :

ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ ತಾಲ್ಲೂಕು ಕೇಂದ್ರ. ಅಲ್ಲಿಯ ಸುಪ್ರಸಿದ್ಧ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ಏಪ್ರಿಲ್ ೨ನೇ ತಾರೀಖು ಪರಮ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಂದ ಆರಂಭವಾದ ಪ್ರವಚನವು ಸಹಸ್ರಾರು ಶ್ರೋತೃಗಳನ್ನು ಆಕರ್ಷಿಸಿತು. ತಾಲ್ಲೂಕಿನ ಅನೇಕ ಹಳ್ಳಿಗಳಿಂದ ಜನರು ನೆರೆದು ಪ್ರವಚನಾಮೃತವನ್ನುಂಡು ಪುನೀತರಾದರು. ಕೊಳ್ಳೇಗಾಲದ ಶರಣ ಪಿ. ಬಸವಣ್ಣನವರು ಪೂಜ್ಯ ಶ್ರೀಗಳನ್ನು ಸಭೆಗೆ ಪರಿಚಯಿಸಿದರು. ಬಿದಿಗೆ ಚಂದ್ರನಂತೆ ದಿನದಿನಕ್ಕೆ ಕಳೆ ಹೊಂದಿದ ಪ್ರವಚನಕ್ಕೆ ಕಳಸವಿಡುವಂತೆ ತಾ|| ೨೩-೪-೭೮ರಂದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನಗರಕ್ಕೆ ಆಗಮಿಸಿದರು. ಸುಂದರವಾದ ಭವ್ಯ ಮಂಟಪ ರಚಿಸಿ, ಸ್ವಾಗತ ನೀಡಲಾಯಿತು. ಸನ್ಮಾನ್ಯ ಶರಣರಾದ. ಟಿ. ಜಿ. ರಾಜಶೇಖರಪ್ಪನವರು ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡರು. ತಾ|| ೯-೫-೧೯೭೮ರಂದು ಬಸವ ಜಯಂತಿಯನ್ನು ವೈಭವದಿಂದ ಆಚರಿಸಲಾಯಿತು. ಪ್ರವಚನವನ್ನು ಪೂಜ್ಯ ಮಾತಾಜಿಯವರು ಮುಂದುವರಿಸಿದರು. ತಾ|| ೧೪-೫-೧೯೭೮ ಭಾನುವಾರದಂದು ಮುಕ್ತಾಯವಾಯಿತು. ಚಾಮರಾಜನಗರದ ಪ್ರಮುಖ ವ್ಯಾಪಾರಿಗಳೂ ಆದ ಶರಣ. ಸಿ. ಎಮ್. ಶ್ರೀಕಂಠಪ್ಪನವರು, ಸಿ. ಎಮ್. ರಾಚಪ್ಪನವರು, ಬಸವ

ರಾಜ ಮತ್ತು ಪಟೇಲ್ ಮಹಾದೇವಪ್ಪನವರು ವಿಶೇಷ ಆಸಕ್ತಿ ವಹಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಚನ ವ್ಯವಸ್ಥೆ ಮಾಡಿದರು.

ಗ್ರಾಮಾಂತರ ಪ್ರದೇಶದಲ್ಲಿ ಪ್ರವಾಸ

ಕಾಳನಹುಂಡಿ :

ಪೂಜ್ಯ ಮಾತಾಜಿಯವರ ದಿವ್ಯವಾಣಿಯನ್ನು ಆಲಿಸಿ ಜನತೆ ಪುನೀತರಾಗಲೆಂದು ಅನೇಕ ಗ್ರಾಮಗಳಿಗೆ ಅವರನ್ನು ಬರಮಾಡಿಕೊಂಡವರಲ್ಲಿ ಕಾಳನ ಹುಂಡಿಯವರು ಪ್ರಮುಖರು. ತಾ|| ೧೫-೫-೧೯೭೮ರಂದು ಪಟೇಲ್ ಶಿವನಂಜಪ್ಪನವರು ಅಪೂರ್ವ ಸ್ವಾಗತ ಕೋರಿ ಬರಮಾಡಿಕೊಂಡು ತಮ್ಮ ಊರಿನಿಂದ ಕಾಣಿಕೆಯನ್ನು ಸಲ್ಲಿಸಿ ಕಾರ್ಯಕ್ರಮ ನಡೆಯಿಸಿದರು.

ರಾಮಸಮುದ್ರ :

ಚಾಮರಾಜನಗರಕ್ಕೆ ಸನಿಹದಲ್ಲಿರುವ ಈ ಗ್ರಾಮದ ಜನತೆಯ ಪರವಾಗಿ ಪಟೇಲ್ ಮಹಾದೇವಪ್ಪನವರು ತಾ|| ೧೬-೫-೧೯೭೮ರಂದು ಸ್ವಾಗತಿಸಿ ಅದ್ದೂರಿಯಾಗಿ ಪ್ರವಚನ ಏರ್ಪಡಿಸಿ, ತಮ್ಮೂರ ಪರವಾಗಿ ಕಾಣಿಕೆಯನ್ನು ಸಮರ್ಪಿಸಿದರು.

ಹೆಬಸೂರು : ಚಿಕ್ಕದಾದರೂ ಚೊಕ್ಕವಾದ ಗ್ರಾಮ ಹೆಬಸೂರು. ಅಲ್ಲಿಯ ಪ್ರಮುಖರು, ಶರಣ ತತ್ತ್ವಾಭಿಮಾನಿಗಳು ಆದ ಶರಣ ಹೆಚ್. ಎಂ. ಮರಿಸ್ವಾಮಿಯವರು ತಾ|| ೧೭-೫-೭೮ರಂದು ಗ್ರಾಮಸ್ಥರ ಪರವಾಗಿ ಸ್ವಾಗತಿಸಿ, ಗ್ರಾಮದ ಜನತೆಗೆ ಪ್ರವಚನದ ಪ್ರಸಾದ ಲಭ್ಯವಾಗುವಂತೆ ಮಾಡಿ, ಪೂಜ್ಯ ಮಾತಾಜಿಯವರಿಗೆ ತಮ್ಮ ಪರವಾಗಿ ವಿದ್ಯಾಲಯಕ್ಕಾಗಿ ನಿಧಿಯನ್ನು ಸಲ್ಲಿಸಿದರು.

ಚಂದಕವಾಡಿ : ಇಲ್ಲಿಯ ಮಲ್ಲನ ಮೂಲೆ ಮಠದ ಶಿಷ್ಯ ಪರಂಪರೆಯ ಶ್ರೀ ಬಸಪ್ಪ ಸ್ವಾಮಿಗಳು ತಾ|| ೧೮-೫-೭೮ರಂದು ಸ್ವಾಗತಿಸಿ, ಪ್ರವಚನ ಏರ್ಪಡಿಸಿದರು. ಪುರಪ್ರಮುಖರಾದ ಚಿನ್ನಸ್ವಾಮಿ ಕಾರ್ಯಕ್ರಮವನ್ನೇರ್ಪಡಿಸಿ ಸಾಮೂಹಿಕ ನಿಧಿಯನ್ನು ಅರ್ಪಿಸಿದರು.

ಬಸವನಪುರ : ಕೋಡಿಮೊಳೆ ಮತ್ತು ಬಸವನಪುರದ ಗ್ರಾಮಸ್ಥರು ಒಂದಾಗಿ ತಾ|| ೨೦-೫-೭೮ರಂದು ಪ್ರವಚನ ಕಾರ್ಯಕ್ರಮವನ್ನೇರ್ಪಡಿಸಿ ಸ್ವಾಗತಿಸಿದರು. ಚಿನ್ನಪ್ಪನವರು ಪುರಜನರ ಪರವಾಗಿ ಸ್ವಾಗತಿಸಿ, ಕಾಣಿಕೆ ಸಲ್ಲಿಸಿದರು.

ನಂಜನಗೂಡು : ಗ್ರಾಮಾಂತರ ಪ್ರದೇಶದ ಸಂಚಾರ ತತ್ಕಾಲಕ್ಕೆ ನಿಲ್ಲಿಸಿ ಪೂಜ್ಯ ಮಾತಾಜಿಯವರು ನಂಜನಗೂಡಿಗೆ ತಾ|| ೨೧-೫-೭೮ರಂದು ಆಗಮಿಸಿದರು. ತಾ|| ೨೪-೪-೭೮ರಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು ನಂಜನಗೂಡಿಗೆ ಆಗಮಿಸಿ ಪ್ರವಚನ ಆರಂಭಿಸಿದ್ದರು. ಶರಣ ಪಿ. ಬಸವಣ್ಣನವರು ಸ್ವಾಗತ ಕೋರಿ ಪರಿಚಯ ಮಾಡಿಕೊಟ್ಟರು. ನಂಜುಂಡೇಶ್ವರನ ದಿವ್ಯ ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಪ್ರವಚನ ಸಮಾರಂಭಕ್ಕೆ ತಾ|| ೨೧-೫-೭೮ರಂದು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಗಮಿಸಿದರು. ನಗರದ ಪ್ರಮುಖರು, ಮಾಜಿ ಎಂ.ಎಲ್.ಎ.ಗಳು ಆದ ಹೆಜ್ಜಿಗೆ ಲಿಂಗಣ್ಣನವರು ಸ್ವಾಗತ ಕೋರಿದರು. ಶಾಸಕರು, ಉತ್ತಮ ವಾಗ್ಮಿಗಳೂ ಆದ ಹೆಚ್. ಗಂಗಾಧರನ್ನರು ಪೂಜ್ಯರ ಪರಿಚಯ ಮಾಡಿಕೊಟ್ಟರು. ಈ ಪ್ರವಚನ ಕಾರ್ಯಕ್ರಮವು ಜೂನ್ ನಾಲ್ಕರವರೆಗೆ ಮುಂದುವರೆಯಲಿದೆ.

ಬಸವ ಮಂಟಪದಲ್ಲಿ ಬಸವ ಜಯಂತಿ

ಪ್ರತಿವರ್ಷದಂತೆ 'ಬಸವ ಮಂಟಪ'ದಲ್ಲಿ ೯-೫-೭೮ರಂದು ಬಸವ ಜಯಂತಿ ಆಚರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಸಂಗೀತ ಶಾಸ್ತ್ರ ಕೋವಿದೆ ಶರಣೆ **ಜಿ. ಚನ್ನಮ್ಮನವರು** ಆಶ್ರಮದ ಸಾಧಕರು ವಿಶ್ವಗುರು ಬಸವಣ್ಣನವರ ಕಾರ್ಯ-ಸಾಧನೆಯ ಬಗ್ಗೆ ಮಾಡಿದ ಭಾಷಣಗಳನ್ನು ಮೆಚ್ಚಿ ವಿಶ್ವಕಲ್ಯಾಣ ಮಿಷನ್‌ನಲ್ಲಿ ಇಂತಹ ಧರ್ಮಪ್ರಚಾರಕರು ಸಿದ್ಧವಾಗುತ್ತಿರುವುದು ತುಂಬ ಸಂತೋಷವೆಂದರು.


—ವರದಿ : **ಶಿವರಾಯ ಚಂದ್ರಕಂಠಿ**

"ಬಸವ ಗಂಗೋತ್ರಿ" ವಿದ್ಯಾಲಯ ಸ್ಥಾಪನೆಗೆ ಧನಸಹಾಯ ನೀಡಿದ ಸದ್ಭಕ್ತರು

೧.	ಶರಣ ಆರ್. ಮಲ್ಲಪ್ಪನವರ ಸ್ಮರಣಾರ್ಥ, ಶರಣ ಸಿ. ಎಂ. ಶ್ರೀಕಂಠಪ್ಪ ಮತ್ತು ಶರಣ ಸಿ.ಎಂ. ಬಸವರಾಜಪ್ಪ, ಚಾಮರಾಜನಗರ ಇವರಿಂದ (ಕೊಠಡಿಗಾಗಿ)	೫೦೦೧-೦೦
೨.	ಆಲೂರಿನ ಶರಣೆ ತಾಯಮ್ಮನವರು, ಲಿಂಗೈಕ್ಯ ಪತಿ ಶಿವಪ್ಪನವರ ಸ್ಮರಣಾರ್ಥ ಕೊಡುಗೆ (ಕೊಠಡಿಗಾಗಿ)	೫೦೦೧-೦೦
೩.	ಶರಣ ಹೆಚ್.ಎಂ. ಮರಿಸ್ವಾಮಿ, ಜಮೀನ್ದಾರರು, ಹೆಬಸೂರು ಮಾತೃಶ್ರೀ ಪಾರ್ವತಮ್ಮನವರ ಸ್ಮರಣಾರ್ಥ (ಕೊಠಡಿಗಾಗಿ)	೫೦೦೧-೦೦
೪.	ಶರಣೆ ಮತ್ತು ಶರಣ ವಜ್ರನಾಭಯ್ಯ, ಚಾಮರಾಜನಗರ	೫೦೧-೦೦
೫.	ಶರಣೆ ದೇವಮ್ಮ, ರಾಮಸಮುದ್ರ, ಚಾಮರಾಜನಗರ	೧೦೧-೦೦
೬.	ಶರಣ ಆರ್.ಎಸ್. ಮುದ್ದರಾಜಣ್ಣ, ಚಾಮರಾಜನಗರ	೫೦೧-೦೦
೭.	ಶರಣೆ ಲಕ್ಷ್ಮಿದೇವಮ್ಮ ಗಂಗಾಧರಯ್ಯ, ಚಾಮರಾಜನಗರ	೫೦೧-೦೦
೮.	ಶರಣ ಎಸ್.ಕೆ. ಚಂದ್ರಶೇಖರ ಮತ್ತು ಸಹೋದರರು, ಚಾಮರಾಜನಗರ	೫೦೧-೦೦
೯.	ಶರಣರಾದ ಪಟೇಲ್ ಮಹಾದೇವಪ್ಪ, ರಾಮಸಮುದ್ರ	೨೫೧-೦೦
೧೦.	ಶರಣ ಪಟೇಲ್ ಮಲ್ಲಪ್ಪನವರ ಸ್ಮರಣಾರ್ಥ ಕಾಳನಹುಂಡಿಯ ಶರಣರುಗಳಾದ ಶಿವನಂಜಪ್ಪ, ಚಂದ್ರಶೇಖರಪ್ಪ, ರಾಮಣ್ಣ ಮತ್ತು ಶಿವಣ್ಣನವರಿಂದ (ಕೊಠಡಿಗಾಗಿ)	೫೦೦೧-೦೦

ವಿಶ್ವಕಲ್ಯಾಣ ಮಿಷನ್ನಿನ
ಮಯಿಧಾನ ಸುಗ್ರಂಥ ಮಾಲೆಯ ಲಭ್ಯವಿರುವ ಗ್ರಂಥಗಳು

			ರೂ.	ಪೈ.
೧.	ದೇವಪೂಜಾ ವಿಧಾನ	ಸ್ವಾಮಿ ಲಿಂಗಾನಂದ	೨	೫೦
೨.	ವಿರಹ ತರಂಗ	ಮಾತೆ ಮಹಾದೇವಿ	೩	೦೦
೩.	ಬಸವ ತತ್ತ್ವ ದರ್ಶನ	"	೧೮	೦೦
೪.	ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೬	೦೦
೫.	ಸಾಮೂಹಿಕ ಪ್ರಾರ್ಥನೆ	ಸಂ: ಮಾತೆ ಮಹಾದೇವಿ	೦	೫೦
೬.	ಹಿಂದು ಯಾರು ?	,,	೦	೫೦
೭.	ಬಸವ ವಚನ ಸುಧಾ	ಸಂ: ಮಾತೆ ಮಹಾದೇವಿ	೨	೦೦
೮.	ವಚನಾಮೃತ	ಸ್ವಾಮಿ ಲಿಂಗಾನಂದ	೨	೦೦
೯.	ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	೩	೫೦
೧೦.	ದೇವರಮಕ್ಕಳು	"	೨	೫೦
೧೧.	ಪತಿತೋದ್ಧಾರಕ	,,	೧	೫೦
೧೨.	ಲಿಂಗಾಯತ ಧರ್ಮ ಕೈಪಿಡಿ	"	೨	೫೦
೧೩.	ಲಿಂಗಾಯತ ಧರ್ಮ ಸಂಸ್ಥಾಪಕರಾರು?	ಬಿ. ಸಿ. ಜವಳಿ	೪	೦೦
೧೪.	ಬಸವಣ್ಣನವರ ವಚನ ಪದ ಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦	೦೦
೧೫.	ದೇವನಡೆಗೆ	ಮಾತೆ ಮಹಾದೇವಿ	೧	೦೦
೧೬.	ಹೆಪ್ಪಿಟ್ಟ ಹಾಲು (ಸಾ. ಕಾದಂಬರಿ)	,,	೧೬	೦೦
೧೭.	Revolution in Kalyana	Mate Mahadevi	೫	೦೦
೧೮.	A Guide to Lingayatism	,,	೬	೦೦
೧೯.	Emblem of God	Swami Lingananda	೬	೦೦
೨೦.	ಅಧ್ಯಾತ್ಮ ಮತ್ತು ಮಹಿಳೆ	ಮಾತೆ ಮಹಾದೇವಿ	೧	೦೦
೨೧.	ತರಂಗಿಣಿ (ಅಕ್ಕಮಹಾದೇವಿಯ ಕಾದಂಬರಿ)	,,	೩೩	೦೦
೨೨.	ವಿಶ್ವ ವಿಭೂತಿ ಬಸವಣ್ಣ	,,	೪	೦೦
೨೩.	Lingayatsim	,,	೩	೦೦
೨೪.	ವಿಶ್ವಕಲ್ಯಾಣ ಗೀತೆ	ಸಂ : ,,	೩	೦೦
೨೫.	ಮಾತೃ ಹರಕೆ	,,	೬	೦೦
೨೬.	Mataji A Profile		೦	೫೦
೨೭.	ವಿಶ್ವಕಲ್ಯಾಣ ಮಿರ್ಷ ಪರಿಚಯ	ಶಿವರಾಯ ಚಂದ್ರಕಂಠಿ	೦	೫೦
೨೮.	ಧರ್ಮಕ್ರಾಂತಿಯ ದಿವ್ಯಜ್ಯೋತಿ	ಗೊ. ರು. ಚ.	೦	೫೦
	ಬಸವಣ್ಣ, ಅಕ್ಕಮಹಾದೇವಿ, ಗುರೂಜಿ, ಮಾತಾಜಿಯವರ ಭಾವಚಿತ್ರಗಳು ಪ್ರತಿಯೊಂದಕ್ಕೆ		೧	೫೦
	ಲಿಂಗಾಯತ ಯಾರು? (ಚಾರ್ಟ್) (೦-೨೫) ವಿಶ್ವ ವಿಭೂತಿ ಬಸವಣ್ಣ (ಚಾರ್ಟ್)		೦	೫೦



ಚಾಮರಾಜನಗರದಲ್ಲಿ ಪೂಜ್ಯ ಮಾತಾಜಿಯವರು ದಿ. ೨೩-೪-೭೮ರಂದು ಪ್ರವಚನ ಮಾಡಲು ಆಗಮಿಸಿದಾಗ

Correspond to : Phone : 82335

BASAVA MANTAPA

No. 24, Chord Road, II Block, Rajajinagar

Bangalore-560010